# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ - 2014

**ದಸರಾ ವಿಶೇಷ**



# ಅಪರಂಜಿ

ತಿಳಿನಗೆಯ ಕಾರಂಜಿ








**ಸಂಪುಟ 32**

**ಸಂಚಿಕೆ – 1**

**ಅಕ್ಟೋಬರ್ - 2014**



**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ


## *ಈ ಸಂಚಿಕೆಯಲ್ಲಿ.....*

**ದಸರಾ ವಿಶೇಷ**


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನೋವಿಕೋವ್..... | **ವತ್ಸನ** | 3 |
| ಅರಮನೆ ವಿಶೇಷಗಳು | **ಬೇಲೂರು ರಾಮಮೂರ್ತಿ** | 8 |
| ಮೈಸೂರುಪಾಕ್‌ನ..... | **ಆರತಿ ಘಟಿಕಾರ್** | 13 |
| ಕೊರವಂಜಿ ಪದಬಂಧ | **ವಿದ್ಯಾ ವಿ. ಹಾಲಭಾವಿ** | 16 |
| ಉಚಿತದ ಮಹಾತ್ಮೆ | **ಸು. ವಿಜಯಲಕ್ಷ್ಮಿ** | 17 |
| ತುಂತುರು | **ದಂನಾಆ** | 19 |
| ಗೌರವ ಡಾಕ್ಟೊರೇಟ್ | **ಸಿ.ಆರ್. ಸತ್ಯ** | 22 |
| ನಾಯಿ ಪಾಡು | **ಗುಂಡುರಾವ್ ದೇಸಾಯಿ** | 25 |
| ಕೊನೆಯ ಜರ್ನಿ | **ರಮ್ಯ** | 29 |
| ಬಾಪೂಜಿ ಮತ್ತು.... | **ಎಚ್. ಶಾಂತರಾಜ ಐತಾಳ** | 32 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 36 |
| ಶುದ್ಧ ಅಸುದ್ದಿ | **ಎಚ್ಚೆನ್ಎ** | 39 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**


*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

# ಅಪರಂಜಿ ಕಿಡಿ

● **ಪ್ರಕಾಶ್**



ಬ್ಯಾಂಕ್ ಜವಾನನ ಬಳಿ 3 ಕೋಟಿ ಆಸ್ತಿ! – ಮಧ್ಯ ಪ್ರದೇಶದ ಸುದ್ದಿ

***• ಆ ಬ್ಯಾಂಕ್ ಯಾವುದೋ 'ಸಹಕಾರ' ಬ್ಯಾಂಕ್ ಅಂತೆ !!***

★★★

ಬರೀ ಭಾಷಣ, ಸಾಧನೆ ಅತ್ಯಲ್ಪ – ಕಾಂಗ್ರೆಸ್ ವಕ್ತಾರ

***• ತಾವು ಮಾಡಿದ್ದೇನು ಸ್ವಾಮಿ ?!***

★★★

'ಜಪಾನ್ ಹೂಡಿಕೆದಾರರಿಗೆ ಮೋದಿ ರತ್ನಗಂಬಳಿ' – ಸುದ್ದಿ

***• ರೆಡ್ ಕಾರ್ಪೆಟ್ ಅನ್ನುವಂತಿಲ್ಲ !!***

★★★

12 ಮಂದಿಗೆ ಸುಳ್ಳು ಪತ್ತೆ ಪರೀಕ್ಷೆ – ಸುದ್ದಿ

***• 'ನಿಜ' ಪತ್ತೆಯಾಗಿದ್ದರೆ ಚೆನ್ನಾಗಿತ್ತು !!***

★★★

ಶಾಲೆ ಇಷ್ಟವಾಗುತ್ತಿರಲಿಲ್ಲ – ಕರೀನಾ ಕಪೂರ್

***• ಹಾಗೇ ಕಾಣುತ್ತೆ !!***

★★★

ಬಿ.ಸಿ.ಸಿ.ಐ. ಮುಗಿಯದ ಗೊಂದಲ – ಪತ್ರಿಕೆ

***• ಆಟದಷ್ಟೇ ಕುತೂಹಲಕಾರಿ !!***

★★★

'ಪೋಲೀಸರಿಗೆ ಟೇಬಲ್ ಕೆಳಗಿನ ವ್ಯವಹಾರದಲ್ಲೇ ಆಸಕ್ತಿ'
– ನ್ಯಾಯಾಲಯ

***• ಗಾಜಿನ ಟೇಬಲ್‌ಗಳನ್ನೇ ಬಳಸಬಹುದಲ್ಲ !!***

★★★

'ಗಂಗೆಯ ಶುದ್ಧಿಗೆ ಸುಪ್ರೀಂ ತಾಕೀತು' – ಸುದ್ದಿ

***• ಗಂಗಾಮಾತೆ ಬೆಚ್ಚಿ ಬಿದ್ದಳಂತೆ !!***

★★★

ವೈದ್ಯ ಸೀಟು ಹಗರಣ; ತನಿಖೆ – ಪತ್ರಿಕೆ

***• ವೈದ್ಯೋ ನಾರಾಯಣೋ ಸಿರಿಃ !!***

★★★

ನಾವು ಸಕ್ರಿಯ ವಿರೋಧ ಪಕ್ಷವನ್ನು ನೋಡುತ್ತಿಲ್ಲ – ದಿನಪತ್ರಿಕೆ ಅಂಕಣ

***• ಇದ್ದರಲ್ಲವೆ ನೋಡುಕ್ಕೆ !?!***

★★★



# ನೋವಿಕೋವ್ ಕಂಜೆಕ್ಚರ್ ಪ್ರಸಂಗ

- ವತ್ಸನ

ಇಂಡಿಯಾ ಕ್ರಿಕೆಟಿಗರು ಇಂಗ್ಲೆಂಡಿನ ವಿರುದ್ಧ ಒನ್‌ಡೇ ಓಡಿಐನ ನಾಲ್ಕನೆಯ ಮ್ಯಾಚಿನಲ್ಲಿ ಗೆದ್ದು ಸರಣಿಯನ್ನೇ ಗೆದ್ದಿದ್ದು ನಿಮಗೆ ನೆನಪಿರಬಹುದು. ಆ ಸಂಜೆ ಶರಲೇಖನೊಂದಿಗೆ ನಾನು ನಮ್ಮ ಫ್ಲಾಟಿನಲ್ಲಿ ಕುಳಿತು ಮ್ಯಾಚನ್ನು ನೋಡುತ್ತಿದ್ದೆ. ಸರೋಜಮ್ಮ ಒಂದು ಬೋಗುಣಿಯಲ್ಲಿ ಈರುಳ್ಳಿ ಪಕೋಡ ತಂದು ನಮ್ಮ ಮುಂದೆ ಇಟ್ಟು ಹೋದರು. ಶರಲೇಖ ಸುಮ್ಮನಿರಲಾರದೆ, ''ಸರೋಜಮ್ಮಾ, ಸುಮ್ನೆ ಯಾಕೆ ಈ ಎಣ್ಣೆ ತಿಂಡಿಗಳನ್ನೆಲ್ಲಾ ಮಾಡ್ತೀರಾ ಆರೋಗ್ಯ ಕೆಡುಲ್ವೆ?'' ಅಂತ ಸ್ವಲ್ಪ ಜೋರಾಗಿಯೇ ಹೇಳಿದ. ಆಕೆ ಅನಾಮತ್ತಾಗಿ ಒಳಗೆ ಬಂದು, ''ಕ್ಷಮ್ಸಿ , ಮ್ಯಾಚು ನೋಡುವಾಗ ಕುರುಕಲು ತಿಂಡಿ ಚೆನ್ನಾಗಿರುತ್ತೆ ಅಂತ ಮಾಡಿದೆ. ಬೇಡ ಅಂದ್ರೆ ಪಕ್ಕದ ಫ್ಲಾಟಿನ ವನಜಕ್ಕನಿಗೆ ಕೊಟ್ಟು ಬಿಡ್ತೇನೆ. ಆಕೆಗೆ ಪಕೋಡಾಂದ್ರೆ ಪ್ರಾಣ'' ಅಂತ ಹೇಳುತ್ತಾ ಬೋಗುಣಿಯ ಹತ್ತಿರ ಬಂದರು. ನಾನು ತಕ್ಷಣ, ''ಬೇಡ, ಬೇಡ, ಇವತ್ತು ಇದು ಇಲ್ಲಿರಲಿ. ಮುಂದೆ ಮಾಡದಿದ್ರೆ ಆಯಿತು'' ಅಂತ ಹೇಳಿ ಆಗಬಹುದಾಗಿದ್ದ ಅವಘಢವನ್ನು ತಪ್ಪಿಸಿದೆ.

ಒಮ್ಮೆಲೇ ನಮ್ಮ ಟಿ.ವಿ. ಮುಂದೆ ಇದ್ದ ರತ್ನಗಂಬಳಿಯ ಮೇಲೆ ಒಂದು ಕೆಂಪು ಬಣ್ಣದ ಉಂಗುರವೊಂದು ಕಾಣಿಸಿಕೊಂಡಿತು. ಸುಮಾರು ಮೂರು ಅಡಿ ಅಳತೆಯ (ಹುಲಾ ಹೂಪ್ ಥರವಿದ್ದ) ಈ ಉಂಗುರ ನಾವು ನೋಡುತ್ತಿದ್ದ ಹಾಗೆಯೇ ಸುಮಾರು ಆರು ಅಡಿಯಷ್ಟು ಮೇಲಕ್ಕೆದ್ದು ನಿಂತಿತು. ಉಂಗುರದ ಕೆಳಗಿನ ಭಾಗದಲ್ಲಿ ತೆಳುವಾದ ಮಂಜಿನಂತಹ ಕಂಭವೊಂದು ಸೃಷ್ಟಿಯಾಗಿತ್ತು. ಈ ಮಂಜಿನ ಕಂಭದ ಮೂಲಕ ನಮ್ಮ ಟಿ.ವಿ. ಪರದೆ ಅಸ್ಪಷ್ಟವಾಗಿ ಕಾಣುತ್ತಿತ್ತು. ನನಗೆ ಸಹಜವಾಗಿಯೇ ಗಾಬರಿ. ''ಶರಲೇಖ ಏನಿದು? ಏನಾಗ್ತಾ ಇದೆ?'' ಅಂತ ಗಲಿಬಿಲಿಯಿಂದ ಕೇಳಿದೆ. ಶರಲೇಖ ಏನೂ ಮಾತನಾಡದೇ ಆ ಮಂಜಿನ ಕಂಭವನ್ನೇ ತದೇಕ ದೃಷ್ಟಿಯಿಂದ ನಿಟ್ಟಿಸುತ್ತಿದ್ದ. ಒಮ್ಮೆಲೇ ನರಸಿಂಹ ಕಂಭದಿಂದ ಪ್ರತ್ಯಕ್ಷವಾದಂತೆ ಈ ಮಂಜಿನ ಕಂಭದಿಂದ ಒಬ್ಬ ವ್ಯಕ್ತಿ ಹೊರಕ್ಕೆ ಬಂದ. ನೀಲಿ ಜೀನ್ಸ್ ಹಳದಿ ಟೀ ಷರ್ಟ್ ಧರಿಸಿದ್ದ ಆತ ಹೊರಕ್ಕೆ ಬಂದು ನಿಲ್ಲುಕ್ಕಿಲ್ಲ, ಈ ಕೆಂಪು ಉಂಗುರ ಸರ್ರನೆ ಕೆಳಕ್ಕಿಳಿದು ನೆಲದ ಮಟ್ಟಕ್ಕೆ ಬಂದು ಅನಂತರ ವ್ಯಾಸದಲ್ಲಿ ಕುಗ್ಗಿ ಒಂದು ಸಾಧಾರಣ ಕೈಬೆರಳಿನ ಉಂಗುರದಷ್ಟಾಯಿತು. ಬಂದ ವ್ಯಕ್ತಿ ಬಹಳ ಸಾವಧಾನದಿಂದ ಕೆಳಕ್ಕೆ ಬಗ್ಗಿ ರತ್ನಗಂಬಳಿಯ ಮೇಲೆ ಕೆಂಪಗೆ ಹೊಳೆಯುತ್ತಾ ಬಿದ್ದಿದ್ದ ಉಂಗುರವನ್ನು ಎತ್ತಿ ತೆಗೆದು ತಮ್ಮ ಎಡಗೈ ತರ್ಜನಿಗೆ ತೊಡಿಸಿಕೊಂಡ. ಆಮೇಲೆ ಅಲ್ಲೇ ಖಾಲಿಯಿದ್ದ ಸೋಫಾದ ಮೇಲೆ ಕುಳಿತು, ''ಇವತ್ತು

ಸೆಪ್ಟೆಂಬರ್ ಎರಡನೇ ತಾರೀಖು ಎರಡು ಸಾವಿರದ ಹದಿನಾಲ್ಕನೆಯ ಇಸವಿ ತಾನೇ ಶರಲೇಖ ಅವರೇ?'' ಅಂತ ಬಹು ಸೌಜನ್ಯದ ದನಿಯಲ್ಲಿ ಕೇಳಿದ. ಶರಲೇಖ, ''ನೀವು ಯಾವ ಇಸವಿಯಿಂದ ಪ್ರಯಾಣ ಮಾಡಿ ಇಲ್ಲಿಗೆ ಬಂದಿರಿ ಎಂಬುದನ್ನು ಮೊದಲು ತಿಳಿಸಿದರೆ ಮಿಕ್ಕ ಎಲ್ಲ ವಿಷಯಗಳನ್ನು ಆನಂತರ ಮಾತನಾಡಬಹುದು. ಹೌದು ಇಂದು ಸೆಪ್ಟೆಂಬರ್ ಎರಡು. ಅಂದಹಾಗೆ ನಿಮ್ಮ ಬೆರಳನ್ನು ಅಲಂಕರಿಸಿರುವ ಆ ಕೆಂಪು ಉಂಗುರ ವರ್ಮ್‌ಹೋಲ್ ಎಂಬ ನನ್ನ ಗುಮಾನಿ ಸರಿತಾನೆ?'' ಅಂತ ಬಂದ ಆಗಂತುಕನಿಗೆ ಮರುಪ್ರಶ್ನೆ ಹಾಕಿದ.

ಆಗಂತುಕ ಒಂದು ಕ್ಷಣ ದಂಗಾದ. ಆಮೇಲೆ ಸಾವರಿಸಿಕೊಂಡು, ''ನಾನು ವರ್ಮ್‌ಹೋಲ್ ಬಳಸಿ ಕಾಲಯಾನಮಾಡಿ ನಿಮ್ಮ ಇಸವಿಗೆ ಬಂದಿರುವುದನ್ನು ಸರಿಯಾಗಿ ಊಹಿಸಿದರಲ್ಲಾ ಅದಕ್ಕೆ ನನ್ನ ಅಭಿನಂದನೆಗಳು. ಹೌದು, ಕೆಲವೇ ಕ್ಷಣಗಳ ಹಿಂದೆ ನಾನು ಎರಡು ಸಾವಿರದ ನಲವತ್ತನಾಲ್ಕನೆಯ ಇಸವಿಯ ಮಾರ್ಚ್ ಹದಿನೈದರ ಬೆಳಗ್ಗೆ ನನ್ನ ಪ್ರಯೋಗ ಶಾಲೆಯಲ್ಲಿದ್ದೆ. ಈ ಕೆಂಪು ಉಂಗುರದಂತೆ ಕಾಣುವ ಸಾಧನ ನಾನೇ ಕಂಡುಹಿಡಿದ ವರ್ಮ್‌ಹೋಲ್. ಅಂದಹಾಗೆ ನನ್ನ ಹೆಸರು ಕೇಶವರಾವ್. ವಯಸ್ಸು ಐವತ್ತೈದು. ಇದೇ ಬೆಂಗಳೂರಿನ ನಿವಾಸಿ. ವೃತ್ತಿಯಲ್ಲಿ ಭೌತ ವಿಜ್ಞಾನಿ. ಈ ವರ್ಮ್‌ಹೋಲ್ ನಿರ್ಮಿಸಿದ ನಂತರ ಇದೇ ನನ್ನ ಪ್ರಥಮ ಕಾಲಯಾನ ಪಯಣ'' ಅಂತ ಚಿಕ್ಕದಾಗಿ ಚೊಕ್ಕವಾಗಿ ತಮ್ಮ ವೃತ್ತಾಂತವನ್ನು ಅರುಹಿದರು ಕೇಶವರಾವ್.

ಶರಲೇಖ ವಿಸ್ಮಯಗೊಳ್ಳಲಿಲ್ಲ. ''ಹೌದು ವರ್ಮ್‌ಹೋಲ್‌ಗಳನ್ನು ಬಳಸಿ ಕಾಲಯಾನ ಸಾಧ್ಯ ಅಂತ ಓದಿದ್ದೆ. ಕೇವಲ ಮೂವತ್ತು ವರ್ಷಗಳಲ್ಲಿ ನಮ್ಮ ಭಾರತೀಯ ವಿಜ್ಞಾನಿಯೊಬ್ಬರು ಅದನ್ನ ನಿರ್ಮಿಸುವುದರಲ್ಲಿ ಯಶಸ್ವಿ ಆಗ್ತಾರೆ ಅಂತ ಊಹಿಸಿರಲಿಲ್ಲ. ಆದರೆ ಒಂದು ಪ್ರಶ್ನೆ, ಕಾಲಯಾನ ಯಂತ್ರಾನ ಪರೀಕ್ಷೆ ಮಾಡುಕ್ಕೆ ಈ ನಮ್ಮ ಇಸವಿ, ಈ ನಮ್ಮ ಫ್ಲಾಟಿನ ಭೇಟಿನ ಯಾಕೆ ಆರಿಸಿದ್ರಿ? ಯಾಜ್ಞವಲ್ಕ್ಯನ ಕಾಲಕ್ಕೋ, ಸಾಕ್ರಟೀಸನ ಕಾಲಕ್ಕೋ ಯಾಕೆ ಪ್ರಯಾಣ ಮಾಡಲಿಲ್ಲ?'' ಅಂತ ಶರಲೇಖ ಅವರನ್ನ ಕೇಳಿದ.

ಕೇಶವರಾವ್ ಶರಲೇಖನ ಪ್ರಶ್ನೆಯನ್ನು ಉತ್ತರಿಸಲು ಮುಂದಾದರು. ''ಇದೊಂದು ಬಹಳ ಖಾಸಗೀ ವಿಷಯ. ನಾನು ನಿಮ್ಮ ಈ ಕಾಲದಲ್ಲಿದ್ದಾಗ ನನಗೆ ಇಪ್ಪತ್ತೈದು ವಯಸ್ಸು. ಇನ್ನೂ ಮದುವೆ ಆಗಿರಲಿಲ್ಲ. ಇದೇ ಇಸವಿ ಅಕ್ಟೋಬರ್ ಹತ್ತರಂದು ನನಗೆ ಮದುವೆ ಆಯಿತು. ಆಗಿನಿಂದ ಕಳೆದ ಮೂವತ್ತು ವರ್ಷಗಳಿಂದಲೂ ಮನೆಯಲ್ಲಿ ಸಾಮರಸ್ಯ ಇಲ್ಲ. 'ನಿಮ್ಮಪ್ಪ ಮದುವೆಗೆ ಒಪ್ಪಿ ಬರೆದ ಕಾಗದ ನಮ್ಮಪ್ಪನಿಗೆ ತಲುಪೋದು ಒಂದು ದಿನ ತಡ ಆಗಿದ್ದರೆ ಬೇರೆ ಒಬ್ಬ ಯಶಸ್ವಿ ಉದ್ಯಮಿಯನ್ನು ಮದುವೆಯಾಗಿ ಸುಖವಾಗಿರ್ತಿದ್ದೆ ಎಲ್ಲಾ ನನ್ನ ಹಣೇಬರಹ' ಅಂತ ನನ್ನ ಪತ್ನಿ ಯಾವಾಗಲೂ ಗೊಣಗುತ್ತಿರ್ತಾಳೆ. ನನಗೂ ಸಾಕಾಗಿ ಹೋಗಿದೆ. ಹಾಗಾಗಿ ಈ ವರ್ಮ್‌ಹೋಲ್‌ನ ಪರೀಕ್ಷೆಗೆ ಒಳಪಡಿಸುವ ಯೋಚನೆ ಬಂದಾಗ ನಿಮ್ಮ ಬಳಿ ಬಂದು ನನ್ನ ಸಂಸಾರ ತಾಪತ್ರಯಾನೆಲ್ಲಾ ಒಂದೇ ಏಟಿಗೆ ಪರಿಹರಿಸಿಕೊಳ್ಳುವ ಯೋಚನೆಯೂ ಹೊಳೀತು. ಆ ಪರಿಹಾರಕ್ಕೆ ನಿಮ್ಮ ಸಹಾಯ ಅಗತ್ಯ. ಹಾಗಾಗಿ ನಿಮ್ಮ ಬಳಿ ಬರಲು ಮನಸ್ಸು ಮಾಡಿದೆ'' ಅಂದರು ಕೇಶವರಾವ್.

''ಈ ಸೆಪ್ಟೆಂಬರ್ ಎರಡನೇ ತಾರೀಖಿಗೇ ಇಲ್ಲಿಗೆ ಬರೋದಕ್ಕೆ ಏನಾದರೂ ಕಾರಣ?'' ಶರಲೇಖ ಆತನನ್ನು ಪ್ರಶ್ನಿಸಿದ.

''ಅದಕ್ಕೊಂದು ಮುಖ್ಯ ಕಾರಣ ಇದೆ. ನಿನ್ನೆ ಬೆಳಗ್ಗೆ ನಮ್ಮಪ್ಪ ನಮ್ಮ ಮಾವನಿಗೆ ಮದುವೆಗೆ ಒಪ್ಪಿ ಕಾಗದ ಬರೆದಿರ್ತಾರೆ. ನಾಳೆ ಅದು ಅವರ ಮನೆಯ ಗೇಟಿಗೆ ಅಳವಡಿಸಿರೋ ಟಪಾಲು ಡಬ್ಬಿಯಲ್ಲಿ ಬಿದ್ದಿರುತ್ತೆ. ನಮ್ಮ ಮಾವ ಕೆಲಸದಿಂದ ಮಧ್ಯಾಹ್ನ ಮನೆಗೆ ಊಟಕ್ಕೆ ಬರುವಾಗ ಟಪಾಲು ತೆಗೆಯೋದು ವಾಡಿಕೆ. ನಾಳೆ ಹನ್ನೊಂದಕ್ಕೆ ಟಪಾಲು ಬೀಳುತ್ತೆ. ಒಂದು ಘಂಟೆಗೆ ನಮ್ಮ ಮಾವ ಆ ಕಾಗದವನ್ನು ತೆಗೆದು ನೋಡ್ತಾರೆ. ಆಗ ನನ್ನ ಭವಿಷ್ಯ ಬದಲಾಗದಂತೆ ನಿರ್ಧಾರವಾಗಿಬಿಡುತ್ತೆ. ಹನ್ನೊಂದರಿಂದ ಹನ್ನೆರಡೂವರೆಯವರೆಗೆ ನಮಗೊಂದು ವಿಂಡೋ ಆಫ್ ಆಪರ್ಚ್ಯುನಿಟಿ ಇರುತ್ತೆ. ಆಗ ನಾವು ಆ ಕಾಗದವನ್ನ ಆ ಟಪಾಲು ಡಬ್ಬಿಯಿಂದ ಕದ್ದು ನಾಶಮಾಡಿಬಿಟ್ಟರೆ, ನನ್ನ ಪತ್ನಿಗೆ ಆ ಉದ್ಯಮಿ ಗಂಡ ಸಿಕ್ಕಿ ನಾನು ಸುಖವಾಗಿರ್ತೇನೆ. ನೀವು ಖ್ಯಾತ ಪತ್ತೇದಾರರು. ನನಗೆ ಈ ಸಹಾಯವನ್ನು ಮಾಡಲಾದೀತೇ?'' ಅಂತ ಬಹು ದೈನ್ಯದಿಂದ ಕೇಶವರಾವ್ ಕೇಳಿದರು.

ಶರಲೇಖ ಎರಡು ನಿಮಿಷ ಮಾತನಾಡಲಿಲ್ಲ. ಏನನ್ನೋ ಗಾಢವಾಗಿ ಆಲೋಚಿಸುತ್ತಿದ್ದಂತೆ ಕಂಡಿತು.

ಆಮೇಲೆ ತನ್ನ ಮಾತನ್ನು ಶರಲೇಖ ಪ್ರಾರಂಭಿಸಿದ.

''ಕೇಶವರಾಯರೇ, ನೋವಿಕೋವ್ ಕಂಜೆಕ್ಚರ್ ಅಂತ ಕೇಳಿದ್ದೀರಾ?''

ನನಗೆ ಶರಲೇಖನಿಗೆ ಇಷ್ಟೆಲ್ಲಾ ವಿಜ್ಞಾನ ತಿಳಿದಿದೆಯಲ್ಲಾ ಅಂತ ಹೆಮ್ಮೆ ಮೂಡಿತು.

ಕೇಶವರಾಯರ ಮುಖ ಕಳೆಗುಂದಿತು. ''ಕೇಳಿದ್ದೇನೆ, ಆದರೆ ಅದು ಕೇವಲ ಕಂಜೆಕ್ಚರ್. ಅದು ಸತ್ಯ ಎಂಬುದಕ್ಕೆ ಯಾವ ಪುರಾವೆಯೂ ಇಲ್ಲ'' ಅಂತ ಹೇಳಿದರು.

ನನಗೆ ತಡೆಯಲಾಗಲಿಲ್ಲ. ''ಏನಿದು ನೋವಿಕೋವ್ ಕಂಜೆಕ್ಚರ್?'' ಅಂತ ಕೇಳಿಯೇ ಬಿಟ್ಟೆ

ಕೇಶವರಾಯರೇ ಉತ್ತರಿಸಲು ಮುಂದಾದರು.

''ನೋವಿಕೋವ್ ಎಂಬ ರಷ್ಯನ್ ವಿಜ್ಞಾನಿಯ ಅಭಿಪ್ರಾಯದಲ್ಲಿ, ಕಾಲಯಾನ ಸಾಧ್ಯವಾದರೂ ಅದನ್ನು ಉಪಯೋಗಿಸಿಕೊಂಡು ಚರಿತ್ರೆಯನ್ನು ಬದಲಿಸುವುದು ಅಸಾಧ್ಯ. ಈಗ ನಾನು ನಿಮ್ಮ ಕಾಲಕ್ಕೆ ಬಂದಿದ್ದರೂ ನನ್ನ ಭವಿಷ್ಯವನ್ನು ಬದಲಿಸುವ ಯಾವುದೇ ಕೆಲಸವನ್ನು ಕೈಗೊಂಡರೆ ಅದು ವಿಫಲವಾಗುತ್ತದೆ ಅಂತ ನೋವಿಕೋವ್ ಕಂಜೆಕ್ಚರ್ ಹೇಳುತ್ತದೆ. ನನ್ನದು ವೈಜ್ಞಾನಿಕ ಮನೋಭಾವ. ನಮ್ಮಪ್ಪ ನಮ್ಮ ಮಾವನಿಗೆ ಬರೆದ ಕಾಗದವನ್ನ ಇಂಟರ್‌ಸೆಪ್ಟ್ ಮಾಡುಕ್ಕೆ ಪ್ರಯತ್ನವನ್ನಂತೂ ಮಾಡೋಣ. ಅದು ವಿಫಲವಾದರೆ ನೋವಿಕೋವನ ಸಿದ್ಧಾಂತಕ್ಕಾದರೂ ಒಂದು ಪುರಾವೆ ಸಿಕ್ಕಂತಾಗುತ್ತದೆ'' ಅಂತ ಕೇಶವರಾವ್ ಹೇಳಿದರು.

ಶರಲೇಖ ''ಆಯಿತು, ನಾಳೆ ನಿಮ್ಮ ಮಾವನ ಮನೆಗೆ ಹೋಗಿ ನಿಮ್ಮಪ್ಪ ಬರೆದ ಪತ್ರವನ್ನ ಹಿಂತಿರುಗಿ ಪಡೆಯೋಣ. ಎಲ್ಲಿದೆ ನಿಮ್ಮ ಮಾವನವರ ಮನೆ?'' ಅಂತ ಕೇಳಿದ.

''ಬಸವನಗುಡಿಯಲ್ಲಿನ ಬಾಂದುನವರ ಬೀದಿಯಲ್ಲಿನ ಮೂರನೆಯ ಮನೆ. ಭವ್ಯವಾದ ಮೂರಂತಸ್ತಿನ ಕಟ್ಟಡ ಅದು. ನನ್ನ ಮದುವೆ ಅಲ್ಲೇ ಆದದ್ದು. ಅಕ್ಟೋಬರ್ ಹತ್ತನೇ ತಾರೀಖು, ಎರಡುಸಾವಿರದ ಹದಿನಾಲ್ಕು. ಆ ಕರಾಳ ದಿನ ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದಂತಿದೆ'' ಅಂತ ಹಲುಬಿದರು ಕೇಶವರಾವ್.

ಶರಲೇಖ ಇನ್ನು ಮಾತು ಬೆಳೆಸಲಿಲ್ಲ. ''ಕಾಲಯಾನದಿಂದ ನಿಮ್ಮ ಮನಸ್ಸಿಗೆ ಸಾಕಷ್ಟು ಆತಂಕವಾಗಿರಲಿಕ್ಕೆ ಸಾಕು. ಈಗ ನಮ್ಮ ಅತಿಥಿಗಳ ಕೋಣೆಯಲ್ಲಿ ವಿರಮಿಸಿ. ಏನಾದರೂ ಬೇಕಾದರೆ ವತ್ಸನ ಸಹಾಯ ಮಾಡುತ್ತಾನೆ. ನನಗೆ ಸ್ವಲ್ಪ ಕೆಲಸವಿದೆ. ನಾಳೆ ನೋಡೋಣ'' ಅಂತ ಶರಲೇಖ ಅವರಿಗೆ ವಿದಾಯ ಹೇಳಿದ ನಂತರ ನಾನು ಕೇಶವರಾಯರನ್ನು ಅವರ ಕೋಣೆಗೆ ಕರೆದೊಯ್ದೆ.

ಮಾರನೆಯ ಬೆಳಗ್ಗೆ ಹನ್ನೊಂದಕ್ಕೆ ಸರಿಯಾಗಿ ನಾವು ಬಸವನಗುಡಿಯ ಬಾಂದುನವರ ಬೀದಿಯಲ್ಲಿದ್ದೆವು. ಮೂರನೆಯ ಮನೆ, ಮನೆ ಅಳಿಯ ಹೇಳಿದಂತೆ ಭವ್ಯವಾಗಿಯೇ ಇತ್ತು. ಕೇಶವರಾವ್ ಹತ್ತಿರದಲ್ಲೇ ಇದ್ದ ದರ್ಶಿನಿಯಲ್ಲಿ ಮರೆಯಾಗಿ ನಿಂತಿದ್ದರು. ಯಾರಾದರೂ ನೋಡಿಬಿಟ್ಟರೆ ಎಂಬ ಆತಂಕ ಅವರಿಗೆ. ಶರಲೇಖ ಮತ್ತು ನಾನು ಮನೆಯ ಮುಂದೆ ಆಚೆ ಬದಿಯ ಫುಟ್‌ಪಾತಿನಲ್ಲಿ ನಿಂತೆವು. ಹನ್ನೊಂದೂ ಕಾಲಿಗೆ ಸರಿಯಾಗಿ ಅಂಚೆ ಪೇದೆ ಸೈಕಲ್ಲಿನಲ್ಲಿ ಬಂದ. ಶರಲೇಖ ಸರಕ್ಕನೆ ಮುನ್ನುಗ್ಗಿ ಮಾವನವರ ಮನೆಯ ಗೇಟನ್ನು ತೆರೆಯುತ್ತಾ ಒಳಗೆ ಕಾಲಿಟ್ಟು, ಅಂಚೆ ಪೇದೆಯನ್ನು ಕುರಿತು ''ಏನಣ್ಣಾ, ಇವತ್ತೇನು ಪೋಸ್ಟ್ ಬಂದಿದೆ?'' ಅಂತ ಮನೆಯವರಂತೆಯೇ ಅಧಿಕಾರ ವಾಣಿಯಲ್ಲಿ ಕೇಳಿದ. ಪೇದೆ ಶರಲೇಖನ ಕೈಗೆ ಮೂರು ಕಾಗದಗಳನ್ನು ಕೊಟ್ಟು ಹೊರಟು ಹೋದ. ಆ ಮೂರೂ ಕಾಗದಗಳನ್ನು ತೆಗೆದುಕೊಂಡು ನಾವು ದರ್ಶಿನಿಯ ಬಳಿ ತೆರಳಿದೆವು. ಎಲ್ಲವನ್ನು ಗಮನಿಸುತ್ತಿದ್ದ ಕೇಶವರಾವ್ ಬಹು ಸಡಗರದಿಂದ ಮುಂದೆ ಬಂದು, ''ವಾಹ್ ವೊಂಡರ್‌ಫುಲ್! ಎಷ್ಟು ಸುಲಭವಾಗಿ ಕಾಗದಗಳನ್ನು ಗಿಟ್ಟಿಸಿದಿರಿ'' ಎಂದು ಪ್ರಶಂಸಿಸಿ, ಶರಲೇಖ ಕೊಟ್ಟ ಮೂರು ಕಾಗದಗಳನ್ನು ಪರಿಶೀಲಿಸಿದ. ಆನಂತರ ಆತ ತಿಳಿ ಹಸಿರಿನ ಲಕೋಟೆಯನ್ನು ಕೈಯ್ಯಲ್ಲಿ ಎತ್ತಿ ಹಿಡಿದು ''ಇದು ನಮ್ಮಪ್ಪ ಬರೆದದ್ದು. ಫ್ರಂ ಅಡ್ರೆಸ್ಸು ನಮ್ಮದೇ. ಮಿಕ್ಕ ಎರಡು ಕಾಗದಗಳನ್ನು ದಯವಿಟ್ಟು ಅಂಚೆ ಪೆಟ್ಟಿಗೆಯಲ್ಲೇ ಹಾಕಿಬಿಡಿ'' ಅಂತ ಹೇಳುತ್ತಾ ಅವನ್ನು ಶರಲೇಖನಿಗೆ ಹಿಂತಿರುಗಿಸಿದರು. ಆ ಕ್ಷಣದಲ್ಲಿ ಅಲ್ಲೇ ಮುಂದಿನ ಮೋರಿಯಲ್ಲಿದ್ದ ವಡೆಯ ಚೂರೊಂದನ್ನು ಕುಕ್ಕುತ್ತಿದ್ದ ಕಾಗೆಯೊಂದು ಹಾರಿಬಂದು ಕೇಶವರಾವ್ ಎತ್ತಿ ಹಿಡಿದಿದ್ದ ಹಸಿರು ಲಕೋಟೆಯನ್ನು ಕಚ್ಚಿಕೊಂಡು ಹಾರಿಹೋಯಿತು. ಅದು ಹಾರುವ ಟ್ರಾಜೆಕ್ಟರಿಯನ್ನು ನಾವೆಲ್ಲಾ ಬಹು ಕಾತರತೆಯಿಂದ ನೋಡಿದೆವು. ಕಾಗೆ ಮೂರಂತಸ್ತಿನ ಮನೆಯ ಮೊದಲನೆಯ ಮಹಡಿಯ ಬಾಲ್ಕನಿಯ ಕಟಕಟೆಯ ಮೇಲೆ ಕುಳಿತು ಕಾಗದವನ್ನು ಕುಕ್ಕಲು ಪ್ರಯತ್ನಿಸಿತು. ಕಾಗದ ಜಾರಿ ಬಾಲ್ಕನಿಯಲ್ಲಿ ಬಿತ್ತು. ಕಾಗೆ ಹಾರಿಹೋಯಿತು.

ಕೇಶವ ರಾವ್ ವಿಚಲಿತರಾಗಲಿಲ್ಲ. ''ನೋವಿಕೋವ್ ಕಂಜೆಕ್ಚರಿಗೆ ಒಂದು ಪುರಾವೆ ಸಿಕ್ಕಂತಾಯಿತು. ಇನ್ನು ಬರುತ್ತೇನೆ. ತಮ್ಮ ಸಹಕಾರಕ್ಕೆ ಧನ್ಯವಾದಗಳು'' ಎಂದು ಹೇಳಿ ದರ್ಶಿನಿಯಲ್ಲಿದ್ದ ''ಹ್ಯಾಂಡ್ ವಾಷ್'' ಎಂಬ ಕೋಣೆಗೆ ಹೋದರು. ''ಅವರನ್ನು ಇನ್ನು ಕಾಣುವುದು ಮೂವತ್ತು ವರ್ಷಗಳ ನಂತರವೇ. ಅಷ್ಟುಕಾಲ ನಾವು ಬದುಕಿದ್ದರೆ'' ಅಂತ ಶರಲೇಖ ನಗುತ್ತಾ ಹೇಳಿದ.

ಅಕ್ಟೋಬರ್ ಹತ್ತು ಇನ್ನೂ ಬಂದಿಲ್ಲ. ನೀವು ಬಸವನಗುಡಿಯವರಾಗಿದ್ದರೆ ಮತ್ತು ನಿಮಗೆ ನಿಜವಾದ ವೈಜ್ಞಾನಿಕ ಕುತೂಹಲವಿದ್ದಲ್ಲಿ ಅವತ್ತಿನ ದಿನ ಅಗತ್ಯವಾಗಿ ಬಾಂದುವನರ ಬೀದಿಗೆ ಹೋಗಿ. ಅಲ್ಲಿನ ಮೂರಂತಸ್ತಿನ ಸೌಧದ ಮುಂದೆ ಮದುವೆ ಚಪ್ಪರ ಹಾಕಿರುತ್ತದೆ. ಕೇಶವ ರಾವ್ ವೆಡ್ಸ್


(ಅರೆ, ಆತನ ಪತ್ನಿಯ ಹೆಸರನ್ನು ಕೇಳುವುದೇ ಮರೆತು ಹೋಯಿತು) ಅಂತ ಹೂವಿನಿಂದ ಮಾಡಿರುವ ಫಲಕ ಮನೆಯ ಮುಂದೆ ರಾರಾಜಿಸುತ್ತಿರುತ್ತದೆ. ಮೊನ್ನೆ ನಾನು ಶರಲೇಖನನ್ನು ''ಮದುವೆಗೆ ಹೋಗೋಣವೇ'' ಅಂತ ಕೇಳಿದೆ. ಆತ ''ಖಂಡಿತ ಬೇಡ. ನೋವಿಕೋವ್ ಕಂಜೆಕ್ಚರ್ ಇನ್ನೇನು ಹಾವಳಿ ಮಾಡಬಹುದೋ ಯಾರಿಗೆ ಗೊತ್ತು'' ಅಂತ ಉದ್ಗರಿಸಿದ.

---

"ಇದೇನಾ್ಸರ್, ನಿಮ್ಮ್ಮನೇ ಒಳಗೆ ಬರ್ತಿದ್ ಹಾಗೇ ಒಂಥರಾ ಮೈಯೆಲ್ಲಾ ನಡುಗುತ್ತಲ್ಲಾ . . .?"

"ಓ . . . ಅದೇ, ಬಿಡಿ. ಮೊದಲು ಹಿಂಭಾಗದಲ್ಲೊಂದು ಹಿಟ್ಟಿನ ಗಿರಣಿ ಇತ್ತು. ಈಗ ಆ ಪಕ್ಕದಲ್ಲೊಂದು ಅಕ್ಕಿ ಮಿಲ್ಲು, ಈ ಪಕ್ಕದಲ್ಲೊಂದು ಇಡ್ಲಿ ಹಿಟ್ಟು ರುಬ್ಬೋ ಮಿಶೀನು ಶುರುವಾಗಿದೆ, ಅಷ್ಟೇ . . . !!"





# ಅರಮನೆ ವಿಶೇಷಗಳು

**(ಗ್ರಂಥ ಋಣ – ಸಂಗೀತ ಸಮಯ – ಶ್ರೀ ಎಸ್. ಕೃಷ್ಣಮೂರ್ತಿ)**

**- ಬೇಲೂರು ರಾಮಮೂರ್ತಿ**

ಮೈಸೂರಿನ ಮುಮ್ಮಡಿ ಕೃಷ್ಣ ರಾಜ ಒಡೆಯರು, ನಾಲ್ವಡಿ ಕೃಷ್ಣರಾಜ ಒಡೆಯರು, ಜಯಚಾಮರಾಜ ಒಡೆಯರಾದಿಯಾಗಿ ಎಲ್ಲರೂ ಜನಾನುರಾಗೀ ಮಹಾರಾಜರು. ಅವರು ಎಷ್ಟು ಕಠಿಣರೋ ಅಷ್ಟೇ ಮೃದು ಹೃದಯದವರೂ, ಹಾಸ್ಯ ಮನೋಭಾವದವರೂ ಆಗಿದ್ದರು ಎನ್ನುವುದಕ್ಕೆ ಕೆಲವು ವಿಷಯಗಳನ್ನು ಮತ್ತೆ ನೆನಪು ಮಾಡಿಕೊಳ್ಳುವುದು ಸೂಕ್ತ.

ಒಮ್ಮೆ ಮುಮ್ಮಡಿ ಕೃಷ್ಣರಾಜ ಒಡೆಯರ ರಾಣೀವಾಸದಲ್ಲಿ ಒಬ್ಬಾಕೆಗೆ ವಿಪರೀತ ಕಾಯಿಲೆಯಾಗಿತ್ತು. ಯಾವ ವೈದ್ಯರೂ ಏನೂ ಮಾಡಲಾರದೇ ಹೋದರು. ಆಗ ಒಡೆಯರಿಗೆ ಭೀಮರಾಯರ ನೆನಪು ಮಾಡಿದರು. ಭೀಮರಾಯರು ಎಂದರೆ ಆಯುರ್ವೇದ ಪಂಡಿತರು. ಅವರು ರೋಗಿಯ ನಾಡಿಯನ್ನು ಪರೀಕ್ಷಿಸದೆ ನಾಡಿಗೆ ಕಟ್ಟಿದ ದಾರದಿಂದಲೇ ರೋಗಿಯ ಕಾಯಿಲೆಯನ್ನು ಪತ್ತೆ ಮಾಡಿ ಔಷಧಿ ಕೊಡೋಷ್ಟು ಪರಿಣಿತರು. ಅಂತಹವರನ್ನು ಅರಮನೆಗೆ ಬರಮಾಡಿಕೊಳ್ಳುವ ಪ್ರಯತ್ನ ನಡೆಯಿತು. ತೀರಾ ಸ್ವಾಭಿಮಾನಿಗಳಾಗಿದ್ದ ಭೀಮರಾಯರು ನಾವು ಅರಮನೆಗೆ ಬಂದು ರಾಜರ ಎದುರಿಗೆ ಸೊಂಟಬಗ್ಗಿಸಿ ನಿಲ್ಲೋದಿಲ್ಲ. ನಾವು ಸೊಂಟ ಬಗ್ಗಿಸಿ ನಮಸ್ಕರಿಸುವುದು ದೇವರಿಗೆ ಮಾತ್ರ. ಬೇಕಿದ್ದರೆ ರಾಜರ ಸಿಂಹಾಸನದ ಪಕ್ಕದಲ್ಲಿ ಒಂದು ಕುರ್ಚಿ ಇಟ್ಟು ಅದರಲ್ಲಿ ಒಂದು ದೇವರ ಫೋಟೋ ಇಡಿ. ನಾವು ಅದಕ್ಕೆ ನಮಸ್ಕರಿಸಿ ಚಿಕಿತ್ಸೆ ಕೊಡುತ್ತೇವೆ ಎಂದು ಹೇಳಿದ್ದರು. ಅದರಂತೆಯೇ ಭೀಮರಾಯರನ್ನು ಅರಮನೆಗೆ ಬರಮಾಡಿಕೊಳ್ಳಲಾಯಿತು. ಭೀಮರಾಜರ ಪಾಂಡಿತ್ಯವನ್ನು ಪರೀಕ್ಷಿಸಲು ಇದೇ ಸರಿಯಾದ ಕಾಲ ಅಂತ ಒಡೆಯರಿಗೆ ಅನೇಕರು ಹೇಳಿದರು.

ಭೀಮರಾಯರು ಬಂದಾಗ ಅರಮನೆಯವರೊಬ್ಬರು ಅವರಿಗೆ ರಾಣೀವಾಸದವರು ಘೋಷಾದಲ್ಲಿರುವುದರಿಂದ ಪ್ರತ್ಯಕ್ಷವಾಗಿ ಪರೀಕ್ಷಿಸಲು ಅವಕಾಶವಿಲ್ಲ. ನೀವು ಹೇಗೂ ರೋಗಿಯ ನಾಡಿಗೆ ಕಟ್ಟಿದ ದಾರದಿಂದಲೇ ರೋಗಿಯ ಪರೀಕ್ಷೆ ಮಾಡುವಷ್ಟು ಪರಿಣಿತರು ತಾನೇ. ಇಗೋ ಹಿಡೀರಿ, ಇದು ರೋಗಿಯ ನಾಡಿಗೆ ಕಟ್ಟಿದ ದಾರ. ನಿಮ್ಮ ಪರೀಕ್ಷೆ ಶುರುವಾಗಲಿ ಅಂದರು. ಭೀಮರಾಯರು ದಾರ ಕೈಲಿ ಹಿಡಿದು ಮಹಾರಾಜರ ಕಡೆ ನೋಡಿ ನಸುನಗುತ್ತಾ ಪರವಾಗಿಲ್ಲ



ನಿಮ್ಮ ರಾಣೀವಾಸದಲ್ಲಿ ಕತ್ತೆಗಳಿಗೂ ಪ್ರವೇಶ ಇದೆ ಎಂದರು. ಈ ಮಾತು ಕೇಳಿ ಮಹಾರಾಜರಾದಿಯಾಗಿ ಎಲ್ಲರೂ ಅವಾಕ್ಕಾದರು. ಏಕೆಂದರೆ ಭೀಮರಾಯರನ್ನು ಪರೀಕ್ಷಿಸಲು ಕೆಲವು ಕುಹಕಿಗಳು ಕತ್ತೆ ಕುತ್ತಿಗೆಗೆ ದಾರ ಕಟ್ಟಿ ಅದರ ಇನ್ನೊಂದು ತುದಿಯನ್ನು ಭೀಮರಾಯರ ಕೈಗೆ ಕೊಟ್ಟಿದ್ದರು. ಮಹಾರಾಜರು ನಕ್ಕು ಕ್ಷಮಿಸಿ ಅಪರಾಧವಾಯಿತು, ನಿಮಗೆ ಘೋಷಾ ನಿಯಮವಿಲ್ಲ ಒಳಗೆ ಬಂದು ರೋಗಿಯನ್ನು ಪರೀಕ್ಷಿಸಿ ಎಂದರು.

★★★★

ಉತ್ತರ ಪ್ರದೇಶದಿಂದ ಜ್ಯೋತಿಷಿಯೊಬ್ಬರು ಬಂದಿದಾರೆ ಅಂತ ತಿಳಿದ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಸುಳಿವು ಗೊತ್ತಾಗದಂತೆ ಕಂಬಳಿ ಹೊದ್ದು ಅವರ ಹತ್ತಿರ ಹೋಗಿ




ಕೈ ತೋರಿಸಿದರು. ಇವರ ಕೈ ನೋಡಿದ ಜ್ಯೋತಿಷಿ ಹಸ್ತರೇಖೆಗಳನ್ನು ಪರೀಕ್ಷಿಸಿ ದರಿದ್ರದ ಕೈ ಕಟ್ಟಿಗೆ ಮಾರಿ ಜೀವನ ಸಾಗಿಸೋ ಕೈ ಎಂದರು. ಮಹಾರಾಜರ ಜೊತೆ ಬಂದಿದ್ದವರು ನೋಡಿದಿರಾ ಪ್ರಭು ಇವರಿಗೆ ಜ್ಯೋತಿಷ್ಯ ಇಷ್ಟೂ ಬರೋಲ್ಲ ಎಲ್ಲಾ ಬೂಟಾಟಿಕೆ ಎಂದರು. ಮರುದಿನ ಕೃಷ್ಣರಾಜ ಒಡೆಯರು ಜ್ಯೋತಿಷಿಗಳನ್ನು ಅರಮನೆಗೆ ಆಹ್ವಾನಿಸಿದರು. ಆತ ಮತ್ತೊಮ್ಮೆ ಕೈ ತೋರಿಸಿದಾಗ ಜ್ಯೋತಿಷಿಗಳು ಕೈ ನೋಡಿ ತಕ್ಷಣ ಈ ಕೈಯನ್ನು ನೆನ್ನೆಯೇ ನೋಡಿದ್ದೀನಲ್ಲ ಇದು ಕಟ್ಟಿಗೆ ಮಾರಿ ಜೀವನ ನಡೆಸೋ ಕೈ ಎಂದರು. ಕೂಡಲೇ ಪರಿವಾರದಲ್ಲಿದ್ದವರು ಇವರನ್ನು ಯಾರು ಎಂದುಕೊಂಡಿದ್ದೀರಿ ಎಂದು ಕೂಗಿದರು. ಆಗ ಜ್ಯೋತಿಷಿ ಇವರು ಯಾರು ಎಂಬುದನ್ನು ತಿಳಿಸಬೇಕೇ ಹಾಗಿದ್ದರೆ ಸ್ವಲ್ಪ ಜೇನುಮೇಣವನ್ನೂ ಕೆಂಡವನ್ನೂ ತರಿಸಿಕೊಡಿ ಎಂದರು. ಎಲ್ಲರೂ ಅಚ್ಚರಿಪಟ್ಟರೂ ಮಹಾರಾಜರು ಆಜ್ಞೆ ಮಾಡಿದ ಮೇಲೆ ತರಿಸಿಕೊಟ್ಟರು. ಮೇಣ ಮತ್ತು ಕೆಂಡ ಬಂದ ಮೇಲೆ ಮೇಣವನ್ನು ಕೆಂಡದಲ್ಲಿ ಮೃದು ಮಾಡಿ ಅದರಿಂದ ರೂಪಾಯಿನಗಲಷ್ಟರ ಎರಡು ಬಿಲ್ಲೆಗಳನ್ನು ತಯಾರಿಸಿ ಮಹಾರಾಜರು ಬಾಯಿ ತೆರೆಯೋಣವಾಗಬೇಕು ಎಂದರು. ಮಹಾರಾಜರು ಬಾಯಿ ತೆಗೆದ ಮೇಲೆ ಆ ಮೇಣದ ಬಿಲ್ಲೆಗಳನ್ನು ಎರಡೂ ದವಡೆಗಳಿಗೆ ಒತ್ತಿ ಹೊರಗೆ ತೆಗೆದರು. ನೋಡಿದರೆ ಒಂದೊಂದರ ಮೇಲೂ ಒಂದೊಂದು ವಿಷ್ಣು ಚಕ್ರದ ಗುರುತು. ಜ್ಯೋತಿಷಿಗಳು ಅದನ್ನು ಮಹಾರಾಜರಿಗೆ ತೋರಿಸಿ ಪ್ರಭುಗಳು ಪರಾಂಬರಿಸಬೇಕು, ತಮ್ಮನ್ನು ಮಹಾರಾಜರನ್ನಾಗಿ ಮಾಡಿರುವುದು ಈ ವಿಷ್ಣುಚಕ್ರಗಳು, ಹಸ್ತರೇಖೆಗಳಲ್ಲ ಎಂದರು. ಮಹಾರಾಜರು ಅವರಿಗೆ ಕೈ ಮುಗಿದು ಮಹಾಪುರುಷರ ದರ್ಶನ ಲಾಭದಿಂದ ಪುನೀತರಾದೆವು ಎಂದು ಪ್ರಣಾಮ ಮಾಡಿದರು.

★★★★

ವೀಣೆ ಸಾಂಬಯ್ಯ ಎನ್ನುವವರೊಬ್ಬರು ಕೃಷ್ಣರಾಜ ಒಡೆಯರ ಆಸ್ಥಾನದ ಹಿರಿಯ ವಿದ್ವಾಂಸರು. ಮಹಾರಾಜರಿಗಿದ್ದಂತೆ ಅವರಿಗೂ ದೊಡ್ಡದಾದ ಗಿರಿಜಾ ಮೀಸೆ. ಅಭ್ಯಾಸ ಬಲದಿಂದ ಸಾಂಬಯ್ಯನವರು ಆಗಾಗ ತಮ್ಮ ಮೀಸೆಯನ್ನು ತಿರುಗಿಕೊಳ್ಳುತ್ತಿದ್ದರು. ಇದು ಮಹಾರಾಜರ ಎದುರಿಗೂ ನಡೆಯುತ್ತಿತ್ತು. ಇದರಿಂದ ಮಹಾರಾಜರಿಗೆ ಅಸಮಾಧಾನವಾಗುತ್ತಿತ್ತು. ಮಹಾರಾಜರ ಸಮೀಪವರ್ತಿಗಳು ಇದಕ್ಕೊಂದು ಪರಿಹಾರ ಸೂಚಿಸಿದರು. ಏನೆಂದರೆ ಸಾಂಬಯ್ಯ ಸಾಲಸೋಲಗಳನ್ನು ಮಾಡಿಕೊಂಡು ತುಂಬಾ ತೊಂದರೆಯಲ್ಲಿದ್ದಾರೆ. ದೊರೆಗಳು ಅವರನ್ನು ಋಣಮುಕ್ತರನ್ನಾಗಿ ಮಾಡಿದರೆ ಅವರು ನಿಮಗೆ ಕೃತಜ್ಞರಾಗಿರುತ್ತಾರೆ. ನಂತರ ಯಾವುದಾದರೊಂದು ಯಜ್ಞವನ್ನು ಮಾಡುವಂತೆ ಅವರನ್ನು ಪ್ರೇರೇಪಿಸಿದರೆ ಸಮಸ್ಯೆ ಬಗೆಹರಿಯುತ್ತದೆ. ದೀಕ್ಷೆ ಕೊಡುವ ಮೊದಲು ಗಡ್ಡ ಮೀಸೆಗಳನ್ನು ತೆಗೆಸಿಹಾಕುತ್ತಾರೆ ಎಂದು ಸಲಹೆಕೊಟ್ಟರು. ಅದರಂತೆಯೇ ಎಲ್ಲಾ ನಡೆಯಿತು. ದೀಕ್ಷೆ ತೆಗೆದುಕೊಳ್ಳುವ ಮೊದಲು ಆಯುಷ್ಕರ್ಮವಾಗಬೇಕು ಎಂದರು ಋತ್ವಿಕರು. ಸಾಂಬಯ್ಯನವರಿಗೆ ಆಗ ತಮ್ಮ ಮೀಸೆಯ ಬಗೆಗೆ ಆತಂಕವಾಯಿತು. ತಲೆಗಡ್ಡಗಳನ್ನು ಬೋಳಿಸಿದ ಕ್ಷೌರಿಕ ಮೀಸೆಗೂ ಕೈ ಹಾಕಿದಾಗ, ಮೀಸೆಯನ್ನೂ ತೆಗೆಯಬೇಕೇ ಎಂದು ಸಾಂಬಯ್ಯನವರು ಆತಂಕ ವ್ಯಕ್ತಪಡಿಸಿದರು. ಮೀಸೆ ತೆಗೆಯುವಾಗ ತಮ್ಮ ಪ್ರಾಣವೇ ಹೋಗುತ್ತಿದೆಯೇನೋ ಎನ್ನುವ ಆತಂಕವಾಗಿತ್ತು ಸಾಂಬಯ್ಯನವರಿಗೆ. ಅಂತೂ ಸಾಂಬಯ್ಯನವರ ಮೀಸೆ ಮಾಯವಾಯಿತು, ದೊರೆಗಳ ಆತಂಕ ದೂರವಾಯಿತು.



★★★★

ಪಿಟೀಲು ಶಿವರುದ್ರಯ್ಯನವರನ್ನು ಕಂಡರೆ ಕೃಷ್ಣರಾಜ ಒಡೆಯರಿಗೆ ತುಂಬಾ ಅಭಿಮಾನ. ಹೀಗಿರುವಾಗ ಶಿವರುದ್ರಪ್ಪನವರು ನಶ್ಯ ಹಾಕುವ ಅಭ್ಯಾಸ ಮಾಡಿಕೊಂಡಿದ್ದಾರೆ ಅಂತ ಯಾರೋ ಪ್ರಭುಗಳಿಗೆ ವರದಿ ಮಾಡಿದ್ದರು. ನಶ್ಯ, ಬೀಡಿ, ಸಿಗರೇಟು, ಕುಡಿತ, ತಾಂಬೂಲ, ಚರ್ವಣ ಇವೆಲ್ಲ ಪ್ರಭುಗಳಿಗೆ ಸರಿಬರುತ್ತಿರಲಿಲ್ಲ. ಆದರೆ ಶಿವರುದ್ರಪ್ಪನವರ ಈ ಚಟವನ್ನು ಪರೀಕ್ಷಿಸಬೇಕೆಂದು ಒಂದು ದಿನ ಅವರನ್ನು ಅರಮನೆಗೆ ಕರೆಸಿಕೊಂಡು ತಾವು ಮರೆಯಲ್ಲಿದ್ದು ಭಕ್ಷಿಯವರ ಕೈಲಿ ಶಿವರುದ್ರಪ್ಪನವರಿಗೆ ನಶ್ಯ ಕೊಡಿಸಿ ಅವರ ಪ್ರತಿಕ್ರಿಯೆ ನಿರೀಕ್ಷಿಸುವ ಉಪಾಯ ಹಾಕಿಕೊಂಡಿದ್ದರು. ಶಿವರುದ್ರಪ್ಪನವರು ಮಹಾರಾಜರು ಬರಹೇಳಿದ್ದಾರೆ ಅಂತ ಅರಮನೆಗೆ ಬಂದಾಗ ಭಕ್ಷಿಯವರು ಅವರನ್ನು ಎದುರುಗೊಂಡು ಮಹಾರಾಜರು ಇನ್ನೇನು ಬಂದುಬಿಡುತ್ತಾರೆ ಅಂತ ಅದೂ ಇದೂ ಮಾತಾಡಿಸಿ ಬೆಳ್ಳಿಯ ನಶ್ಯದ ಡಬ್ಬಿಯನ್ನು ಅವರ ಮುಂದೆ ಹಿಡಿದು ತಗೋ ಶಿವರುದ್ರಪ್ಪ ಇದರ ಸ್ವಾರಸ್ಯವನ್ನು ನೋಡು ಅಂದರು

ಶಿವರುದ್ರಪ್ಪ ಗೌರವವಾಗಿ ಕ್ಷಮಿಸಬೇಕು ಬುದ್ದಿ ನಾವು ನೆಶ್ಯ ಹಾಕುವ ಅಭ್ಯಾಸ ಇಟ್ಟುಕೊಂಡಿಲ್ಲ ಅಂದ್ರು. ಆದರೆ ಅವರು ಬಲವಂತ ಮಾಡುತ್ತಾ ಹೋದ್ದರಿಂದ ಶಿವರುದ್ರಪ್ಪನವರಿಗೆ ಓಹೋ ಇದರಲ್ಲಿ ಏನೋ ಸ್ವಾರಸ್ಯವಿದೆ. ಮಹಾರಾಜರು ಬೀಸಿರುವ ಬಲೆಯೇ ಇರಬೇಕು ಇದು. ಇಲ್ಲದಿದ್ದರೆ ಭಕ್ಷಿಯವರು ಹೀಗೆ ನನ್ನನ್ನು ಒತ್ತಾಯ ಮಾಡುತ್ತಿದ್ದರೆ ಅನಿಸಿ ಅದಕ್ಕೊಂದು ಉಪಾಯ ಮಾಡಿದರು. ಸಾಮಾನ್ಯವಾಗಿ ಅವರು ಎಡಮೂಗಿನ ಹೊಳ್ಳೆಗೆ ನೆಶ್ಯ ಹಾಕಿಕೊಳ್ಳುತ್ತಿದ್ದರು. ಈಗ ಭಕ್ಷಿಯವರು ಬಲವಂತ ಮಾಡಿದ ಮೇಲೆ ಬಲಮೂಗಿನ ಹೊಳ್ಳೆಗೆ ನೆಶ್ಯ ತುಂಬಿಕೊಂಡರು. ಆಗ ಹತ್ತಾರು ಸೀನುಗಳು ಬಂದು ಫಜೀತಿಗಿಟ್ಟುಕೊಂಡಿತು. ಭಕ್ಷಿಯವರು ಒಳಗೆ ಹೋಗಿ ಮರೆಯಲ್ಲಿ ನಿಂತಿದ್ದ ಮಹಾರಾಜರಿಗೆ ಯಾರೋ ಬೇಕೆಂದು ಚಾಡಿ ಹೇಳಿದ್ದಾರೆ ಮಹಾಸ್ವಾಮಿ, ಪಾಪ ನೆಶ್ಯದ ಅಭ್ಯಾಸವೇ ಇದ್ದಂತಿಲ್ಲ ಇವರಿಗೆ ಅಂದರು. ಮಹಾರಾಜರು ಭಕ್ಷಿಯವರ ಕಿವಿಯಲ್ಲಿ ಏನೋ ಹೇಳಿದ ಮೇಲೆ ಮತ್ತೆ ಭಕ್ಷಿಯವರು ಶಿವರುದ್ರಪ್ಪನವರ ಹತ್ತಿರ ಬಂದರು. ಬೀಸೋ ದೊಣ್ಣೆ ತಪ್ಪಿತು




ಅಂತ ಶಿವರುದ್ರಪ್ಪನವರು ನೆಮ್ಮದಿಯ ನಿಟ್ಟುಸಿರು ಬಿಡುತ್ತಿರುವಂತೆ ಭಕ್ಷಿಯವರು ಮತ್ತೆ ಬಂದರು. ಎಲ್ಲಿ ಈಗ ನೆಶ್ಯವನ್ನು ನಿಮ್ಮ ಬಲಮೂಗಿಗೆ ಹಾಕಿಕೊಳ್ಳಿ ಎಂದರು. ಶಿವರುದ್ರಪ್ಪನವರಿಗೆ ಓಹೋ ಇದು ಮಹಾರಾಜರ ಕ್ರಿಯೆಯೇ ಇರಬೇಕು. ಅವರು ಇಲ್ಲೆಲ್ಲೋ ಇದ್ದು ನನ್ನ ನೆಶ್ಯ ಹಾಕಿಕೊಳ್ಳುವ ಚಟವನ್ನು ಪರೀಕ್ಷೆಗೆ ಒಡ್ಡಿದ್ದಾರೆ ಅನಿಸಿ ಭಕ್ಷಿಯವರಿಗೇ ಕೈ ಮುಗಿಯುತ್ತಾ ಅಪರಾಧವಾಯಿತು ನನ್ನ ದುರಭ್ಯಾಸವನ್ನು ಕ್ರಮೇಣ ಬಿಟ್ಟುಬಿಡುತ್ತೇನೆ ಎನ್ನುವ ಹೊತ್ತಿಗೆ ಮಹಾರಾಜರು ನಸುನಗುತ್ತಾ ಮರೆಯಿಂದ ಈಚೆ ಬಂದರು. ಶಿವರುದ್ರಪ್ಪನವರು ಮಹಾರಾಜರ ಕಾಲಿಗೆ ಬಿದ್ದು ಮತ್ತೊಮ್ಮೆ ತಮ್ಮ ಬೇಡಿಕೆಯನ್ನು ಅವರ ಮುಂದಿಟ್ಟರು. ಮಹಾರಾಜರು ಆಗಲಿ ಎನ್ನುವಂತೆ ತಲೆಯಾಡಿಸಿ ಅಲ್ಲಿಂದ ಹೊರಟರು.

★★★★


ನಾಲ್ವಡಿ ಕೃಷ್ಣರಾಜ ಒಡೆಯರು ಆಗಾಗ ಬಂಡೀಪುರದಲ್ಲಿ ಮೊಕ್ಕಾಂ ಹೂಡುತ್ತಿದ್ದರು. ಪಿಟೀಲು ಚೌಡಯ್ಯನವರ ಕಾರು ಆ ಮಾರ್ಗವಾಗಿ ಹೋಗೋದು ಅವರಿಗೆ ತಿಳಿದಿತ್ತು. ಕಾರು ವಿಪರೀತ ಸದ್ದು ಮಾಡುತ್ತಿತ್ತು. ಆದರೆ ಅದು ಚೌಡಯ್ಯನವರ ಕಾರು ಎಂದು ತಿಳಿದಿರಲಿಲ್ಲ. ಊಳಿಗದವನನ್ನು ಕರೆದು ಯಾರು ಇಂಥಾ ಅವೇಳೆಯಲ್ಲಿ ಈ ಮಾರ್ಗವಾಗಿ ಓಡಾಡುತ್ತಾರೆ ತಿಳಿದುಕೊಂಡು ಬಾ ಅಂತ ಕಳಿಸಿದರು. ಒಂದು ದಿನ ಚೌಡಯ್ಯನವರು ಕಾರಿನಲ್ಲಿ ಆ ಮಾರ್ಗವಾಗಿ ಬರುವಾಗ ಊಳಿಗದವನು ದಾರಿಯಲ್ಲಿ ನಿಂತಿದ್ದು ವಿಚಾರ

ತಿಳಿದುಕೊಂಡು ಹೋಗಿ ಮಹಾರಾಜರಿಗೆ ವರದಿ ಒಪ್ಪಿಸಿದ. ಇದಾದ ಮೇಲೆ ಮಹಾರಾಜರು ಚೌಡಯ್ಯನವರನ್ನು ಅರಮನೆಗೆ ಬರಮಾಡಿಕೊಂಡು ಕಾರಿನ ಬಗೆಗೆ ವಿಚಾರಿಸಿದರು. ಮಹಾರಾಜರು ಕೇಳಿದ ತಕ್ಷಣ ಚೌಡಯ್ಯನವರು ಅದು ಆಸ್ಟಿನ್ ಕಾರು ಮಹಾಸ್ವಾಮಿ.



ಸೊಗಸಾದ ಇಂಜಿನ್ನು, ಇಷ್ಟು ದಿವಸವಾದರೂ ಒಂದು ದಿನವೂ ತೊಂದರೆ ಕೊಟ್ಟಿಲ್ಲ. ಯಾವ ರೋಲ್ಸ ರಾಯ್ ಕಾರೂ ಅದರ ಮುಂದಿಲ್ಲ. ಯಾರ್‍ಯಾರೋ ಅದನ್ನು ಕೊಟ್ಟುಬಿಡು ಅಂತ ಕೇಳಿದರು ಆದರೆ ನಾನು ಯಾರಿಗೂ ಕೊಟ್ಟಿಲ್ಲ, ಅಷ್ಟೇ ಅಲ್ಲ ಎಷ್ಟು ದುಡ್ಡು ಕೊಟ್ಟರೂ ನಾನು ಕೊಡೋಲ್ಲ ಅಂದು ಕಾರಿನ ಬಗೆಗೆ ಕೊಚ್ಚಿಕೊಂಡರು. ಮಹಾರಾಜರು ಭಕ್ಷಿಯವರ ಕಡೆ ನೋಡಿ, ಇನ್ನೊಂದು ಸಾರಿ ಚೌಡಯ್ಯನವರ ಕಡೆ ನೋಡಿ ನಗುತ್ತಾ ಒಳಗೆ ಹೊರಟುಹೋದರು. ಚೌಡಯ್ಯನವರಿಗೆ ಏನೂ ಅರ್ಥವಾಗಲಿಲ್ಲ. ಆಗ ಭಕ್ಷಿಯವರು ಚೌಡಯ್ಯನವರ ಕಡೆ ನೋಡಿ ಎಂಥಾ ಕೆಲಸ ಮಾಡಿಕೊಂಡಿರಿ, ನಿಮ್ಮ ಒಡಕು ಆಸ್ಟಿನ್ ಕಾರಿನ ಬಗೆಗೆ ಅಷ್ಟೇಕೆ ಕೊಚ್ಚಿಕೊಂಡಿರಿ. ನೀವು ಸ್ವಲ್ಪ ಸೂಕ್ಷ್ಮ ತಿಳಿದುಕೊಂಡಿದ್ದರೆ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಬೆಲೆ ಬಾಳೋ ಹೊಸಾ ಕಾರು ನಿಮ್ಮದಾಗುತ್ತಿತ್ತು. ಅದಕ್ಕಾಗಿಯೇ ಮಹಾಸ್ವಾಮಿಯವರು ನಿಮಗೆ ಹೇಳಿಕಳಿಸಿದ್ದು ಎಂದಾಗ ಚೌಡಯ್ಯನವರು ಎಂಥಾ ಅವಕಾಶ ಕಳೆದುಕೊಂಡೆ ಅಂತ ಪಶ್ಚಾತ್ತಾಪ ಪಟ್ಟುಕೊಂಡರು.

---



## ಟಂಕಸಾಲೆ

1636ರಿಂದ 1659ರವರೆಗೆ ರಾಜ್ಯಭಾರ ಮಾಡಿದ ಕಂಠೀರವ ನರಸರಾಜ ಒಡೆಯರು ನಾಣ್ಯಗಳನ್ನು ಅಚ್ಚುಹಾಕಿಸಲು ಮೊಟ್ಟ ಮೊದಲಿಗೆ ಟಂಕಸಾಲೆಯೊಂದನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ರಾಜಾ ರೂಪಾಯಿ, ಅರ್ಧ ರೂಪಾಯಿ, ಪಾವಲಿ, ಅದ್ದಹಾಗ ಮತ್ತು ಮಯಲಿ ಕಾಸು ಮುಂತಾದ ನಾಣ್ಯಗಳು ಮುದ್ರಿತವಾಗಿದ್ದವು. 1833ರಲ್ಲಿ ಈ ಟಂಕಸಾಲೆಯನ್ನು ಬೆಂಗಳೂರಿಗೆ ವರ್ಗಾಯಿಸಲಾಯಿತು. 1843ರಲ್ಲಿ ಈ ಟಂಕಸಾಲೆಯನ್ನು ಮುಚ್ಚಿದ ನಂತರ ಮೈಸೂರು ಒಡೆಯರ್ ಅವರ ನಾಣ್ಯಗಳು ಮುದ್ರಿತವಾಗುವುದು ನಿಂತು ಈಸ್ಟ್ ಇಂಡಿಯಾ ಕಂಪನಿಯ ನಾಣ್ಯಗಳು ಕರ್ನಾಟಕದಲ್ಲಿ ಚಲಾವಣೆಗೆ ಬಂದವು.

# ಮೈಸೂರುಪಾಕ್‌ನ ಪೀಕಲಾಟ

**- ಆರತಿ ಘಟಿಕಾರ್**

ಇಂಗು ತೆಂಗು ಇದ್ದರೆ ಮಂಗ ಕೂಡ ಅಡುಗೆ ಮಾಡೀತು ಎಂಬ ಗಾದೆ ಎಲ್ಲ ಕಾಲಕ್ಕೂ, ಎಲ್ಲರಿಗೂ ಅನ್ವಯಿಸುವುದಿಲ್ಲ ಎಂಬುದು ನನ್ನ ತರ್ಕ. ಕಾರಣ ಇವೆರಡನ್ನೂ ಯತೇಚ್ಛವಾಗಿ ಬಳಸಿ ಅಡುಗೆ ಕೆಡಸಿದವರೂ ಉಂಟು! ಹಾಗಾಗಿ ಕೊನೆಗೆ ಆ ಅಡುಗೆಯನ್ನು ಮಂಗನಿಗೇ ಕೊಡಬೇಕಾದ ಪಾಳಿ ಬಂದರೂ ಬರಬಹುದು.

ನಾನಂತೂ ಇಂಗು ತೆಂಗು ಹಾಕದೆಯೂ ರುಚಿಕರ ಅಡುಗೆ ಮಾಡುತ್ತಿದ್ದರೂ, ಸಿಹಿ ತಿನಿಸುಗಳನ್ನು ನನ್ನ ಮದುವೆ ಆದಮೇಲೆಯೇ ಸ್ವಲ್ಪ ಮಟ್ಟಿಗೆ ಮಾಡಲು ಕಲಿತದ್ದು. ಹಾಗೆಯೇ ಅಡುಗೆಯಲ್ಲೂ ವಿಶೇಷ ಆಸಕ್ತಿ ಬೆಳೆಸಿಕೊಂಡು ಪಾಕ ಪ್ರವೀಣೆ ಪಟ್ಟವನ್ನು ಗಿಟ್ಟಿಸಲು ಅನೇಕ ಹೊಸ ರುಚಿಗಳನ್ನು ಅಂತರ್ಜಾಲವನ್ನೆಲ್ಲಾ ತಡಕಾಡಿ ನೋಡಿಕೊಂಡು ನಮ್ಮ ಮನೆಯವರ ಮೇಲೆ ಪ್ರಯೋಗಿಸಿದಾಗ, ಅದರಲ್ಲಿ ಕೆಲವು ಭಾರಿ ಪ್ರಮಾಣದ ಯಶಸ್ಸು ಪಡೆದು ನನಗೆ ವಾಹ್ ಸೂಪರ್ ಎಂಬ ಶಭಾಸಗಿರಿ ಜೊತೆಗೆ ನನ್ನ ಮಗರಾಯ ನನ್ನ ಅಡುಗೆಗೆ ಒಂದರಿಂದ ಹತ್ತರ ಸ್ಕೇಲಿನಲ್ಲಿ ನನಗೆ ಸೂಕ್ತ ಅಂಕಗಳನ್ನು ಅಂದರೆ 8 ಅಥವಾ 9 ಅಂಕಗಳನ್ನು ದಯಪಾಲಿಸಿ ತೀರ್ಪುಗಾರನಾಗಿ ಮೆರೆಯುತ್ತಿದ್ದ. ನಾನೂ ಕೂಡ ಕಿಚನ್ ಕ್ವೀನ್ ಕಿರೀಟವೇ ಪಡೆದಂತೆ ಸಂಭ್ರಮಿಸುತ್ತಿದ್ದೆ!

ನಾನು ಹೀಗೆ ಹೊಸ ಹೊಸ ಐಟಂಗಳನ್ನು ಉತ್ಸಾಹದಿಂದ ಕಲಿತು ಮಾಡುವುದಕ್ಕೆ ನನ್ನ ಮಗನ ಅತಿಯಾದ ಜಿಹ್ವಾ ಚಾಪಲ್ಯವೂ ಕಾರಣ ಎನ್ನಬಹುದು. ಇನ್ನು ಸಿಹಿ ತಿನಿಸುಗಳಲ್ಲಿ ಕೇಸರಿ ಬಾತ್, ಹಲ್ವ, ಜಾಮೂನು, ಪಾಯಸಗಳು ಇವೆಲ್ಲಾ ಕರಗತ ಮಾಡಿಕೊಂಡಿದ್ದರೂ ನನ್ನ ಪಾಕಶಾಲೆಯಲ್ಲಿ ಮೈಸೂರು ಪಾಕನ್ನು ಮಾಡಲು ಕೈಯೇಕೊ ಹಿಂಜರಿಯುತ್ತಿತ್ತು. ಮೊದಲಿಗೆ, ಅದು ಅಷ್ಟು ಸರಾಗವಾಗಿ ಮಾಡಲು ಬರುವ ತಿನುಸಲ್ಲ, ಅಲ್ಲದೆ ಮಾಡುವಾಗ ಸ್ವಲ್ಪ ಏರುಪೇರಾದರೂ ಮೈಸೂರ್ ಪಾಕ್ ಕೈ ಕೊಡುತ್ತದೆ ಎಂದು ಅಮ್ಮನ ಎಚ್ಚರಿಕೆಯ ಮಾತುಗಳು ನೆನಪಾಗುತ್ತಿತ್ತು, ಈ ಬಾರಿ ಅಂಗಡಿಯಿಂದ ಕೊಂಡು ತಂದ ಮೈಸೂರ್ ಪಾಕ್ ಮೆಲ್ಲುವಾಗ ಇದನ್ನು ಹೇಗಾದರಾಗಲಿ ಮಾಡಿ ನೋಡಬೇಕು ಎಂದು ನಿರ್ಧರಿಸಿದೆ.

ಹಿಂದೆ ಅಮ್ಮ ಮಾಡುವುದನ್ನು ಒಮ್ಮೆ ನೋಡಿದ್ದೆ. ಮತ್ತೆ ಅಮ್ಮನಿಗೆ ಫೋನಾಯಿಸಿ. ಅಳತೆ ಹಾಗೂ ವಿಧಾನಗಳನ್ನು ದೃಢಪಡಿಸಿಕೊಂಡೆ. ಆದರೆ ನನ್ನ ಸುತ್ತಳತೆ ಗಮನದಲ್ಲಿ ಇಟ್ಟುಕೊಂಡು ಅಮ್ಮ ಹೇಳಿದ ತುಪ್ಪದ ಅಳತೆಯನ್ನು ಕೊಂಚ ಕಡಿಮೆ ಮಾಡಿದೆ! ಸರಿ ಕಡಲೆಹಿಟ್ಟು, ಸಕ್ಕರೆ, ತುಪ್ಪ ಎಲ್ಲವೂ ನನ್ನ ಕೈಯಲ್ಲಿ ಮೈಸೂರ್ ಪಾಕ್ ಆಗಿ ಮಾರ್ಪಾಡಾಗುವ ಕನಸು ಕಾಣತೊಡಗಿದವು.

ತಾಯಿ ಅನ್ನಪೂರ್ಣೇಶ್ವರಿಯನ್ನು ಮನದಲ್ಲೇ ನೆನೆಯುತ್ತಾ ಮೊದಲು ಒಲೆಯ ಮೇಲೆ ಸಕ್ಕರೆ ಪಾಕ ಸಿದ್ದ ಮಾಡಿಕೊಂಡು ಮತ್ತೊಂದು ಕಡೆ ಬಾಣಲೆಯಲ್ಲಿ ತುಪ್ಪ ಕಾಯಿಸಲು ಇಟ್ಟೆ. ಇದನ್ನು ಮಾಡಲು ಪೂರ್ಣ ಪ್ರಮಾಣದ ಏಕಾಗ್ರತೆ ಬೇಕೆಂದು ನನ್ನ ಮೊಬೈಲು ಸ್ವಿಚ್ ಆಫ್ ಮಾಡಿದ್ದೂ ಆಯಿತು. ಕಡಲೆ ಹಿಟ್ಟನ್ನು ಹದವಾಗಿ ಹುರಿದು ಪಾಕಕ್ಕೆ ಬೆರೆಸಿದೆ, ಎಡಗಡೆ

ಹಬೆಯಾಡುತ್ತಿರುವ ಕಡಲೆಹಿಟ್ಟಿನ ಮಿಶ್ರಣ, ಬಲಗಡೆ ಚೆನ್ನಾಗಿ ಕಾದು ಕುದಿಯುತ್ತಿರುವ ತುಪ್ಪ, ಎರಡೂ ನನ್ನ ಮೇಲೆ ದಾಳಿಗೆ ಸಿದ್ಧವಾಗುತ್ತಿವೆಯೇನೋ ಎಂಬಂತೆ ತೋರಿತು. ನನ್ನ ಹಣೆ ಮೇಲೆ ರಾಶಿ ಬೆವರನ್ನು ಒರೆಸುತ್ತಾ ದೇವರು ಕೊಟ್ಟ ಎರೆಡು ಕೈಗಳಿಗೆ ಧನ್ಯಳಾಗಿ ಎಡಗೈಯಲ್ಲಿ ಮೊಗಚೋ ಕೈ, ಬಲಗಡೆಗೆ ಸೌಟು ಹಿಡಿದು ಯೋಧಳಂತೆ ಸಿದ್ಧಳಾಗಿ ಧೈರ್ಯದಿ ಮುನ್ನುಗ್ಗಲು ನನ್ನನ್ನು ನಾನೇ ಹುರಿದುಂಬಿಸಿಕೊಂಡೆ!

ಅಮ್ಮನ ಆದೇಶದಂತೆ ಕಾಯ್ದ ತುಪ್ಪವನ್ನು ಸ್ವಲ್ಪ ಸ್ವಲ್ಪವೇ ಕಡಲೆ ಹಿಟ್ಟಿನ ಮಿಶ್ರಣಕ್ಕೆ ಚೊಂಯ್ ಎಂದು ಶಬ್ಧ ಬರಿಸುವಂತೆ ಹಾಕಿ ಅದನ್ನು ಚೆನ್ನಾಗಿ ಕಲಕುತ್ತಾ ಹೋದೆ. ಈ ಕಡೆ ಕೊತ ಕೊತ ಕುದಿಯುತ್ತಾ ಹೊಗೆಯಾಡುವ ಆಸೆಬುರುಕ ಕಡಲೆ ಹಿಟ್ಟು ಹಾಕಿದ ತುಪ್ಪವನ್ನೆಲ್ಲ ನುಂಗುತ್ತಿತ್ತು. ಇದೆಲ್ಲದರ ಮಧ್ಯೆ ಅಮ್ಮನ ನುಡಿಗಳು ನೆನಪಾದವು. ತುಪ್ಪ ಚೆನ್ನಾಗಿ ಬಿಸಿ ಇರಲಿ... ಕಡಲೆ ಹಿಟ್ಟನ್ನು ಚೆನ್ನಾಗಿ ಕಲಕ್ತಾ ಅದು ತಳಾ ಹಿಡೀದ ಹಾಗೆ ನೋಡ್ಕೋ, ಕ್ರಮೇಣ ಅದು ತುಪ್ಪವನ್ನು ಚೆನ್ನಾಗಿ ಹೀರಿ ಹಿಟ್ಟು ಹಗುರವಾಗಿ, ಗೂಡು ಕಟ್ಟಲು ಶುರು ಆಗುತ್ತೆ. ಆಗ ನಿನ್ನ ಗಮನ ಎಲ್ಲ ಅಲ್ಲೇ ಇರಲಿ. ಹೀಗೆ ಅಮ್ಮನ ಟಿಪ್ಪಣಿಗಳ ಮಳೆ ನನ್ನ ತಲೆಗೆ ಟಪ್ ಟಪ್ ಎಂದು ಆಗಾಗ ಬಡಿದು ಎಚ್ಚರಿಸುತ್ತಿತ್ತು. ಹಾಗಾಗಿ ನನ್ನ ಎರಡೂ ಕೈಗಳು ನೋವಿನಿಂದ ಗೋಣಗುತ್ತಾ ಅವಿಶ್ರಾಂತವಾಗಿ ದುಡಿಯುತ್ತಿದ್ದವು.

ಕೊನೆಗೆ ತುಪ್ಪ ಎಲ್ಲ ಖಾಲಿಯಾಗಿ ಈಕಡೆ ಹಿಟ್ಟು ಕೂಡ ಹೊಂಬಣ್ಣಕ್ಕೆ ತಿರುಗಿ, ದೊಡ್ಡ ಗುಳ್ಳೆಗಳಾಗಿ ಕುದ್ದು, ಗೂಡು ಕಟ್ಟುತ್ತಿವೆಯೇನೋ ಎಂಬಂತೆ ಭಾಸವಾಯಿತು. ನಾನು ಏಕಾಗ್ರ ಚಿತ್ತದಿಂದ ಬಿಟ್ಟ ಕಣ್ಣು ಮುಚ್ಚದೇ ಅದನ್ನೇ ನೋಡುತ್ತಿದ್ದೆ. ಆದರೂ ಗೂಡು ಅರ್ಥಾತ್ ಗುಡಿಸಲು ಕೊಂಚ ಚೆನ್ನಾಗಿ ಆಗಲಿ ಎಂದು ಒಂದು ನಿಮಿಷ ಚೆನ್ನಾಗಿ ಕಲಕಿ ಒಲೆ ಮೇಲಿಂದ ಇಳಿಸಿ ತುಪ್ಪ ಸವರಿದ ತಟ್ಟೆಗೆ ಹಾಕಿದೆ. ಅದನ್ನು ತಣ್ಣಗಾಗಲು ಬಿಟ್ಟು ಆ ಹಬೆಗೆ ಬೆವರಿದ್ದ ನಾನೂ ತಂಗಾಳಿಗೆ ಮೈಯೊಡ್ಡಿದೆ!

ಸ್ವಲ್ಪ ಸಮಯದ ನಂತರ ಮೈಸೂರ್ ಪಾಕಿನ ರುಚಿ ನೋಡುವ ಸಂಭ್ರಮದಲ್ಲಿ ತೇಲಾಡುತ್ತಾ ತಟ್ಟೆಯಲ್ಲಿದ್ದದನ್ನು ಎತ್ತಿಕೊಳ್ಳಲು ಹೋದರೆ ಎಲ್ಲ ಪುಡಿ ಪುಡಿಯಾಗಿ ಬರುತ್ತಿವೆ. ಅಯ್ಯೋ! ಎಂದು ನಾನು ಮುಖ ಕಿವುಚಿ ಈ ಎಡವಟ್ಟಿಗೆ ಕಾರಣವೇನು ಎಂದು ಶೆರ್ಲಾಕ್ ಹೋಮ್ಸ್‌ನಂತೆ ಯೋಚಿಸಿದಾಗ, ಒಂದೆರಡು ಅತಿ ಮುಖ್ಯ ವಿಷಯದಲ್ಲಿ ಎಡವಿದ್ದು ಗೋಚರವಾಯಿತು. ನನ್ನ ಗೋಚಾರ ಫಲ ಅಂದು ಕೆಲಸದಲ್ಲಿ ಭಾರಿ ಎಡವಟ್ಟು ಅಂತಿರಬಹುದು! ಮಯ್ಸೂರ್ ಪಾಕಿನ ಕೊನೆ ಹಂತದಲ್ಲಿ ನಾನು ಅದನ್ನು ಗೂಡು ಕಟ್ಟುವ ಸಲುವಾಗಿ ಬಿಟ್ಟಾಗ ಅದು ಗೂಡಿನ ಬದಲು ಬಿಲ್ಡಿಂಗ್ ಆಗಿ ಹೋಗಿರಬೇಕು! ನಂತರ ಅದನ್ನು ತಟ್ಟೆಗೆ ಹಾಕಿದಾಗ ಬರ್ಫಿ ಆಕಾರದಲ್ಲಿ ಕತ್ತರಿಸಲು ಮರೆತಿದ್ದು ನನ್ನ ಚುರುಕು ತಲೆ ಹೊಳೆಯಿತು!

ಆ ಮೈಸೂರ್ ಪಾಕಿನ ಪುಡಿಯನ್ನು ಕಂಡಾಗ ನನ್ನ ಉತ್ಸಾಹವೆಲ್ಲಾ ಜರ್ರನೆ ಇಳಿದು ನಾ ಪಟ್ಟ ಶ್ರಮವೆಲ್ಲಾ ಕುಹಕವಾಡಿ ಕುಣಿದು ಕುಪ್ಪಳಿಸಿತು!

ಸಪ್ಪೆ ಮುಖಹೊತ್ತು ಮುಂದೇನು ಎಂದು ಯೋಚಿಸುತ್ತಿರುವಾಗ, ಈ ಘಮ್ಮನ್ನುವ ವಾಸನೆಯ ಜಾಡು ಹಿಡಿದು ನಾಯಿ ಮೂಗಿಗಿಂತಲೂ ಚುರುಕಾಗಿರುವ ನನ್ನ ಮಗನ


ಮೂಗಿಗೆ ಬಡಿದು ತಟ್ಟನೆ ನನ್ನ ಮುಂದೆ ಪ್ರತ್ಯಕ್ಷನಾದ! ಆಸೆಯಿಂದ ಅಮ್ಮ ಏನೋ ಸ್ವೀಟ್ ಮಾಡಿದ್ಯಾ ಅಲ್ವಾ ಅಂದಾಗ ನಾನು ಆ ಪುಡಿಯನ್ನೇ ಬಟ್ಟಲಲ್ಲಿ ಹಾಕಿ ಜೊತೆಗೆ ಸ್ಪೂನ್ ಇಟ್ಟು ಕೊಟ್ಟಾಗ ಆವಾ ಮುಖ ವಕ್ರವಾಗಿಸುತ್ತಾ ಅಮ್ಮ ಮೈಸೂರ್ ಪಾಕ್ ಬರ್ಫಿ ತರಾ ಇರತಲ್ಲ ಅದು ಕೊಡು, ಈ ಪುಡಿಯೆಲ್ಲಾ ಬೇಡ ಎಂದಾಗ ನಾನು ನನ್ನನ್ನು ಸ್ವಲ್ಪವಾದರೂ ಸಮರ್ಥಿಸಿಕೊಳ್ಳಬೇಕಲ್ಲ? ಹಾಗಾಗಿ ಅಯ್ಯೋ! ಈ ಸಲ ಸ್ವಲ್ಪ ಪುಡಿ ಆಯಿತು ಕಣೋ ಫಸ್ಟ್ ಟೈಮ್ ಅಲ್ವಾ ತಿನ್ನೋ ಮರಿ ಗೋಗರೆದೆ. ಪಾಪ ಅವನು ನನ್ನ ಹ್ಯಾಪ್ ಮೋರೆ ನೋಡಿ ಕನಿಕರದಿಂದ ಅದರಲ್ಲಿ ಒಂದು ಕಣದಷ್ಟು ಬಾಯಿಗೆ ಹಾಕಿ ಅಮ್ಮ ಟೇಸ್ಟ್ ಚೆನ್ನಾಗಿದೆ, ಮುಂದಿನ ಸಲ ಸರಿಯಾಗಿ ಮಾಡಮ್ಮ ಎಂದು ಈ ಬಾರಿ ಯಾವುದೇ ಅಂಕ ಕೊಡದೆ ಗ್ರೌಂಡ್ ಜೀರೋಗೆ ಇಳಿದದ್ದು ನನ್ನ ಮೂಡನ್ನು ಕೊಂಚ ಲಿಫ್ಟ್‌ನಲ್ಲಿ ಹತ್ತಿಸಿ ಹೊರಗೋಡಿದ.

ಮೈಸೂರ್ ಪಾಕ್ ತಟ್ಟೆ, ಯಾರು ಕೈ ಬಿಟ್ಟರೂ ನೀ ಎನ್ನ ಜೊತೆಗಿರು ಎಂಬಂತೆ ನನ್ನನ್ನೇ ನೋಡಿತು. ನಾನು ಒಂದು ಹಿಡಿ ಬಾಯಿಗೆ ಹಾಕಿಕೊಂಡೆ. ಅಷ್ಟರಲ್ಲಿ ನನ್ನ ಪತಿಯ ಆಗಮನ (ಅಂದು) ತಡಮಾಡದೆ ತಿಂಡಿ ಕೊಟ್ಟುಬಿಟ್ಟೆ. ಒಂದು ಬೌಲಿನಲ್ಲಿ ಇದೇ ಮೈಸೂರ್ ಪಾಕ್ ಪುಡಿ ಕೊಟ್ಟು ಬೋನಸ್ ರೂಪದಲ್ಲಿ ನಾಲ್ಕು ಕೋಡುಬಳೆ ಕೊಡುತ್ತಾ ಮೈಸೂರ್ ಪಾಕ್ ಮಾಡ್ತೀನಿ ಅಂತ ಹೇಳಿದ್ನಲ್ಲ, ಸ್ವಲ್ಪ ತೆಗ್ಯೋವಾಗ ಕೈ ಕೊಡ್ತು ರೀ ಎಂದು ನನ್ನ ಶ್ರಮದ ವೃತ್ತಾಂತವನ್ನೆಲ್ಲಾ ಅರುಹಿದೆ. ಆಗ ಇವರು ನನ್ನನ್ನು ಪಾಪದ ಪ್ರಾಣಿಯಂತೆ ನೋಡಿ ನಾನು ಕೊಟ್ಟದ್ದರಲ್ಲಿಯೇ ಒಂದು ಅಡುಕೆ ಗಾತ್ರದಷ್ಟು ಮೈಸೂರ್ ಪಾಕಿನ ತುಣುಕನ್ನು ಹುಡುಕಿ ಬಾಯಿಗಿಟ್ಟು ವಾಣಿ ಪರವಾಗಿಲ್ಲ ಟೇಸ್ಟ್ ಚೆನ್ನಾಗಿದೆ ಕಣೆ, ನೀನು ಒಂದು ಕೆಲಸ ಮಾಡು ಇದನ್ನೇ ಮತ್ತೆ ಮಿಕ್ಸಿಗೆ ಹಾಕಿ ಇನ್ನೂ ಚೆನ್ನಾಗಿ ಪುಡಿ ಮಾಡಿ ಬೇಸನ್ ಲಾಡು ಮಾಡಿಬಿಡು ಎಂದು ನನಗೆ ರೀಸೈಕಲ್, ರೀಮಿಕ್ಸ್ ನೀತಿಯನ್ನು ಬೋಧಿಸಿದರು!

ನನಗೂ ರೇಗಿ ಅಯ್ಯೋ ಇದನ್ನೇನು ಹಳೆ ಹಾಡು ಅನ್ಕೊಂಡ್ರಾ ಕಲಬೆರಕೆ ಮಾಡಿ ರೀಮಿಕ್ಸ್ ಮಾಡೋಕೆ ಅಥವಾ ಹಳೆ ಪೆಪ್ಸಿ, ಕೋಲಾ ಕ್ಯಾನ್ಗಳಂತೆ ಮತ್ತೆ ರೀಸೈಕಲ್ ಮಾಡೋಕೆ! ಅವೆಲ್ಲ ಆಗಲ್ಲ ರೀ, ನೀವು ಹೇಗಾದ್ರು ಮಾಡಿ ಈ ಬಟ್ಟಲು ಖಾಲಿ ಮಾಡಿಪ್ಪಾ ಪ್ಲೀಸ್, ನನ್ನ ಮೂಡ್ ಆಫ್ ಆದ ಕಾರಣ ತಣ್ಣಗೆ ನುಡಿದೆ. ಅಷ್ಟರಲ್ಲಿ ಕರಗಂಟೆಯ ಸದ್ದು, ನಮ್ಮ ಕೆಲಸದವನು ಅಂದು ಎರೆಡು ಘಂಟೆ ತಡವಾಗಿ ಬಂದಿದ್ದರಿಂದ ಮನ್ನಿಸು ತಾಯೆ ಎಂಬ ಮುಖಭಾವ ಹೊತ್ತು ಒಳಗೆ ಎಂಟ್ರಿ ಕೊಟ್ಟ, ನಾನಂದು ಎಂದಿನಂತೆ ಸಿಟ್ಟಾಗದೆ ಅಬ್ಬಾ ಸದ್ಯ! ಎಂದು ತಕ್ಷಣ ಒಳಗೋಡಿ ಒಳ್ಳೆಯ ಜಿಪ್ಲಾಕ್ ಕವರಿನಲ್ಲಿ ಈ ಮೈಸೂರ್ ಪಾಕ್ ಪುಡಿಯನ್ನು ಧಾರಾಳವಾಗಿ ಹಾಕಿ, ಜೊತೆಗೆ ಒಂದು ಕುಂಕುಮದ ಚೀಟಿ ಇಟ್ಟು ದೇವರ ಪ್ರಸಾದ ಕಣೋ ರಾಜು, ತೊಗೊಪ್ಪಾ ಎಂದು ಕೊಟ್ಟೆ, ಅವನೂ ಅದನ್ನು ಭಕ್ತಿಯಿಂದ ಕಣ್ಣಿಗೊತ್ತಿಕೊಂಡು ಸ್ವೀಕರಿಸಿದ. ಸದ್ಯ ಯಾವ ದೇವರ ಪ್ರಸಾದ ಎಂದು ಕೇಳಲಿಲ್ಲ! ಏನೇ ಅನ್ನಿ ಅದಾದ ಬಳಿಕ ನನ್ನ ಮೈಸೂರ್ ಪಾಕಿನ ಪ್ರಯೋಗ ಸಾಕಷ್ಟು ಬಾರಿ ನಡೆದು ನಾನೀಗ ರುಚಿಯಾದ, ಹದವಾದ, ಬಾಯಲ್ಲಿಟ್ಟರೆ ಕರಗುವ, ಮೈಸೂರ್ ಪಾಕ್ ಮಾಡಬಲ್ಲೆ ಎಂದು ಈಗಲೂ ಹೇಳಲಾರೆ!

# ಕೊರವಂಜಿ ಪದಬಂಧ – 11

- ವಿದ್ಯಾ ವಿ. ಹಾಲಭಾವಿ




**ಎಡದಿಂದ ಬಲಕ್ಕೆ**

1. ವಾಸಸ್ಥಾನ ಬಳಿ ಬರುತ್ತಿರುವ ನಾತ (3)
3. ರತಿಪತಿಯಿಂದ ಮೂಡಿರುವ ಬಯಕೆ (3)
5. ವನದಲ್ಲಿ ತೂರಿಸಿರುವ ಮುಖ (3)
7. ಉದಾರಿ ಹೋಗುತ್ತಿರುವ ರಸ್ತೆ (2)
8. ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
9. ಯಾವನೋ ಅಂತ ಅಂದುಕೊಳ್ಳಬೇಡಿ, ಈತ ವಿದೇಶದವನು (3)
10. ಚಪ್ಪಲಿ ಧರಿಸಿರದ ಚನ್ನಿಗರಾಯನದು ತೀವ್ರವಾದ ಆಸೆ (3)
11. ಛೀ ಛೀ ಅಪಾರ್ಥ ಮಾಡಿಕೊಳ್ಳಬೇಡಿ ಇದು ಕನ್ನಡಿಗ ಹಿಡಿದಿರುವ ಸ್ಪೂನು (3)
13. ಮಾತುಲನಾಡುತ್ತಿರುವ ನುಡಿ (2)
14. ಕನ್ನ ಹಾಕಿದವ ಕದ್ದೊಯ್ದ ಬಂಗಾರ (3)
15. ಒಳ್ಳೆಯ ದಿನವಿದು (3)
16. ಮಗನೊಟ್ಟಿಗಿರುವ ಪುತ್ರಿ (3)

**ಮೇಲಿಂದ ಕೆಳಕ್ಕೆ**

2. ನೆಮ್ಮದಿ ಹೀಗೆ ಬಂದಿದೆ (4)
4. ನೋಟು ಪಡೆದುಕೊಂಡು ಓಟು ಮಾಡುವಿಕೆ (4)
5. ಪಲಾಯನ ಮಾಡುತ್ತಿಲ್ಲ ಈ ಅರಣ್ಯರಕ್ಷಕ (5)
6. ಒಳ್ಳೆತನದ ಸೋಗಿನಲ್ಲಿ ಮೋಸ ಮಾಡುವವನು (5)
10. ನಾಲ್ಕು ಪಾದಗಳನ್ನುಳ್ಳದ್ದು (4)
12. ಕನ್ನಡಿಗನಾಡುತ್ತಿರುವ ಚೆಸ್ (4)

***(ಉತ್ತರಕ್ಕೆ 24ನೇ ಪುಟ ನೋಡಿ)***

# ಉಚಿತದ ಮಹಾತ್ಮೆ

**- ಸು. ವಿಜಯಲಕ್ಷ್ಮಿ**

ಉಚಿತ, ಕೊಡುಗೆ, ರಿಯಾಯಿತಿ ಇವು ಏನೇ ಇದ್ದರೂ, ವ್ಯಾಪಾರಿ ಯಾವತ್ತೂ ನಷ್ಟ ಮಾಡಿಕೊಳ್ಳುವುದಿಲ್ಲ, ಬದಲಿಗೆ ಗ್ರಾಹಕ ಮೂರ್ಖನಾಗುತ್ತಾನೆ ಅಷ್ಟೆ. ಉಚಿತದ ಬೆಲೆಯೂ ಮೂಲ ವಸ್ತುವಿನಲ್ಲಿ ಸೇರಿರುವುದು ಖಚಿತವಲ್ಲವೇ? ನಮ್ಮ ಗುಂಡ ಇದು ತಿಳಿಯದಷ್ಟು ದಡ್ಡನೇನಲ್ಲ, ಮೂರ್ಖನಂತೂ ಮೊದಲೇ ಅಲ್ಲ. ಈ ಉಚಿತದ ಮಹಿಮೆಯಿಂದ ಗುಂಡ ಅತ್ತೆ – ಸೊಸೆಯರನ್ನು ಅಂದರೆ ತಾಯಿ ಮತ್ತು ಹೆಂಡತಿಯನ್ನು ಸಮಾಧಾನ ಪಡಿಸಿದ ಘಟನೆ ಇದು.

ಗುಂಡನ ಅಕ್ಕನ ಮಗಳ ಮದುವೆಗೆ ಲಗ್ನಪತ್ರಿಕೆಯೊಂದಿಗೆ ಖುದ್ದಾಗಿ ಬಂದು ಕರೆಯಲು ಕಾಲಾವಕಾಶವಿಲ್ಲವೆಂದೂ, ಲಗ್ನಪತ್ರಿಕೆ ಕಳುಹಿಸುವುದಾಗಿ ಹೇಳಿ, ಕಳೆದ ತಿಂಗಳೇ ಬಂದು ಆಹ್ವಾನಿಸಿ ಹೋಗಿದ್ದರು. ಇಂದು ಗುಂಡನ ಮನೆಗೆ ಅವನ ಅಕ್ಕನ ಮಗಳ ಮದುವೆ ಲಗ್ನಪತ್ರಿಕೆ ಬಂದಿತ್ತು. ಸಂಜೆ ಮನೆಗೆ ಬರುತ್ತಿದ್ದಂತೆ, ಗುಂಡನ ಹೆಂಡತಿ ಗುಂಡಿ, 'ರೀ, ನಿಮ್ಮ ಅಕ್ಕನ ಮಗಳ ಲಗ್ನಪತ್ರಿಕೆ ಬಂದಿದೆ. ಮದುವೆಗೆ ಹೋಗಬೇಕೂಂದ್ರೆ ನಂಗೆ ಒಂದು ನೀಲಿ ಬಣ್ಣದ ರೇಷ್ಮೆ ಸೀರೆ ಕೊಡಿಸಿ' ಎಂದು ಕಂಡೀಷನ್ ಹಾಕಿ, ಆದೇಶ ಹೊರಡಿಸಿಯೇ ಬಿಟ್ಟಳು.

ಸೋದರ ಮಾವನಾಗಿ ಗುಂಡ ಮದುವೆಗೆ ಹೋಗದೇ ಇದ್ದರೆ ಆಗುತ್ತದೆಯೇ? ಹೋಗಲೇಬೇಕು. ಹಾಗೆಯೇ ಗುಂಡಿಯನ್ನೂ ಕರೆದುಕೊಂಡು ಹೋಗಬೇಕು. ಗುಂಡ ಅಲ್ಲೇ ಕುಳಿತ್ತಿದ್ದ ಕಡೆ ತಿರುಗಿದ. ಪಾಪ ಗುಂಡನ ತಾಯಿ ಸಪ್ಪೆ ಮುಖ ಮಾಡಿಕೊಂಡು, ಬತ್ತಿ ಹೊಸೆಯುತ್ತಿದ್ದರು. ಮೊಮ್ಮಗಳ ಮದುವೆಗೆ ಹೋಗುವ ಆಸೆ ಅವರಿಗೂ ಇದೆ. ಅವರೂ ಗುಂಡನ ಕಡೆ ನೋಡಿದರು.

ಗುಂಡ 'ಆಯಿತು ಬಿಡೆ, ಮದುವೆಗೆ ನಿಂಗೊಂದು, ಅಮ್ಮನಿಗೊಂದು ರೇಷ್ಮೆ ಸೀರೆ ತರ್ತೀನಿ ಆಯ್ತಾ?' ಎಂದ ಸಣ್ಣ ದನಿಯಲ್ಲೇ.

'ರೀ, ನಿಮ್ಮಮ್ಮನ ಹತ್ತಿರ ಬೇಕಾದಷ್ಟು ರೇಷ್ಮೆ ಸೀರೆಗಳು ಇವೆ. ಈಗ ಮದುವೇಲೂ ಒಂದು ರೇಷ್ಮೆ ಸೀರೆ ನಿಮ್ಮಮ್ಮನಿಗೆ ಕೊಡ್ತಾರೆ. ಅವರಿಗ್ಯಾಕೆ ಸುಮ್ಮನೆ ರೇಷ್ಮೆ ಸೀರೆ. ದುಡ್ಡು ದಂಡ. ನನಗೊಬ್ಬಳಿಗೇ ಒಂದು ತಂದರಾಯ್ತು. ಇಲ್ಲಾಂದ್ರೆ ನಾನೂ ಅಂಗಡಿಗೆ ಬರ್ತೀನಿ, ತಗೊಂಡರಾಯ್ತು' ಎಂದು ಗುಂಡಿ ನೇರವಾಗಿ ಬಾಣವನ್ನು ಗುಂಡನ ಹೃದಯಕ್ಕೆ ಬಿಟ್ಟಳು.

ಅಲ್ಲೇ ಇದ್ದ ಗುಂಡನ ತಾಯಿ ಗುಂಡಿಯ ಮಾತಿಗೆ ಹೆದರಿ 'ನನಗೇನೂ ಬೇಡ ಕಣೋ ಗುಂಡಾ, ಆ ಹುಡುಗಿ ಆಸೆ ಪಡುತ್ತಾ ಇದೆ. ಅದಕ್ಕೆ ತಂದುಕೊಡು' ಎಂದು ತಡಮಾಡದೆ ಹೇಳಿದರು.

'ನೋಡಿ ನಿಮ್ಮ ತಾಯಿಗಿರುವಷ್ಟು ಬುದ್ಧಿ ನಿಮಗಿಲ್ಲ. ಅವರಿಗೆ ನಮ್ಮ ಹಣಕಾಸಿನ ಪರಿಸ್ಥಿತಿ ನಿಮಗಿಂತ ಚೆನ್ನಾಗಿ ಗೊತ್ತಿದೆ' ಎಂದು ಒಳಗೆ ಹೋದಳು ಗುಂಡಿ.

ಗುಂಡನಿಗೆ ತಾಯಿಗೆ ಒಂದು ರೇಷ್ಮೆ ಸೀರೆ ಕೊಡಿಸದೇ ಇರುವಂತಹ ಬಡತನದ ಸ್ಥಿತಿಯೇನೂ ಇಲ್ಲ. ಆದರೆ ಹೆಂಡತಿ ಬಿಡಬೇಕಲ್ಲ. ಗುಂಡನಿಗೆ ಅಂದು ರಾತ್ರಿಯಿಡೀ ನಿದ್ದೆ ಬರಲಿಲ್ಲ. ಗುಂಡಿಗೆ ಗೊತ್ತಿಲ್ಲದೆ ಅಮ್ಮನಿಗೆ ಸೀರೆ ತರುವುದು ಸಾಧ್ಯವಿಲ್ಲದ ಮಾತು. ಅವಳು ಬೇಡವೆಂದು ಹೇಳಿದರೂ,

ಅಮ್ಮನಿಗೆ ಸೀರೆ ತಂದರೆ, ಮನೆ ರಣರಂಗವಾಗುವುದು ಖಂಡಿತ. ದೇವರು ಹಣಕಾಸಿನ ಅನುಕೂಲ ಕೊಟ್ಟರೂ, ಅಮ್ಮನಿಗೆ ಒಂದು ರೇಷ್ಮೆ ಸೀರೆ ಕೊಡಿಸಲಾರದ ತನ್ನ ಸ್ಥಿತಿಗೆ ತಾನೇ ಬೈದುಕೊಂಡ.

ಬೆಳಿಗ್ಗೆ ಆಫೀಸಿಗೆ ಹೋದೊಡನೆ ಗೆಳೆಯ ರಾಮು ಸಿಕ್ಕಿದ. 'ಯಾಕೋ ಗುಂಡ ಸಪ್ಪಗಿದ್ದೀಯಾ? ಹೇಳು. ಎಲ್ಲರಿಗೂ ಸಂಸಾರದ ತಾಪತ್ರಯ ಇದ್ದೇ ಇರುತ್ತೆ' ಎಂದು ರಾಮು ಕೇಳಿದ.

ಗುಂಡ ಎಲ್ಲಾ ವಿಷಯಗಳನ್ನೂ ರಾಮುವಿನ ಮುಂದೆ ಹೇಳಿದ. ಹೇಗಾದರೂ ಮಾಡಿ ತಾಯಿಗೂ ಒಂದು ರೇಷ್ಮೆ ಸೀರೆ ಕೊಡಿಸಲು ಮನಸ್ಸು ಮಾಡಿರುವುದಾಗಿ ಗುಂಡ ತಿಳಿಸಿದ.

'ಅದಕ್ಕೇನೂ ಧಾರಾಳವಾಗಿ ಕೊಡಿಸು ಮಹಾರಾಯ. ಯಾರು ಬೇಡ ಅಂತಾರೆ. ಹಣ ಬೇಕಾದ್ರೆ ನಾನು ಕೊಡುತ್ತೀನಿ.'

'ಈಗ ಹಣದ ಸಮಸ್ಯೆ ಬಂದಿಲ್ಲ ರಾಮು. ನನ್ನ ಅಕ್ಕನ ಮಗಳ ಮದುವೆಗೆ ತನಗೆ ಮಾತ್ರ ಸೀರೆ ತರಲು ಹೇಳಿದ್ದಾಳೆ. ನಿಮ್ಮಮ್ಮನಿಗೆ ತರಬೇಡಿ ಎಂದು ತಾಕೀತು ಮಾಡಿದ್ದಾಳೆ. ಏನು ಮಾಡುವುದಕ್ಕೂ ತೋಚುತ್ತಿಲ್ಲ' ಎಂದು ಗೆಳೆಯನ ಮುಂದೆ ಗುಂಡ ಪೇಚಾಡಿದ.

'ಅಯ್ಯೋ ಅಷ್ಟೇ ತಾನೆ, ನಾನೊಂದು ಉಪಾಯ ಹೇಳಿಕೊಡುತ್ತೀನಿ ಹಾಗೆ ಮಾಡು' ಎಂದು ರಾಮು ಗುಂಡನಿಗೆ ಆ ಉಪಾಯವನ್ನು ಹೇಳಿಕೊಟ್ಟ, ಗುಂಡನಿಗೆ ತುಂಬಾ ಖುಷಿಯಾಯಿತು. ಸಂಜೆ ಆಫೀಸು ಮುಗಿಸಿ ಮನೆಗೆ ಹೋಗುವಾಗ ಹೆಂಡತಿಗೆ ನೀಲಿ ಬಣ್ಣದ ರೇಷ್ಮೆ ಸೀರೆಯನ್ನೂ, ತನ್ನ ತಾಯಿಗೆ ಇನ್ನೊಂದು ರೇಷ್ಮೆ ಸೀರೆಯನ್ನೂ ಖರೀದಿಸಿ, ಮನೆಗೆ ಹೊರಟ.

ಮನೆಗೆ ಹೋದವನೇ ನೀಲಿ ರೇಷ್ಮೆ ಸೀರೆಯ ಒಂದು ಕವರನ್ನು ಗುಂಡಿ ಕೈಗೆ ಕೊಟ್ಟನು. ಅದನ್ನು ತೆಗೆದು ನೋಡಿದವಳೇ ಗುಂಡಿ 'ಸೀರೆ ತುಂಬಾ ಚೆನ್ನಾಗಿದೆ ರೀ' ಎಂದು ಸಂತೋಷಪಟ್ಟಳು. ನಂತರ ಗುಂಡನ ಕೈಯಲ್ಲಿದ್ದ ಇನ್ನೊಂದು ಪ್ಯಾಕೆಟ್ ನೋಡಿ, 'ರೀ, ನಂಗೆ ಒಂದೇ ಸೀರೆ ಸಾಕಿತ್ತು. ಇನ್ನೊಂದು ಯಾಕೆ ತಂದಿರಿ?' ಎಂದಳು.

'ಇದು ಅಮ್ಮನಿಗೆ ಕಣೇ' ಎಂದ ಗುಂಡ ನಿಧಾನವಾಗಿ.

'ನಿಮ್ಮಮ್ಮನಿಗೆ ಸೀರೆ ತರುವುದು ಬೇಡ ಅಂತ ನಾನೂ ಮೊದಲೇ ಹೇಳಿರಲಿಲ್ಲವಾ? ಅತ್ತೆ ಕೂಡ ಬೇಡ ಅಂತಾನೇ ಹೇಳಿದ್ದರು. ಆದರೂ ತಂದಿದ್ದೀರಲ್ಲಾ, ನಿಮಗೆ ದುಡ್ಡಿನ ಬೆಲೆ ಏನಾದರೂ ಗೊತ್ತಾ?' ಎಂದು ಧುಮುಗುಟ್ಟಿದಳು ಗುಂಡಿ.

ಆಗ ಗುಂಡ ಸಮಾಧಾನವಾಗಿ 'ಅಲ್ವೇ ಗುಂಡಿ, ನನ್ನನ್ನೇನು ದಡ್ಡ ಅಂತ ಮಾಡಿದ್ದೀಯಾ? ನಿನಗೆ ನೀಲಿ ಸೀರೆ ತಗೊಂಡೆನಲ್ಲಾ ಅದಕ್ಕೆ ಈ ಸೀರೆ ಉಚಿತವಾಗಿ ಕೊಟ್ಟಿದ್ದಾರೆ ಕಣೇ. ಅಮ್ಮನ ಸೀರೆಗೆ ನಾನೇನೂ ದುಡ್ಡು ಕೊಟ್ಟಿಲ್ಲ ಗೊತ್ತಾಯ್ತಾ?' ಎಂದ.

'ಹೌದಾ, ಒಳ್ಳೆಯದಾಯ್ತು ಬಿಡಿ. ಮದುವೆಗೆ ಅತ್ತೆಗೂ ಒಂದು ರೇಷ್ಮೆ ಸೀರೆ ಆಯ್ತಲ್ಲಾ' ಎಂದಳು ಗುಂಡಿ.

ರಾಮು ಹೇಳಿಕೊಟ್ಟ ಉಚಿತದ ಉಪಾಯ ಫಲಿಸಿತು. ಗುಂಡ ಎರಡು ಸೀರೆಗಳನ್ನೂ ದುಡ್ಡು ಕೊಟ್ಟು ತಂದಿದ್ದು ನಮ್ಮ ಪೆದ್ದುಗುಂಡಿಗೆ ಇಂದಿಗೂ ತಿಳಿದೇ ಇಲ್ಲ.

✤

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- ನಾವು ಅತಿ ಕಡಿಮೆ ದ್ವೇಷಿಸುವ ವ್ಯಕ್ತಿಗೆ ಮತ ಹಾಕಲು ಪ್ರಜಾಪ್ರಭುತ್ವ ನಮಗೆ ಅವಕಾಶ ಮಾಡಿಕೊಡುತ್ತದೆ.
- ನಮ್ಮ ಭವಿಷ್ಯ ಗ್ರಹಗಳಿಗೆ ತಿಳಿದಿದ್ದರೆ ಅವುಗಳ ಭವಿಷ್ಯ ಯಾರಿಗೆ ತಿಳಿದಿರುತ್ತದೆ?
- ಅಂತ್ಯ ಹೇಗಿರುತ್ತದೆ ಎಂಬುದು ನಿಮಗೆ ಮೊದಲೇ ತಿಳಿಯದೆ ಇದ್ದರೆ ಕತೆಯನ್ನು ನೀವು ಹೆಣೆಯಲು ಹೇಗೆ ಸಾಧ್ಯ?
- ದಿ ಔಟ್ ಸೈಡ್ ಆಫ್ ಎ ಮೌಂಟನ್ ಈಸ್ ಗುಡ್ ಫಾರ್ ದಿ ಇನ್‌ಸೈಡ್ ಆಫ್ ಮ್ಯಾನ್.
- ನೀವು ಎಲ್ಲಾದರೂ ಹೋಗಿ, ವಾತಾವರಣ ಹೇಗಾದರೂ ಇರಲಿ ಸೂರ್ಯನಂತೆ ಪ್ರಕಾಶಿಸಲು ಮರೆಯದಿರಿ.
- ಭಗವಂತ ಒಬ್ಬ ಒಳ್ಳೆಯ ಕಾದಂಬರಿಕಾರ. ಅವನು ಯಾವಾಗಲೂ ಓದುಗನನ್ನು ಸಸ್‌ಪೆನ್ಸ್‌ನಲ್ಲಿಟ್ಟಿರುತ್ತಾನೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನಮಗೆ ಅಧಿಕಾರವೇ ಇಲ್ಲ ಎಂದುಕೊಂಡವರು ಅಧಿಕಾರವನ್ನು ಸುಲಭವಾಗಿ ಬಿಟ್ಟುಕೊಟ್ಟಿರುತ್ತಾರೆ.
- ಉತ್ತರ ತಿಳಿದುಕೊಳ್ಳಲು ಆಸಕ್ತಿ ಇಲ್ಲವಾದಂತಹ ಪ್ರಶ್ನೆಗಳನ್ನು ಕೇಳಲೇಬೇಡಿ.
- ಎ ಮೈಂಡ್ ಈಸ್ ಎ ಟೆರಿಬಲ್ ಥಿಂಗ್ ಟು ವೇಸ್ಟ್.
- ನಿಮ್ಮನ್ನು ನೀವು ಅರ್ಥಮಾಡಿಕೊಂಡಿದ್ದರೆ ಸಣ್ಣ ಸಣ್ಣ ಸಂಗತಿಗಳೇ ಸಂತೋಷ ತಂದುಕೊಡುತ್ತವೆ.
- ಬದುಕು ನೀಡಿದ ಹೊಡೆತಗಳಿಂದ ನಿಮ್ಮ ಮುಖ ಊದಿದ್ದರೆ ನಗಿರಿ, ನಾನೊಬ್ಬ ದಪ್ಪ ಮನುಷ್ಯ ಎಂದು ನಟಿಸಿ.
- ಪ್ರಶ್ನೆ: ಮದುವೆಗೂ ಜೀವಾವಧಿ ಶಿಕ್ಷೆಗೂ ಏನು ವ್ಯತ್ಯಾಸ?
  ಉತ್ತರ: ಜೀವಾವಧಿ ಶಿಕ್ಷೆಯಲ್ಲಿ 14 ವರ್ಷಗಳ ನಂತರ ಬಿಡುಗಡೆ ಇದೆ.
- ಏನು ತಪ್ಪಾಗಿದೆ ಎಂದು ಪ್ರತಿ ಭಾರತೀಯನಿಗೂ ಗೊತ್ತು. ಅದು ಹೇಗೆ ಸರಿಯಾಗುತ್ತದೆ ಎಂದು ತಿಳಿದುಕೊಳ್ಳಲು ಪ್ರತಿ ಭಾರತೀಯನಿಗೂ ಆಸಕ್ತಿ ಇದೆ.
- ಮುದುಕರು ಯುದ್ಧ ಘೋಷಣೆ ಮಾಡುತ್ತಾರೆ. ಆದರೆ ಕಾದಾಡಿ ಸಾಯಲು ಯುವಕರೇ ಬೇಕು.
- ಸ್ಥಳ ಕಾಲ ನಿರ್ದಿಷ್ಟವಾಗಿ ಸತ್ಯ ಮತ್ತೆ ಮತ್ತೆ ಜನಿಸಿ ಬರುತ್ತದೆ. ಅದನ್ನು ನಾವು ಮತ್ತೆ ಮತ್ತೆ ಅರಿಯುತ್ತಲೇ ಇರಬೇಕು. ಸಂಭವಾಮಿ ಯುಗೇ ಯುಗೇ ಎನ್ನುವ ಮಾತಿನ ಗೂಢಾರ್ಥ ಇದೇ.

**Advertisement**

# Advertisement

# ಗೌರವ ಡಾಕ್ಟೊರೇಟ್

**- ಸಿ.ಆರ್. ಸತ್ಯ**

ಇತ್ತೀಚೆಗೆ ನಮ್ಮ ಬಡಾವಣೆಯ ಚೋಳಚಿಕ್ಕನ ಹಳ್ಳಿ ವಿಶ್ವವಿದ್ಯಾನಿಲಯ ನನಗೆ ಗೌರವ ಡಾಕ್ಟೊರೇಟ್ ಪದವಿ ಕೊಟ್ಟಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೂ ಕೆಲವರು (ಅಕ್ಕ ಪಕ್ಕದ ಮನೆಯವರೂ ನನ್ನ ಸಂಬಂಧಿಕರೂ ಸೇರಿ) ಇಂತಹ ಗೌರವಕ್ಕೆ ನಾನು ಅರ್ಹನೇ? ಎಂಬ ಪ್ರಶ್ನೆ ಎತ್ತುತ್ತಿದ್ದು, ಅದರಿಂದಾಗಿ ನನಗೆ ಮಾನಸಿಕ ಆಘಾತವೇ ಆಗಿದೆ. ಅದಕ್ಕೆ ಉತ್ತರವಾಗಿ ವಿಶ್ವವಿದ್ಯಾನಿಲಯ ನನಗೆ ಅರ್ಪಿಸಿದ ಬಿನ್ನವತ್ತಳೆಯನ್ನು ಓದುಗರ ಮುಂದೆ ಇಡುತ್ತಿದ್ದೇನೆ. ನನ್ನ ಅರ್ಹತೆಯನ್ನು ದಯವಿಟ್ಟು ನೀವೇ ನಿರ್ಧರಿಸಿ.

**ಚೋಳಚಿಕ್ಕನ ಹಳ್ಳಿ ವಿಶ್ವವಿದ್ಯಾನಿಲಯ**

**ಬೆಂಗಳೂರು**

ಇಂದು ನಮ್ಮ ಸಂಸ್ಥೆಗೆ ಒಂದು ಶುಭ ದಿನ. ನಮ್ಮ ಕೋರಿಕೆಗೆ ಮನ್ನಣೆ ನೀಡಿ ಶ್ರೀಮಾನ್........ಅವರು ನಮ್ಮ ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿಯನ್ನು ಸ್ವೀಕರಿಸಲು ಸಂತೋಷದಿಂದ ಒಪ್ಪಿದ್ದಾರೆ. ಇಂತಹ ಮಹನೀಯರಿಗೆ ನಮ್ಮ ಗೌರವ ಪದವಿ ನೀಡುವ ಮೂಲಕ ನಮ್ಮ ವಿಶ್ವವಿದ್ಯಾನಿಲಯಕ್ಕೇ ಪರೋಕ್ಷವಾಗಿ ಗೌರವ ದೊರಕಿದೆ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ದಿನದಂದು ಶ್ರೀಮಾನ್.........ಅವರ ಪ್ರತಿಭಾನ್ವಿತ ವ್ಯಕ್ತಿತ್ವವನ್ನು ನಾವು ನೆನೆಯಲೇ ಬೇಕು. ಶಿಕ್ಷಣ ಕ್ಷೇತ್ರದಲ್ಲಿ ಶ್ರೀಮಾನ್............ಅವರ ಕೊಡುಗೆ ಅಪಾರ. ತಾವೇ ಎರಡನೇ ತರಗತಿಯಾದ ನಂತರ ಓದಿಗೆ ಶರಣು ಹೊಡೆದರೂ, ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆಂದೇ ನಾನಾ ಬಗೆಯ ಸಹಾಯ ಮಾಡಿದ್ದಾರೆ. ಪ್ರತಿ ವರುಷವೂ ನೂರಕ್ಕೂ ಹೆಚ್ಚು ಮಕ್ಕಳಿಗೆ ರಬ್ಬರ್ ಪೆನ್ಸಿಲ್ ಉಚಿತವಾಗಿ ಕೊಡುವುದಲ್ಲದೇ, ಹತ್ತು ಶಿಕ್ಷಕರಿಗೆ ಕಡಲೇಪುರಿ-ಹುರಿಗಡಲೆ ಪ್ಯಾಕೆಟ್‌ಗಳನ್ನು ಶಿಕ್ಷಕರ ದಿನದಂದು ಕೊಟ್ಟು ತಮ್ಮ ಗೌರವವನ್ನು ಅರ್ಪಿಸುತ್ತಾರೆ. ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿನ ಗುಣಮಟ್ಟದ ಬಗ್ಗೆ ತೀವ್ರ ಕಾಳಜಿ ವಹಿಸಿರುವ ಶ್ರೀಮಾನ್..........ಅವರು ತಮ್ಮ ಶ್ರೀಮತಿ ಅವರೊಡನೆ ಶ್ರೀಲಂಕ, ಸಿಂಗಪೂರ್, ಮಲೇಶಿಯ ಮತ್ತಿತರೇ ದೇಶಗಳಲ್ಲಿ ಪ್ರಯಾಣ ಮಾಡಿ ಅಲ್ಲಿಯ ಶಿಕ್ಷಣ ಪದ್ಧತಿಗಳನ್ನು ಅವಲೋಕಿಸಿ, ನಮ್ಮ ಸ್ಕೂಲು ಕಾಲೇಜುಗಳಿಗೆ ನಾನಾ ಸಲಹೆಗಳನ್ನು ಕೊಡುತ್ತಿದ್ದಾರೆ. ಅವರ ಸಲಹೆಯಂತಲೇ ನಮ್ಮ ವಿಶ್ವವಿದ್ಯಾನಿಲಯದ ಕಟ್ಟಡಗಳನ್ನು ಕಟ್ಟಿದಾಗ, ಪಾಠದ ಕೊಠಡಿಗಳಿಗಿಂತ ಶೌಚಾಲಯಗಳೇ ಹೆಚ್ಚಿರಬೇಕೆಂದು ನಾವು ನಿರ್ಧರಿಸಿದ್ದು.

ಈಗ ಮೂಕ ಪ್ರಾಣಿಗಳ ಸಂರಕ್ಷಣ ಕ್ಷೇತ್ರಕ್ಕೆ ಬರೋಣ. ಶ್ರೀಮಾನ್.......ಅವರು ಪ್ರಾಣಿಗಳ ಯೋಗಕ್ಷೇಮಕ್ಕೆ ತಮ್ಮ ಜೀವನವನ್ನೇ ಮುಡುಪಿಟ್ಟಿದ್ದಾರೆ ಎಂದರೆ ಉತ್ಪ್ರೇಕ್ಷೆ ಆಗಲಾರದು. ಅವರು ಮತ್ತು ಅವರ ಮಕ್ಕಳು ಕಳೆದ ಎರಡು ದಶಕಗಳಿಂದ ನಡೆಸುತ್ತಿರುವ

ಮಿಲಿಟರಿ ಹೋಟೆಲ್ ತ್ಯಾಜ್ಯದಿಂದಲೇ ಏನಿದ್ದರೂ ನೂರಾರು ಬೀದಿ ನಾಯಿಗಳು ಆರೋಗ್ಯಕರವಾದ ಆಹಾರವನ್ನು ತಿನ್ನುತ್ತಾ ಬದುಕಿ ಉಳಿದಿವೆ. ಅವರ ಇನ್ನೊಂದು ವ್ಯಾಪಾರವಾದ ಹಾಲಿನ ಡೈರಿಯಲ್ಲಿ ಚೆನ್ನಾಗಿ ಹಾಲು ಕೊಡುವ ಹಸುಗಳನ್ನು ಬಲು ಪ್ರೀತಿಯಿಂದ ಸಾಕುತ್ತಾ, ಹಾಲು ಕೊಡದ ಹಸುಗಳ ಮೇಲೆ ಯಾವ ಕೋಪವೂ ಅಸಮಾಧಾನವೂ ತೋರಿಸದೆ ಅವುಗಳು ಹಾಯಾಗಿ ಬದುಕಿ ಬಾಳಲಿ ಎಂದು ಅವರ ಬಡಾವಣೆಯಲ್ಲಿರುವ ಎಲ್ಲಾ ರಸ್ತೆಗಳಲ್ಲೂ ಓಡಾಡಲು ಬಿಟ್ಟು, ಒಂದು ರೀತಿಯಲ್ಲಿ ಸಮಾಜಕ್ಕೆ ''ಗೋದಾನ''ವನ್ನೇ ಮಾಡಿ ಪುಣ್ಯ ಕಟ್ಟಿಕೊಂಡಿದ್ದಾರೆ. ಪ್ರತಿ ವರುಷ ಹೆಬ್ಬಾಳದ ಪ್ರಾಣಿ ಸಂರಕ್ಷಣ ಕೇಂದ್ರಕ್ಕೆ ಒಮ್ಮೆಯಾದರೂ ಹೋಗಿ, ಒಂದೆರಡು ಲೀಟರ್ ಹಾಲು ಮತ್ತು ಕೆಲವು ಬಿಸ್ಕತ್ ಪ್ಯಾಕೆಟ್‌ಗಳನ್ನು ಸ್ವಂತ ಕೈಗಳಿಂದಲೇ ಹಂಚುತ್ತಾರೆ.

ಸಂಗೀತ ಕ್ಷೇತ್ರದಲ್ಲಿ ಶ್ರೀಮಾನ್.........ಅವರು ಉದಾರ ಆಸಕ್ತಿ ತೋರಿಸದೇ ಇದ್ದಿದ್ದರೆ ನಮ್ಮ ಸಂಗೀತ ಪದ್ಧತಿಗಳು ಏನಾಗುತ್ತಿದ್ದವೋ ಏನೋ! ಉತ್ತರ ಬೆಂಗಳೂರಿನಲ್ಲಿರುವ ಸುಮಾರು ಇಪ್ಪತ್ತು ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತ ಶಾಲೆಗಳನ್ನು ಆಯ್ಕೆ ಮಾಡಿ, ಒಂದೊಂದು ಶಾಲೆಗೂ ನೂರು ರೂಪಾಯಿಗಳ ದತ್ತಿ ಹಣ ಕೊಟ್ಟು ಅದರಿಂದ ಬರುವ ಬಡ್ಡಿ ಹಣವನ್ನು ಉತ್ತಮ ವಿದ್ಯಾರ್ಥಿಗಳಿಗೆ ನೀಡಲು ಆದೇಶಿಸಿದ್ದಾರೆ. ಮೊನ್ನೆ ಒಂದು ಸಭೆಯಲ್ಲಿ ರಾಮನವಮಿ ಸಂಗೀತವನ್ನು ಆಲಿಸುವಾಗ ಅಲ್ಲಿಯ ಧ್ವನಿ ವರ್ಧಕ ವ್ಯವಸ್ಥೆ ಸರಿಯಿಲ್ಲ ಎಂದು ತೋರಿ ಒಡನೆಯೇ ಹತ್ತು ಮೀಟರ್ ವೈರ್ ಅನ್ನು ಆ ಸಭೆಗೆ ಉಚಿತವಾಗಿ ಕೊಟ್ಟರು!

ಭಾರತಕ್ಕೆ ಸ್ವಾತಂತ್ರ್ಯ ದೊರಕುವ ಮುನ್ನ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಅನೇಕ ಬಾರಿ ಬ್ರಿಟೀಷರ ಜೈಲುಗಳಲ್ಲಿ ಬಂಧನದಲ್ಲಿದ್ದುದು ಎಲ್ಲರಿಗೂ ತಿಳಿದ ವಿಷಯವೇ. ಈ ಸಮಯದಲ್ಲೇ ಶ್ರೀಮಾನ್.....ಅವರು ಅನೇಕ ಬಾರಿ ಜೈಲು ಸೇರಿ ಹೇಗೋ ಹೊರ ಬಂದಿದ್ದಾರೆ. ಅವರು ಯಾವ ಕಾರಣಕ್ಕೆ ಜೈಲಿಗೆ ಹೋದರು ಮತ್ತು ಹೇಗೆ ಹೊರಕ್ಕೆ ಬಂದರು ಎನ್ನುವುದು ಮುಖ್ಯವಲ್ಲ, ಅವರು ಯಾವ ಸಮಯದಲ್ಲಿ ಹೋದರು ಎನ್ನುವುದು ಮುಖ್ಯ. ಮಹಾತ್ಮ ಗಾಂಧಿಯ ಬಗ್ಗೆ ಅವರಿಗೆ ಅಪಾರ ಅಭಿಮಾನ ಎಷ್ಟರ ಮಟ್ಟಿಗೆ ಇದೆ ಎಂದರೆ ''ಗಾಂಧಿ'' ಸಿನಿಮಾದ ಒಂದು ಡಿವಿಡಿಯನ್ನು ತಮ್ಮ ಮಕ್ಕಳ ಇತರೇ ಡಿವಿಡಿಗಳೊಡನೆ ಸೇರಿಸದೆ, ತಮ್ಮ ಬೆಡ್ ರೂಮಿನಲ್ಲಿ ಇಂದಿಗೂ ಪ್ರತ್ಯೇಕವಾಗಿ ಇಟ್ಟುಕೊಂಡಿದ್ದಾರೆ. ಶ್ರೀಮಾನ್.......ಅವರಿಗೆ ಭಾರತದಲ್ಲಿ ಸ್ತ್ರೀಯ ಪಾತ್ರದ ಬಗ್ಗೆ ಬಹಳವಾದ ಕಾಳಜಿಯಿದೆ. ''ಮನೆಯಾಕೆ'' ಪ್ರಗತಿ ಆದಲ್ಲಿ ಸಮಾಜವೇ ಪ್ರಗತಿಪರವಾಗುತ್ತದೆ ಎಂಬ ವಿಶಾಲ ಮನೋಭಾವದಿಂದ, ತಮ್ಮ ಶ್ರೀಮತಿ ಅವರನ್ನೇ ಭಾರತ ''ಸ್ತ್ರೀ'' ಎಂದು ಸಾಂಕೇತಿಕವಾಗಿ ಪರಿಗಣಿಸಿ, ಆಕೆಯನ್ನು ಇಲ್ಲಿಯ ಮಹಿಳಾ ಸಂಘದ ಅಧ್ಯಕ್ಷಿಣಿ ಆಗಿ, ''ತಾಯಂದಿರ'' ದಿನದಂದು ಮುಖ್ಯ ಅತಿಥಿಯಾಗಿ, ಅಡುಗೆ ಸ್ಪರ್ಧೆಗಳಲ್ಲಿ ಜಡ್ಜ್ ಆಗಿ ಮತ್ತು ತಮ್ಮ ಹಾಲಿನ ಡೈರಿಯ ಉಪಾಧ್ಯಕ್ಷರಾಗಿ ನೇಮಿಸಿದ್ದಾರೆ. ಸುರಕ್ಷತೆಯ ಹಿನ್ನಲೆಯಲ್ಲಿ ಅವರ ಶ್ರೀಮತಿಯವರು ಈಗ ಯಾವ ನಾಲ್ಕು ಚಕ್ರಗಳುಳ್ಳ ವಾಹನಗಳನ್ನು ಓಡಿಸದಿದ್ದರೂ ಅವರು ಕರ್ನಾಟಕದಲ್ಲೆಲ್ಲಾ ಆಕೆಯೇ ಮೊಟ್ಟ ಮೊದಲು ಡ್ರೈವಿಂಗ್ ಲೈಸೆನ್ಸ್ ಪಡೆದ ಹೆಂಗಸು ಎನ್ನುವುದು ಹೆಮ್ಮೆಯ ವಿಷಯ. ಹೆಂಗಸರು ಬಟ್ಟೆ ಹೊಲಿಯುವ ವೃತ್ತಿಯಲ್ಲಿ

ಸ್ವಾವಲಂಬಿಗಳಾಗಿರಬೇಕೆಂದು ಶ್ರೀಮಾನ್.......ಅವರು ಐವತ್ತು ಹೆಂಗಸರಿಗೆ ನೂಲುದಾರ, ಕತ್ತರಿ, ಟೇಪ್, ಕೆಲವು ಗುಂಡಿಗಳು ಮತ್ತು ಕೆಲವು ಸೂಜಿಗಳಿರುವ ಪ್ಲಾಸ್ಟಿಕ್ ಡಬ್ಬಗಳನ್ನು ಉಚಿತವಾಗಿ ಹಂಚಿ, ಸರ್ಕಾರಕ್ಕೆ ಈ ಹೆಂಗಸರೆಲ್ಲರಿಗೂ ಶೀಘ್ರವೇ ಒಂದೊಂದು ಹೊಲಿಗೆ ಯಂತ್ರವನ್ನು ಕೊಡಿ ಎಂದು ಒತ್ತಾಯಿಸಿದ್ದಾರೆ.

ಕನ್ನಡ ಸಾಹಿತ್ಯವೆಂದರೆ ಶ್ರೀಮಾನ್.........ಅವರಿಗೆ ಬಲು ಪ್ರೀತಿ. ಕಡ್ಡಾಯವಾಗಿ ಅವರು ಮನೆಗೆ ಒಂದು ಕನ್ನಡ ಪತ್ರಿಕೆಯನ್ನೇ ತರಿಸಿಕೊಳ್ಳುವುದು. ಮಾತ್ರವಲ್ಲ, ಅನೇಕ ಸಾಹಿತ್ಯ ಸಮಾರಂಭಗಳಲ್ಲಿ ಪ್ರಾಯೋಜಕರು ಕೊಟ್ಟ ಶಾಲುಗಳನ್ನು ತಮ್ಮ ಹಸ್ತಗಳಿಂದಲೇ ಸಾಹಿತಿಗಳಿಗೆ ಹೊದ್ದಿಸಿ ಗೌರವಿಸಿದ್ದಾರೆ. ಅನೇಕ ಕನ್ನಡ ಗೀತೆಗಳ (ಸಿನಿಮಾ/ಸುಗಮ ಸಂಗೀತವೂ ಸೇರಿ) ಮೊದಲನೆಯ ಸಾಲನ್ನು ನಿರರ್ಗಳವಾಗಿ ಹಾಡುತ್ತಾರೆ. ಪ್ರತಿ ವರುಷ ಕನ್ನಡ ರಾಜ್ಯೋತ್ಸವದ ದಿನದಂದು ತಮ್ಮ ಹಾಲಿನ ಡೈರಿಯಲ್ಲಿ ಆಗುವ ಸಮಾರಂಭದಲ್ಲಿ ಅವರು ಮಾತನಾಡುವುದು ಕನ್ನಡದಲ್ಲೇ! ಎಲ್ಲಕ್ಕಿಂತ ಮಿಗಿಲಾಗಿ, ನಮ್ಮ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಹೊರಗಡೆ ತೂಗು ಹಾಕಿರುವ ''ಸಿರಿಗನ್ನಡಂ ಗೆಲ್ಗೆ'' ಫಲಕದ ಖರ್ಚನ್ನು ಅವರು ವಹಿಸಿದ್ದಲ್ಲದೆ, ಈ ವರುಷ ಮಳೆಯಿಂದ ಕುಸಿದು ಬಿದ್ದ ಕನ್ನಡ ವಿಭಾಗದ ಗೋಡೆಗಳ ದುರಸ್ತಿ ಕಾರ್ಯವನ್ನೂ ಅವರೇ ವಹಿಸಿಕೊಂಡಿದ್ದಾರೆ.

ಇಂತಹ ಹಿರಿಯ ಸಾಧಕರಿಗೆ, ಕನ್ನಡ ಪ್ರೇಮಿಗಳಿಗೆ ಹಾಗೂ ನಮ್ಮ ವಿಶ್ವವಿದ್ಯಾನಿಲಯದ ಹಿತಚಿಂತಕರಾದ ಶ್ರೀಮಾನ್.........ಅವರಿಗೆ ನಾವು ಕೊಡುತ್ತಿರುವ ಈ ಗೌರವ ಪದವಿ ಹೆಚ್ಚೇನಲ್ಲ, ಆದರೆ, ಇದಕ್ಕಿಂತಲೂ ಹೆಚ್ಚಾಗಿ ಗೌರವ ಕೊಡುವ ವ್ಯವಸ್ಥೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಈಗಂತೂ ಇಲ್ಲ. ಏನಿದ್ದರೂ ನಾನು ಇಂದು, ನಮ್ಮ ಕುಲಪತಿಗಳ, ಸಿಂಡಿಕೇಟ್‌ನ, ಶಿಕ್ಷಕ ವರ್ಗದ ಹಾಗೂ ವಿದ್ಯಾರ್ಥಿ ವೃಂದದ ಪರವಾಗಿ, ಬಹು ಸಂತೋಷದಿಂದ, ಈ ಗೌರವ ಪದವಿಯನ್ನು ಶ್ರೀಮಾನ್......ಅವರಿಗೆ ಅರ್ಪಿಸುತ್ತಿದ್ದೇನೆ. ಶ್ರೀಮಾನ್........ಅವರಿಗೆ ದೇವರು ಆಯುರಾರೋಗ್ಯವನ್ನು ದಯಪಾಲಿಸಲಿ ಮತ್ತು ಅವರ ಜೀವನ ಎಲ್ಲಾ ರೀತಿಯಲ್ಲೂ ಸಾರ್ಥಕವಾಗಲಿ ಎಂದು ಆಶಿಸುವ,

ಸಹಿ

**ಉಪಕುಲಪತಿ**

**ಚೋಳಚಿಕ್ಕನ ಹಳ್ಳಿ, ಬೆಂಗಳೂರು**

## ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**

1. ವಾಸನೆ 3. ಕಾಮನೆ 5. ವದನ 7. ದಾರಿ 8. ನಯನ 9. ಯವನ 10. ಚಪಲ 11. ಚಮಚ 13. ಮಾತು 14. ಕನಕ 15. ಸುದಿನ 16. ಮಗಳು

**ಮೇಲಿಂದ ಕೆಳಕ್ಕೆ**

2. ಸಮಾಧಾನ 4. ಮತದಾನ 5. ವನಪಾಲಕ 6. ನಯವಂಚಕ 10. ಚತುಷ್ಪಾದಿ 12. ಚದುರಂಗ


# ನಾಯಿ ಪಾಡು

- ಗುಂಡುರಾವ್ ದೇಸಾಯಿ

ವಾರದಿಂದ ತಲೆ ಸಿಡಿದು ಹೋದಂಗಾಗಕತಿತು. ಕ್ಷಣ ಕ್ಷಣಕ್ಕೂ ಭಯ ಆತಂಕ ಸುರುವಾಗಕತಿತು, ಶಾಲೆಯಲ್ಲಿ ಪಾಠ ಮಾಡುವಾಗಲು ಮನೆ ವಾತಾವರಣ ನೆನಸಿಕೊಂಡ ಕೂಡಲೆ ಸ್ಥಬ್ಧನಾಗಿ ನಿಂತುಬಿಡುತ್ತಿದ್ದೆ. ಮಕ್ಕಳು 'ಸಾರ್, ಮುಂದು ಹೇಳ್ರೀ ಯಾಕ ಹಾಂಗ ನಿಂತ್ರಿ' ಎಂದು ಎಚ್ಚರಿಸಿದಾಗಲೇ ವಾಸ್ತವಕ್ಕೆ ಬರೋದು. ಸಹುದ್ಯೋಗಿಗಳು 'ಯಾಕ ಹಿಂಗಾಗ್ಯಾರ? ಏನು ತಾಪತ್ರಯನೋ ಏನೋ? ಅಥವಾ ಮನೆಯಲ್ಲಿ ಮನೆಯವರ ಜೊತೆಗೆ ಮನಸ್ತಾಪನೋ?' ಎಂದು ಹಲಮ ಬಾರಿ ಕೆದುಕಲೆತ್ನಿಸಿದರು ಗುಟ್ಟು ಬಿಟ್ಟುಕೊಟ್ಟಿರಲಿಲ್ಲ. ನಿಮಗೂ ಏನೇನೋ ಕಲ್ಪನೆಗಳು ನನ್ನ ಬಗ್ಗೆ ಮೂಡಿರಬೇಕಲ್ಲ. ಅದು ಹೇಳುವ ವಿಷಯವೇನು ಆಗಿರಲಿಲ್ಲ. ಅದೇ ನನ್ನ ಒಂದೂವರೆ ವರ್ಷದ ಕುಮಾರ ಸಂಭವ ನಾಯಿ ಮೇಲೆ ತೋರುತ್ತಿದ್ದ ಪ್ರೀತಿ. ಅದರಲ್ಲಿ ಸಿರಿಯಸ್ಸಾಗಿ ತೊಗೋಳ್ಳುವಂತಹದ್ದು ಏನದ ಅಂತ ತಾವು ಭಾವಿಸಬಹುದು, ನಾನು ಭಾವಿಸಿರಲಿಲ್ಲ. ಕೇಳ್ರಿ ಆ ಕಥಿ.

ನನ್ನ ಮನೆಯ ಪಕ್ಕದ್ದು ಕೂಲಿನಾಲಿ ಮಾಡಿ, ಮುಸುರಿ ತಿಕ್ಕಿ ಬದುಕುವ ಕುಟುಂಬ. ಬಡತನ ಬದುಕಿಗಿದ್ದರೂ ಬಾಯಿಯ ಬಡಿವಾರಕ್ಕೇನೂ ಕಮ್ಮಿ ಇರಲಿಲ್ಲ. ಗಂಡ ಹೆಂಡಿರ ಬಾಯಿ ಅಂದ್ರ ಬಾಯಿ. ಹೊಸದಾಗಿ ಮನೆಗೆ ಬಂದಾಗ ನಿತ್ಯ ರಾತ್ರಿಯಿಡಿ ಆಡುತ್ತಿದ್ದ ಜಗಳಾಟ ಕಿರುಚಾಟಕ್ಕೆ ನಿದ್ದೆನೆ ಬರತಿರಲಿಲ್ಲ. ಈರ್ವರ ಬಾಯಿಯಿಂದ ಬರುತ್ತಿದ್ದ ಮಾತುಗಳೋ ದೇವರಿಗೆ ಪ್ರೀತಿ. ಏನ ಮಾತಾ ಏನೋ ಆ ಓಣಿಯ ಜನ ಹ್ಯಾಂಗ ಸಹಿಸಿಕೊಂಡಿದ್ದರೋ, ನನಗೂ ಮಿಕ್ಕಿ ಒಂದು ದಿನ ಇಬ್ಬರಿಗೂ ತಿಳಿಸಿ ಹೇಳಿದ್ದೆ. ಜಗಳಾಡುತ್ತಿದ್ದ ಈರ್ವರು ನನ್ನ ಮೇಲೆ ಎರಗಬೇಕೆ. ''ನೀನು ಸಾಲಿ ಕೆಲಸ ಮಾಸ್ತರಿರಬಹುದು, ನಮಗ ಬುದ್ಧಿ ಹೇಳಾಕ ಬರಬ್ಯಾಡ್ರಿ, ನಾವು ಹೆಂಗಾರ ಜಗಳ ಮಾಡವಲ್ಯಾಕ ಹಾಳಭಾವಿ ಬೀಳವಲ್ಯಾಕ ನಿಮಗ್ಯಾಕರಿ ಉಸಾಬರಿ'' ಎಂದು ಉಗಿದಿದ್ದರು. ಈಚೆಯ ಮನೆಯವರು 'ಅವು ಇರೋದ ಹಾಂಗರಿ, ಹೇಳಿ ಹೇಳಿ ಕೈ ಬಿಟ್ಟಿವಿ. ಹಾಳಾಗಿ ಹೋಗವಲ್ಯಾಕ ಗಪ್ಪಿದ್ದಬಿಡ್ರೀ' ಎಂದ್ರು. ಅಂದಿನಿಂದ ಆ ಯಪ್ಪಾ ಹೆಂಡ್ತಿಗೆ ರಕ್ತಾ ಬರಿಯಾಂಗ ಹೊಡಿತಿದ್ರು, 'ಎಣ್ಣಾ... ಬಿಡಸು ಬರ್ರಿ' ಅಂತಿದ್ರು ಹೋಗತಿರಲಿಲ್ಲ, ಅವ ಜಗಳಾಡಿ ಒದಿರ್ಯಾಡಿ ಸುಮ್ಮನಾಗತಿದ್ವು. ಅಂತಾವು ಅವಕ್ಕ ತುತ್ತಿಗೆ ಗತಿ ಇರದೆ ಇರಬೇಕಾದ್ರೆ ಅವುಕ್ಕ ನಾಯಿ ಸಾಕಬೇಕೆಂಬ ಚಪಲಾ ಹುಟ್ಟಿ ನಾಯಿ ಒಂದನ್ನ ತಂದೇ ಬಿಟ್ರು. ಹಡದ ಮಕ್ಕಳಿಗೆ ಒಂದಿನ ಹಾಲ ಕುಡಿಸದಿದ್ರೂ ಅದಕ್ಕ ಕೂಲಿ ನಾಲಿ ಮಾಡಿ ಬಂದ ರೊಕ್ಕದಿಂದ ಹಾಲು ಕುಡಸಾಕತಿದ್ರು, ತಾವು ತಿನ್ನೋದ್ರಲ್ಲಿ ಅರ್ಧ ಇಕ್ಕಕತಿದ್ರು. ಒಮ್ಮೊಮ್ಮೆ ಇವರ ಜಗಳದ ನಡುವೆ ರಾತ್ರಿಯಲ್ಲ ಅದಕ್ಕೆ ಊಟ ಸಾಲದೆ ಕುಯಿಂ ಕಯಿಂ ಅಂತಿತ್ತು. ಇದರ ನಡುವೆ ಮಗ ಅದರ ಜೊತೆ ಹ್ಯಾಂಗ ದೋಸ್ತಿ ಬೆಳಸಿಕೊಂಡನೋ ಗೊತ್ತಿಲ್ಲ ಗಳಸ್ಯ ಕಂಠಸ್ಯ ಆಗಿಬಿಟ್ಟಿದ್ದ. ಮಗನೆಂಬ ಕಾರಣಕ್ಕೆ ಸೂಕ್ಷ್ಮವಾಗಿ ಬೆಳಸಿದವನು ನಾನಲ್ಲ. ಈಚೆ ಮನೆಯವರು 'ಹಾಂಗ್ಯಲ್ಲ ಹೊರಗಡೆ ಬಿಡಬೇಡಿ ಅವರ ಮನೆಯಾಗ ಕಳಸಬೇಡಿ, ಇವರ

ಮನ್ಯಾಗ ಕಳಸಬೇಡಿ. ಕೂಸಿಗೆ ಏನಾದ್ರೂ ಆದಿತು, ಕಪ್ಪು ಜನ. ಏನಾದ್ರು ಮಾಡಿಯಾರು' ಅಂತೆಲ್ಲ ಹೇಳತಿದ್ರು ನಾನು ಕೇಳತಿರಲಿಲ್ಲ. 'ಬೀದ್ಯಾಗ ಬೆಳದದ್ದು ಜಟ್ಯಾಂಗ ಆಗತಾವ' ಅಂತ ಹೇಳಿ ಕೈ ತೊಳಕಂತಿದ್ದೆ. ಅವರ ಮನೆಯಲ್ಲಿ ಸಮು ವಾರಿಗಿನ ಮಗಳು, ಅದಕ್ಕಿಂತ ಮೂರು ವರ್ಷದ ಮಗ ಇದ್ರೂ ಹೊಸ್ತಲ ದಾಟಸ್ತಿದ್ದಿಲ್ಲ, ಹೊರ ಬಂದರೂ ಅಪ್ಪ ಅಮ್ಮನ, ಕಾಕನ ಅಥವಾ ಅಜ್ಜಿಯ ಸುಪರ್ದಿಯಲ್ಲಿ ಹೊರಬರೋವು. ಆಚೆಯ ಅಂಗಳ ದಾಟಲು ಬಿಡುತಿರಲಿಲ್ಲ. ಈವನಿಗೆ ಯಾವುದೆ ಕಟ್ಟುಪಾಡು ಹಾಕಿರಲಿಲ್ಲವಾದ್ದರಿಂದ ಈಡಿ ಓಣೆಲ್ಲ ತಿರುಗಾಡಿ ಬರತಿದ್ದ, ತನ್ನ ಬಾಲ್ಯ ಚೇಷ್ಟೆಗಳಿಂದ ಎಲ್ಲರನ್ನು ಮೋಡಿ ಮಾಡಿದ್ದ. ಎಲ್ಲರಿಗೂ ಏನನ್ನೂ ತಿನ್ನಸ ಬೇಡ್ರೀ ಅಂತ ಹೇಳಿದ್ದರೂ ಗೊತ್ತಿರದಂತೆ ತಿಂತಿದ್ದ. ಇಂತಿಪ್ಪ ಮಗ ನಾಯಿ ಜೊತೆ ಅಪಾರ ಸಖ್ಯೆ ಬೆಳಸಿಕೊಂಡಿರೋದು ಗೊತ್ತೇ ಇರಲಿಲ್ಲ. ಈಕಿಗೂ ಬೆಳಗಿನ ಕೆಲಸದ ಹೊರೆ, ಅವ ಹೊರಗಿದ್ರ ಸಲೀಸಾಗತಾವ ಅಂತ ಅವರಿವರ ಮನೆಯಲ್ಲಿ ಆಡಲು ಬಿಡುತ್ತಿದ್ದರಿಂದ ಗೊತ್ತು ಇರಲಿಲ್ಲ. ಒಂದು ಸಾರಿ ನಾಯಿ ಬಾಲ ಜಗ್ಗುದ, ಅದನ್ನು ಅಟ್ಟಿಸಿಕೊಂಡು ಹೋಗೋದು ಮಾಡುತ್ತಿದ್ದನ್ನು ನೋಡಿ ಗಾಭರಿಯಾಗಿ ಈಕಿಗೆ ಅದನ್ನು ತಪ್ಪಿಸಲು ಹೇಳಿದ್ದೆ. ''ಅಲ್ರೀ ಯಾರಿಗೆ ಏನೆ ಮಾಡಿದ್ರೂ ನಮ್ಮ ಸಮುಗೆ ಅದು ಚಕಾರ ಎತ್ತಲ್ಲಂತ್ರಿ, ಅದು ಅಷ್ಟು ಹಚಗೊಂಡು ಬಿಟ್ಟಾದಂತ್ರಿ'' ಅಂತ ಅಂದ್ಳು. 'ಏನೆ ಆಗಲಿ ಅವು ಮೂಕ ಪ್ರಾಣಿಗಳು ಎಷ್ಟು ಛಲೂ ಇದ್ರೂ ಸಿಟ್ಟ ಬಂದ್ರ ಮನುಷ್ಯರಂಗ, ಆದಷ್ಟು ಇವನನ್ನ ಅದರಿಂದ ದೂರಿಡ ವ್ಯವಸ್ಥ ಮಾಡು' ಎಂದು ಈಕಿಗೆ ಒತ್ತಾಯಿಸಿದೆ. ನಾನು ಹೇಳಿದ್ದು ಬೋರ್ಗಲ್ಲ ಮೇಲೆ ನೀರು ಎರದಂತಾಗಿತ್ತು. ಮನ್ಯಾಗಿದ್ರ ಇವ ಕುಚೇಷ್ಠೆ ಮಾಡವ, ಕೆಲಸಕ್ಕ ಅಡ್ಡಾಗವ, ಅಜ್ಜಿನೂ ರೇಗಸಾವ. ಅವನ ಹಿಡಕೊಂಡು ಕೂತ್ರಾ, ಅವ್ವ 'ಕೆಲಸಮಾಡಲ್ಲ, ಹಿಡಕೊಂಡು ಕೂಡತಿ' ಅಂತ ಮಂಗಳಾಷ್ಟಕ ಹಾಡಾಕಿ. ಕೆಲಸ ಹವರ ಮಾಡಿಕೊಳ್ಳಲು ಇನ್ನೊಬ್ಬರ ಮನಿಗೆ ಬಿಡಕಿ. ಅವ ಅಲ್ಲಿಂದ ತಪ್ಪಿಸಿಕೊಂಡ ಬಂದು ನಾಯಿ ಜೊತೆ ಆಟ ಆಡಿಕೊಂತ ಕೂಡಾವ, ಅದರ ಮೇಲೆ ಹತ್ತಾವ, ಬಾಲ ಜಗ್ಗಾವ, ಬಡಿಗೆ ತೊಂಡು ಹೇಟು ಹಾಕಾವ, ಎತ್ತೆತ್ತೆ ಉಳ್ಳಾಡಿಸಿ ಒಗ್ಯಾವ. ಅವನು ಅಷ್ಟು ಸಲಿಗಿಯಿಂದ ನಾಯಿ ಜೊತೆಗೆ ವರ್ತಿಸೋದು ನೋಡಿ ಆ ಮನೆಯವು, ಓಣಿಯಾಗಿನ ಮಂದಿ, ಮಕ್ಕಳಾದಿಯಾಗಿ ಖುಷಿ ಪಡೋರು. ಮಗನ ಸಾಹಸವನ್ನ ಇವರಮ್ಮಗ, ಅಜ್ಜಿಗೆ ಬಂದು ಹೇಳೋರು. ಅವರು ಅಂಜಿಕಿಲ್ಲದೆ ಆಡುವುದನ್ನು ನೋಡಿ ಸಂಭ್ರಮಿಸೋರು, ಪಕ್ಕದ ಆ ಕುಟುಂಬ ಮಾಂಸಹಾರಿಗಳು. ಒಮ್ಮೆ ನಾಯಿ ಹಸಿವಿನಿಂದ ತತ್ತರಿಸೋದನ್ನು ಕಂಡು ಮಾಂಸ ಹಾಕಿದ್ದನ್ನು ನೋಡಿದೆ, ಮಾಂಸದ ರುಚಿ ಹತ್ತಿದ ನಾಯಿ ಎಲ್ಲಿ ಕ್ರೂರವಾಗುವುದೋ ಎಂದು ಅಂಜಿದೆ, ಮೊತ್ತಮ್ಮೆ ಇವ ನಾಯಿ ಪಕ್ಕದಲ್ಲೇ ಮಲಗಿದ್ದನ್ನು, ಇನ್ನೊಮ್ಮೆ ನಾಯಿಗೆ




ತಾನು ತಿನ್ನುವ ಭಕ್ರಿಯನ್ನು ತಿನ್ನಿಸುತ್ತಿರುವುದನ್ನು, ಮಗದೊಮ್ಮೆಯಂತೂ ಇವ ನಾಯಿಗೆ ಮುತ್ತಿಡುವುದನ್ನು, ಅದರ ಬಾಯೊಳಗೆ ಕೈ ಹಾಕಿ ಆಟ ಆಡುತ್ತಿರುವುದನ್ನು ನೋಡಿ ಮನ್ಯಾಗ ಎಳಕೊಂಡು ಬಂದು ಎರಡು ಬಿಗಿದಿದ್ದೆ. ಅವ್ವಗ, ಈಕಿಗೆ ದಬಾಯಿಸಿ ಕೆಲಸ ನಿಂತ್ರು ಚಿಂತಿಲ್ಲ ಆ ಮನೆಯತ್ತ ಸುಳಿದಿರುವಾಂಗ ಮಾಡು ಅಂದು ಕಟ್ಟಪ್ಪಣೆ ವಿಧಿಸಿದೆ. ನನಗೆ ಪ್ರಾಣಿಗಳ ಬಗ್ಗೆ ಮಮಕಾರ ಇದ್ರೂ ಈ ನಾಯಿಗಳ ಬಗ್ಗೆ ಭಯ ನನಗೆ. ಎಂತಹ ಅಪರಾತ್ರಿಯಲ್ಲೂ ಅಡ್ಡಾಡುತ್ತೇನಾದ್ರೂ ನಾಯಿ 'ಬೌ ಬೌ' ಎಂದು ಬೊಗಳಿದ್ರೆ ತತ್ತರಿಸಿ ಬಿಡ್ತೀನಿ. ನನ್ನ ಚಲನೆ ನಿಂತು ಬಿಡುತ್ತೆ. ಕೆಟ್ಟ ಮೂಡಿ ಫೆಲೋ ಈ ನಾಯಿಗಳು. ಅವುಗಳ ಗುಂಪಿದ್ರಂತು ಗೋವಿಂದ! ಇವು ಭಾರಿ ಬೆರಿಕಿಯಾ ಮತೆ. 'ಬೌ ಬೌ' ಅಂತ ಬೊಗೊಳಿಕೊಂತ ಹಿಂಬಾಲಸ್ತಾವೆ, ಅವಾಗ ಅದರುತ್ತಿರುವ ದೇಹದ ಪರಿ ಎಂತಹದು. ಬಿಟ್ಟು ಬಿಟ್ಟು ಹಿಡದಾಂಗ ಆಗತಿರುತ್ತೆ, ಆ ಏರಿಯಾ ಯಾವಾಗ ತಡಾಯಿತಿವೊ ಅಂತಿರುತ್ತೇವೆ. ಸ್ವಲ್ಪ ಧ್ವನಿ ಮಾಡಿದ್ರೆ, ಮೇಲೆ ಏರುವ ಪೊಜಿಶನ್‌ನಲ್ಲಿ ಇರತಾವೆ. ಆ ಏರಿಯ ದಾಟಿದ ಮೇಲೆ ಅಲ್ಲಿನೂ ಅದ ಪರಿಸ್ಥಿತಿ ಎದುರಿಸಬೇಕು. ಒಮ್ಮೆ ಬಾಲ್ಯದಾಗ ಯಾರದೋ ಮನಿಗೆ ಹೋದಾಗ ಸಾಕಿದ ನಾಯಿಯೊಂದು ಏಕಾಏಕಿ ಬಂದು ಕಚ್ಚಬೇಕೆ. 'ಟಾಮಿ ಕಮ್, ಕಮ್ ಬ್ಯಾಕ' ಅಂತ ಕೇಳದೆ, ಅದಕ್ಕಾಗಿ ನಾನು ಹೊಕ್ಕಳ ಸುತ್ತ 24 ಇಂಜಕ್ಷನ್ನಗಳನ್ನು ಹಾಕಿಸಿಕೊಳ್ಳಬೇಕಾಯಿತು. ಅದು ಮಂಡ ಸೂಜಿ ಇದ್ದ ಆ ಟೈಮಿನಲ್ಲಿ, ಅಂದಿನಿಂದ ನಾಯಿಕಂಡ್ರ, ಅದನ್ನ ಸಾಕವರನ್ನ ಕಂಡ್ರ ಅಷ್ಟಕಷ್ಟೆ.

ಕಟ್ಟಪ್ಪಣೆ ಹಾಕಿದ ಮೇಲೆ ಮಗನ್ನ ಟೈಟ ಮಾಡಿದ್ರು, ಅವ 'ಆಯಿ ಆಯಿ' ಅಂತ ತತ್ತರಿಸಕತ್ತಿದ, ರಾತ್ರಿ ಅದು ಬೊಗೊಳಿದ ಕೂಡಲೆ 'ಆಯಿ ಆಯಿ' ಅಂತ ತಾಸಗಟ್ಟಲೇ ಅಳಕ ಶುರು ಮಾಡವ. ಅವನ್ನ ರಮಸಾಕ ರಾತ್ರಿಯೆಲ್ಲ ನಿದ್ದೆಗೆಡಬೇಕಾಯಿತು. ನಾಲ್ಕೈದು ದಿನವಾದ್ರೂ ಇವನಿಗೆ ನಾಯಿ ವ್ಯಾಮೋಹ ಕಡಿಮೆಯಾಗಲಿಲ್ಲ. ಯಾವುದೇ ಮಾಯದಲ್ಲಿ ಹೊರಹೋಗಿ ಅದರ ಜೊತಿ ಆಟ ಆಡಾವ. ನನಗೂ ಮಿಕ್ಕಿ ಯಾವಾಗ ಈ ನಾಯಿ ತೊಲಗುತ್ತೋ ಅಂತ ಚಿಂತಿ ಆಯಿತು. ಸಿಟ್ಟ ಬಂದ್ರೂ ತಿನ್ನಕ ಕೂಳಿಲ್ಲಿಕ್ರೂ ಸಾಕುವ ಅವರ ಹಠ ಕಂಡು ಅಸಹ್ಯ ಎನಿಸಿತು. ಅವರಿಗೆ ಬಯ್ದು ಹೇಳೋಣ ಅಂದ್ರ ಮೊದಲೇ ಒದರುಮಾರಿಗಳಾಗಿರುವುದರಿಂದ ನಾವೇ ಮನೆ ಬದಲಾಯಿಸಬೇಕೆಂಬ ಯೋಚನೆ ಮಾಡಕ ಹತ್ತಿದೆ. ಮನೆಯೂ ಆ ಮಧ್ಯದಲ್ಲಿ ಸರಳವಾಗಿ ಯಾವು ಸಿಗಲಿಲ್ಲ, ಸಿಕ್ಕವೂ ನಮ್ಮ ಬಜೆಟ್ಟಗೆ ಸಗಿಟ್ಟುವಂತಿರಲಿಲ್ಲ. ಹಗಲು ರಾತ್ರಿ ನಾಯಿ ಯೋಚನೆಯಿಂದ ಬದುಕೆ ನಾಯಿಪಾಡಾದಂತಾಯಿತು. ಅದು ಯಾವಾಗ ಓಡಿ ಹೋಗುತ್ತೊ, ಇವ ಅದರ ಹುಚ್ಚು ಯಾವಾಗ ಬಿಟ್ಟಾನೋ ಅನ್ನೊ ಚಿಂತೆ ಹತ್ತಿತ್ತು. ಇದರಾಗ ಒಳ್ಳೆ ಯೋಚನೆಯೊಂದು ಹೊಳೀತು. ಅವ್ವಗ ಆ ಮನ್ಯಾಕಿಗೆ ಚಲೋ ಬಾಂಧವ್ಯ ಇತ್ತು, ಹಾಗಾಗಿ ಇಕಿ ಊಟ ಮಾಡಿ ಉಳಿದಿದ್ದೆಲ್ಲ ಅವರಿಗೆ ಕೊಡಾಕಿ, ಆಕಿಯೂ ಅವ್ವಂದು ಬಾಳ ಗುಣಗಾನ ಮಾಡುತ್ತಿದ್ದರಿಂದ ಇತ್ತಿತ್ತಲಾಗಿ ಮನೆಯಲ್ಲಿ ರೊಟ್ಟಿ ಬಡಿಯುವುದು ಹೆಚ್ಚಾಗಿತ್ತು, ಹೆಚ್ಚಾಗಿದ್ದು ಅವರ ಮನೆಗೆ ಸಾಗುತ್ತಿತ್ತು. ದಪ್ಪಾಗಿರುತ್ತಿದ್ದ ಅವ್ವಳ ಭಕ್ರಿ ತಿನ್ನೋದೆ ನಾವು ಬಿಸಿ ಇದ್ದಾಗಷ್ಟ, ನಮಗೆ

ಸೇರದವು ಅವರಿಗೆ ಸೇರುತ್ತವೆಯೆ? ಎಲ್ಲರ ಮನೆಯ ರುಚಿ ಕಂಡವರವರು. ಅವ್ವ ಕೊಟ್ಟಿದ್ದನ್ನೆಲ್ಲ ನಾಯಿಗೆ ಹಾಕುತ್ತಿರುವುದನ್ನು ನೋಡಿದ್ದೆ. ಅದು ಅವ್ವನ ದಪ್ಪನ ರೊಟ್ಟಿ ತಿಂದು ತಿಂದು ರಾತ್ರಿ ಹಾಯಾಗಿ ಮಲಗುತ್ತಿತ್ತು. ನಾನು ಅವ್ವಗ ಭೇದೋಪಾಯದಿಂದ ''ಅಲ್ಲ ಹೆಚ್ಚೆಚ್ಚು ಯಾಕ ಮಾಡತಿ, ಮಾಡಿದ್ದನ್ನು ಯಾಕ ಕೊಡತಿ, ಅವರೇನು ತಿಂತಾರೇನು ನಾಯಿಗೆ ಹಾಕ್ತಾರ'' ಅಂತ ಅಂದಿದ್ದೆ ತಡ ''ನಾನು ಮಾಡಿದ್ದು ನಾಯಿಗೆ ಹಾಕತಾರ!'' ಅಂತ ಕೆಂಡಾಮಂಡಲ ಆಗಿ 'ಪಾಪ, ತ್ರಾಸ ಅದಂತ ಕೊಟ್ರ ಇಷ್ಟು ಸೊಕ್ಕಾ....? ತಿನ್ನಲಿ ಕರಕು' ಅಂತ ಮರುದಿನದಿಂದ ಸ್ಟಾಪ್ ಮಾಡಿದ್ಲು. ಪುಣ್ಯಕ 'ಯಾಕ ಉಳಿದಿಲ್ಲೆನಬೆ?' ಎಂದಾಗ 'ಜ್ವಾಳ ಆಗ್ಯಾವವ' ಅಂತ ಹೇಳಿ ಕೈ ತೊಳಕೊಂಡು ನನ್ನ ಮಾನ ಉಳಿಸಿದ್ಲು. ಯಾವಾಗ ಮನಿಯಿಂದ ಹೋಗೋದು ನಿಂತಿತೋ ನಾಯಿಗೆ ತತ್ವಾರ ಆಯಿತು, ಅವ್ವನ ರೊಟ್ಟಿ ತಿಂದು ದಷ್ಟಪುಷ್ಟವಾಗಿದ್ದ ನಾಯಿ ಸೊರಗಾಕತಿತು. ಹೊಟ್ಟೆಗೆ ಸಾಲದೆ ಬೆಳತಾನ ಒದರಾಕತಿತು, ಅದೂ ಒದರಿಕೊಡಲೇ ಇವ 'ಆಯಿ ಆಯಿ' ಅಂತ ಹೊರಗ ಹೋಗಾಕ ಏಳತಿದ್ದ. ಇದಾ ಟೈಮಿನ್ಯಾಗ ಇವನ ಮಲಿ ತಿನ್ನೊ ಚಟ ಬಿಡಿಸಬೇಕಾಗಿತ್ತು. ನಾಯಿ ಸಲುವಾಗಿ ಇವ ಏಳತಿದ್ದ. ಇವನ ಸಲುವಾಗಿ ನಾವು ಏಳಬೇಕಾಗಿತ್ತು. ಅದ ನೆವದಾಗ ಮಲಿಗೆ ಪಟ್ಟಿಗಿಟ್ಟಿ ಹಚ್ಚಿ ಹೊರಗ ಗಾಳಿಗೆ ಕರಕೊಂಡು ಹೋಗಿ ಮಲಗಿಸಿಕೊಂಡು ಬರುತ್ತಿದ್ದರಿಂದ ಪ್ರಯತ್ನ ಫಲಕೊಡಾಕತಿತು. ಪಕ್ಕದ ಮನೆಯವರಿಗೂ ಕೂಲಿನಾಲಿ ಬರುವ ಆದಾಯ ಕಡಿಮೆಯಾಗಿ ನಾಯಿಗೂ ಹಾಕಕ ಏನು ಇಲ್ಲದಾಯಿತು. ಜಟ್ಟಿ ಬಿದ್ರೂ ಮೀಸೆ ಮಣ್ಣಾಗದು ಅನ್ನೊ ಹಾಂಗ ಏನು ಇರದಿದ್ದರೂ ಸಾಲ ಮಾಡಿ ಹಾಲು ತಂದು ಹಾಕದುಕೊಂಡು ಪಿತ್ತ ನೆತ್ತಗೇರತ್ತಿತ್ತು. 'ಯಕ್ಕಾ ಶಿಲ್ಲಕ್ಕ ನಾಯಿಗೆ ಸ್ವಲ್ಪ ಹಾಲು ಹಾಕವ' ಎಂದು ಕೇಳುತ್ತಿದ್ದಾಗ ಮನಸ್ಸು ಕುದಿಯುತಿತ್ತು. ನಾಯಿ ಮುಂಡೇದಕ್ಕ ಇಲ್ಲಿದ್ರ ಸತ್ತಹೋಗತಿನಿ ಅಂತ ಭಯ ಆಯ್ತೇನೋ ಒಂದು ರಾತ್ರಿ ತಪ್ಪಿಸಿಕೊಂಡು ಓಡೇ ಹೋಗಿಬಿಡ್ತು. ಮರುದಿನ ಓಣಿತುಂಬಾ ಅವರು ಮನೆಯವರು ಹುಡುಕುತ್ತಿದ್ದಾಗ ಈಕಿ ಬಂದು ''ನಾಯಿ ಪಾಪ, ಕಳಚಗೊಂಡು ಹೋಯ್ತಂತ'' ಅಂದ್ಲು. ನನಗ ಖುಷಿ ಆಯ್ತು. ಹಿಂದಿನ ರಾತ್ರಿ ಮನಿ ಬಾಗಲ ಹತ್ರ ಬಂದು ಮೂಸಿ ನೋಡಿ 'ಮೋ ಮೋ' ಅಂತ ಒದರಿದ್ದು ''ಅಪ್ಪಾ, ಆಯಿ ಬಂತು, ಆಯಿ ಬಂತು'' ಅಂತ ಇವ ಎಬ್ಬಿಸಿದ್ದ. ''ಅಲ್ಲಲೇ ಅದೂ ಆಯಿ ಅಲ್ಲ ಆನಿ, ಎತ್ತಿಕೊಂಡು ಹೋಗುತ್ತ'' ಅಂತ ಹೆದರಿಸಿ ಮಲಗಿಸಿದ್ದೆ. ಪೀಡ ಹೋಯ್ತು ಅಂತ ಈಗ ನಿರಮ್ಮಳನಾಗಿದ್ದೇನೆ. ಅದರ ಬಗ್ಗೆ ಏನೆ ಸಿಟ್ಟಿದ್ದರೂ ಪಾಪ, ಸಮುನ ಕೊನೆ ಬಾರಿ ನೋಡಲು ಬಂದಿದ್ದ ನಾಯಿಗೆ ಅವಕಾಶ ಕೊಡದಿದ್ದಕ್ಕೆ ನನಗೆ ಪಾಪ ಪ್ರಜ್ಞೆ ಕಾಡುತ್ತಿದೆ.

---

ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಇದ್ದಷ್ಟೇ ಪಾಂಡಿತ್ಯ ಪಾಶ್ಚಾತ್ಯ ಸಂಗೀತದಲ್ಲೂ ಇತ್ತು. ಸ್ವತಃ ತಾವೇ ಅನೇಕ ವಾದ್ಯಗಳನ್ನು ನುಡಿಸುತ್ತಿದ್ದರು. ಜೊತೆಗೆ ಇತರರು ನುಡಿಸುವಾಗ ಅದರಲ್ಲಿ ಏನಾದರೂ ತಪ್ಪುಗಳು ನುಸುಳಿದರೆ ತಕ್ಷಣ ಅದನ್ನು ಗುರುತಿಸುತ್ತಿದ್ದರು. ಹೀಗಾಗಿ ಮಹಾರಾಜರ ಎದುರು ಸಂಗೀತ ನುಡಿಸುವುದು ಎಂದರೆ ಎಲ್ಲಾ ಸಂಗೀತಗಾರರಿಗೂ ಒಂದು ರೀತಿ ನಡುಕ ಇರುತ್ತಿತ್ತು.



**ದಸರಾ ವಿಶೇಷ**

# ಕೊನೆಯ ಜರ್ನಿ

- ರಮ್ಯ

'**ಬೇ**ಗ ನಡಿಯೋಣ ಸುಧಾ! ನಾವು ಡೈನಿಂಗ್ ಹಾಲ್ ಸೇರೋದ್ರಲ್ಲಿ ಎಲ್ಲಾರೂ ತಿಂದು ತೇಗಿರ್ತಾರೆ. ಆಮೇಲೆ ನಮಗೆ ಸಿಗೋದು, ತಳ ಸೀದಿರೋ ಅನ್ನ, ತರಕಾರಿ ಇಲ್ದಿರೋ ಸಾಂಬಾರು ಅಷ್ಟೆ.'

'ಇಂದಿರ, ಸ್ವಲ್ಪ ತಡೀರಿ... ಲೇಟಾದ್ರೆ ಏನು? ಸದ್ಯ , ನಮಗೇಂತ ಯಾವುದೋ ಒಂದು ಊಟಾಂತ ಇರುತ್ತಲ್ಲ, ಹಗಲೂ ರಾತ್ರಿ, ಬೆಂದು ಹೋಗೋ ಬೇಸಿಗೇಲಿ, ಕೈ ಕಾಲು ಮರಗಟ್ಟೋ ಆ ಛಳೀಲಿ ಒಲೆ ಮುಂದೆ ನಿಂತು ಅನ್ನ ಬೇಯಿಸೋ ಕಾಟ ತಪ್ತಲ್ಲ! ಆ ದಿನಗಳನ್ನ ನೆನೆಸ್ಕೊಂಡ್ರೆ ಈಗ್ಲೂ ಮೈಯೆಲ್ಲಾ ಝುಂ ಅನ್ನುತ್ತೆ..... ಕೈಲಿ ಏನಿಟ್ಕೊಂಡಿದಿರಾ?'

'ಅದೂ ನಿಜಾನೆ... ಅಡುಗೆ ಮನೇಲೇ ಅರ್ಧ ಜೀವನ ತೇದಿದ್ದೀವಿ..... ಅದನ್ನ ಮರೆಯೋ ಹಾಗಿಲ್ಲ... ನನ್ನ ಕೈ ಲಾ..? ಮೊನ್ನೆ ಮಗ ವಿಸಿಟರ್ ಕೈಲಿ ಎಮ್.ಟಿ. ಆರ್. ನಿಂಬೇಕಾಯಿ ಉಪ್ಪಿನಕಾಯಿ ಕಳ್ಸಿದಾನೆ. ಅವರಿಗೆ ಉಪ್ಪಿನಕಾಯಿಂದ್ರೆ ಪ್ರಾಣ.'

'ಪರವಾಗಿಲ್ಲ.. ನಿಮಗೆ ಆಗಾಗ ತಿನ್ನೋದಕ್ಕೆ ಏನಾದ್ರು ಒಂದು ಪಾರ್ಸಲ್ ಬರ್ತಾ ಇರುತ್ತೆ... ಎಲ್ಲಿ ಯಜಮಾನ್ರು? ಕಂಪ್ಯೂಟರ್ ಮುಂದೆ ಕೂತಿದಾರಾ? ನಮ್ಮವ್ರಿಗಂತೂ ಅದು ಮುಂದಿದ್ರೆ ಬೇರೆ ಏನೂ ಬೇಡ...'

'ಅದೇ ಅವರುಗಳ ಲೇಟೆಸ್ಟ್ ಗರ್ಲ್‌ಫ್ರೆಂಡ್.... ನೀ ನಡಿ ಬರ್ತೀನಂದ್ರು. ಅವ್ರೆಲ್ಲಾ ಸೇರಿ ಸ್ಕೈಪನಲ್ಲಿ ಪ್ರಸಾದ್‌ನ ಮಗಳ ಹತ್ರ ಮಾತಾಡ್ತಿದಾರೆ. ಇವತ್ತು ಅವಳ ಬರ್ತಡೇ.'

'ಬರ್ತಡೇ ಅಂದ್ರೆ ಜ್ಞಾಪಕಕ್ಕೆ ಬಂತು. ಇವತ್ತು ಧಿರೂಭಾಯ್ ಅಂಬಾನಿ ಬರ್ತ್ ಆನಿವರ್ಸರಿ ಅಂತೆ. ನಮ್ಮ ಟ್ರಸ್ಟಿನೂ ಧಿರೂಭಾಯ್ನೂ ಬಹಳ ಗಳಸ್ಯ ಕಂಠಸ್ಯ ಅಂತಲ್ಲ.... ತಿರುಪತಿಯಿಂದ ಸ್ಪೆಷಲ್ ಲಾಡು ಕಟ್ಸಿ ಪ್ಲೇನ್ನಲ್ಲಿ ಕಳ್ಸಿದಾನಂತೆ ಮುಖೇಶ್ ಅಂಬಾನಿ. ಬೆಳಿಗ್ಗೆ ಬೆಡ್ ಟಿ ತಂದಾಗ ಬೇರರ್ ಹೇಳ್ದ... ಬೇಗ ಹೋಗ್ದಿದ್ರೆ ಅದು ಮೂಸಿ ನೋಡಕ್ಕೂ ಸಿಗಲ್ಲ.'

'ಹೌದಾ! ಅದಕ್ಕೆ ಇವತ್ತು ಬೆಳಿಗ್ಗೆ ವಾಕಿಂಗ್‌ನಲ್ಲಿ ನೀವು ಎಕ್ಸ್‌ಟ್ರಾ ರೌಂಡು ಹೊಡೀತಿದ್ರಿ..! ಎನಿವೇ.. ಬೇಗ ಹೋಗೋಣ.. ಅಂಬಾನಿ ಅವರ ಫೀಸ್ಟೂಂದ್ರೆ ಜಬರ್ದಸ್ತಾಗಿರುತ್ತೆ. ಎಷ್ಟಾದ್ರೂ ಗುಜರಾತಿಗಳು.'

'ಅದ್ಸರಿ! ನಮ್ಮ ಮುಂಗುಸಿ ಡಾಕ್ಟರ್ ನಿಮಗೆ ನಿಮ್ಮವರಿಗೆ ಲಾಡು ತಿನ್ನೋದಕ್ಕೆ ಬಿಡ್ತಾನಾ? ಬೆಳಿಗ್ಗೆ ಬ್ಲಡ್ ಪ್ರೆಷರ್, ಬ್ಲಡ್ ಶುಗರ್ ಚೆಕ್ ಮಾಡುವಾಗ್ಲೇ ಡಯಟ್ ವಿಚಾರ ದಿನಾ ಲೆಕ್ಚರ್ ಹೊಡೀತಾನೆ ನಿಮ್ಗೆ. ಎದುರಿಗೆ ಅವನಿಲ್ದಿದ್ರೂ ಬೇರೆವ್ರಿಂದ ನೀವು ತಿಂದಿದ್ದು ಮೆಸೇಜ್ ಅವ್ನಿಗೆ ಹೋಗಲ್ವಾ?'

'ಊಟ ಬಡಿಸೋವ್ರಿಗೆ ಮುಂಚೇನೇ ಅಡ್ಜಸ್ಟ್ ಮಾಡ್ಕೊಂಡಿದೀನಿ. ಹಬ್ಬ ಹರಿದಿನಾಂದ್ರೆ ಸ್ವೀಟ್ಸು ತಿನ್ದೇ ಇರಕ್ಕೆ ಆಗುತ್ಯೇ? ನನ್ನ ಮಗಳು ಮುಂದಿನ ತಿಂಗಳು ಫಾರಿನ್‌ನಿಂದ ನನಗೆ

ಸ್ಮಾರ್ಟ್ ಫೋನ್ ತಂದಾಗ ನನ್ನ ಹಳೇ ಮೊಬೈಲ್ ಕೊಡ್ತಿನೀಂತ ಇವ್ರಿಗೆಲ್ಲಾ ಪ್ರಾಮಿಸ್ ಮಾಡೀದೀನಿ. ಅದಕ್ಕೆ ನಾವು ಸ್ವೀಟ್ಸ್ ತಿಂದಾಗ್ಲೂ ಇವ್ರೆಲ್ಲಾ ತೆಪ್ಪಗಿರ್ತಾರೆ!'

'ಹ..ಹ.. ನೀವು ಸರೀನಪ್ಪಾ! ಒಂದು ಮೋಬೈಲ್ನ ಆಸೆ ತೋರ್ಸಿ ಎಲ್ಲಾರ್ನೂ ಫಿಕ್ಸ್ ಮಾಡಿದೀರ..!'

'ಇಲ್ದಿದ್ದರೆ ಹೇಗೆ ಆಗುತ್ತೆ ಹೇಳಿ? ನಿಮಗೆ ಎಕ್ಸ್ಟ್ರಾ ಎರೆಡು ಬಕೆಟ್ ಹಾಟ್ ವಾಟರ್ ದಿನಾ ನಿಮ್ಮ ರೂಮಿಗೆ ಹೇಗೆ ಬರುತ್ತೆ? ನೀವು ಸರ್ವೆಂಟಿಗೆ ದೀಪಾವಳಿಗೆ ಮೈಸೂರ್ ಸಿಲ್ಕ್ ಸೀರೆ ಆಸೆ ತೋರಿಸೇ ಅಲ್ವಾ?'

'ಮತ್ತೇನ್ ಮಾಡ್ಲಿ? ನಲ್ಲಿಯಿಂದ ಬಿಸಿ ನೀರೂಂತ ಬರೋದು ಬರೀ ಹೆಸರಗಷ್ಟೆ! ಈ ಛಳಿಗೆ ಬಿಸಿ ನೀರಿಲ್ದೆ ನಮ್ಕೈಲಾಗಲ್ಲಪ್ಪ, ಕಾಲ್ಗೂ ಅಷ್ಟೆ. ಎಷ್ಟೋ ರೇಷ್ಮೆ ಸೀರೆಗಳು ಹಾಗೆ ಬಿದ್ದಿದೆ, ಅದನ್ನೆಲ್ಲಾ ಇನ್ನು ಎಲ್ಲಿ ಉಡೋದು ಹೇಳಿ; ಇದಕ್ಕಾದ್ರೂ ಉಪಯೋಗಕ್ಕೆ ಬರ್ಲಿ.'

'ವೆರಿ ಪ್ರಾಕ್ಟಿಕಲ್ ನೀವು...... ಸದ್ಯ ಸೇರಿದ್ವಲ್ಲಾ..... ಚೇರ್ ಮೇಲೆ ಕರ್ಚೀಫ್ ಹಾಕ್ಬಿಡೋಣಾ.. ಇಲ್ದಿದ್ರೆ ಇವ್ರುಗಳು ಬರೋದ್ರಲ್ಲಿ ಹೌಸ್ ಫುಲ್ ಆಗ್ಹೋಗುತ್ತೆ.'

★★★

'ಹ್ಯಾಪೀ ಬರ್ತಡೇ, ಸುಮಿ! ಮೈ ಫ್ರೆಂಡ್ಸ್ ನಿನ್ಗೆ ವಿಶ್ ಮಾಡಕ್ಕೆ ಬಂದಿದಾರೆ.'

'ಥ್ಯಾಂಕ್ಯೂ ಡ್ಯಾಡಿ. ಥ್ಯಾಂಕ್ಸ್, ಆಲ್ ಅಫ್ ಯು.'

'ಒಕೆ ಬೇಟಾ.. ಟೇಕ್ ಕೇರ್... ಟೈಮ್ ಫರ್ ಅವರ್ ಲಂಚ್... ಬೈ... ಎಲ್ಲಿ ಲೇಡೀಸ್?'

'ಅವ್ರೆಲ್ಲಾ ಆವಾಗ್ಲೇ ಡೈನಿಂಗ್ ರೂಮ್ಗೆ ಧಾಳಿ ಮಾಡಿದಾರೆ. ವಿ ಆರ್ ಲೇಟ್. ಬನ್ನಿ ಬೇಗ ಹೋಗೋಣ.'

'ಹೌದು. ಇಲ್ಲಿ ಲೇಟಾದ್ರೆ ಹೊಟ್ಟೆಗೆ ಪಂಗನಾಮನೆ! ಅದೇ ಫಸ್ಟ್ ಲೆಸನ್ ನಾವು ಇಲ್ಲಿಗೆ ಬಂದ ಮೇಲೆ ಕಲಿತಿದ್ದು. ನಮ್ಮ ಆಫೀಸಿನ ಲಂಚ್ ಮರೆಯೋ ಹಾಗೇ ಇಲ್ಲ... ಯಾವಾಗ್ಲೂ ಬಿಸಿ ಬಿಸಿಯಾಗಿ ಊಟ ಸಿಗೋದು. ಕ್ಯಾಬಿನ್ಗೆ ಸ್ಪೆಷಲ್ ಮೀಲ್ಸ್ ತರಿಸ್ಕೊಂಡು ಊಟ ಮಾಡಿದ್ದ ಕಾಲ ಮರ್ತೇ ಹೋಗಿದೆ. ಬೇರರ್ಸ್ ಅಲ್ಲೇ ಬಂದು ಮೀಲ್ಸ್ ಸರ್ವ್ ಮಾಡ್ತಾ ಇದ್ರು. ಚೆನ್ನಾಗಿ ಮುಕ್ಕಿ ಸಣ್ಣ ನ್ಯಾಪ್ ಹೊಡೀತಿದ್ದೆ. ಈಗ ಊಟಕ್ಕೆ ಓಡಿಹೋಗಿ ಸೀಟು ಹಿಡಿಬೇಕಾಗಿದೆ, ಎಂಥ ಕಾಲ ಬಂತಪ್ಪಾ!'

'ಪಾಸ್ಟ್ ಮೆಮರೀಸ್ ಆರ್ ಆಫ್ ನೋ ಯೂಸ್!' ಬೋಳಿ ತನ್ನ ತುರುಬನ್ನು ಮತ್ತೆ ಮತ್ತೆ ಮುಟ್ನೋಡ್ಕೊಂಡು ಅತ್ಲಂತೆ. 'ಹಾಗೆ! ಈಗ ಓಡಿ ಸೀಟು ಹಿಡಿಯೋದು ಒಳ್ಳೇದು... ಇವತ್ತು ಮುಖೇಶ್ ಅಂಬಾನಿ ಗ್ರೂಪಿನವರು ಲಾಡು ಕಳಿಸಿದಾರಂತೆ. ನನ್ನ ನೆವ್ಯೂ ಕಸ್ಟಮಸ್‌ನಿಂದ ಫೋನ್ ಮಾಡಿ ಹೇಳ್ದ. ತಿರುಪತಿಯಿಂದ ಕನ್ಸೈನ್ಮೆಂಟು ಕ್ಲಿಯರ್ ಆಗಿ ಈಗ ನಮ್ಕಡೆ ಬರ್ತಿದೆಯಂತೆ. ಎನಿ ಟೈಮ್ ಬಂದು ಸೇರುತ್ತೆ. ಲೆಟ್ಸ್ ರಷ್.'

'ಇನ್ನೊಂದು ನ್ಯೂಸ್. ಅನಿಲ್ ಅಂಬಾನಿನೂ ಸ್ವೀಟ್ಸು ಕೊರಿಯರ್ ಮೂಲಕ ಕಳಿಸಿದಾನಂತೆ. ನನಗೆ ಆಫೀಸ್ ಬಾಯ್ ಹೇಳ್ದ.'

‘ಈ ಬ್ರದರ್ಸ್ ಫನ್ನಿ, ಎಲ್ಲಾದಕ್ಕು ಕಂಪ್ಲೀಟ್ ಮಾಡ್ತಾರೆ. ನಾನು ಬಹಳ ಪ್ರಾಜೆಕ್ಟ್‌ಗಳಲ್ಲಿ ನೋಡಿದೀನಿ. ಯಾವಾಗ್ಲೂ ಅವರ ಮಧ್ಯ ‘ಅನ್ ಡಿಕ್ಲೇರ್ಡ್ ವಾರ್’ ಇದ್ದೇ ಇರುತ್ತೆ.’

‘ನಮ್ಮ ಅದೃಷ್ಟ ಇವತ್ತು! ಇವರ ವಾರ್ ನಮ್ಮ ಮನೆ ಬಾಗ್ಲಿಗೆ ಬಂದಿಳಿದಿದೆ. ಅದಕ್ಕೆ ಇಲ್ಲಿ ಗ್ರ್ಯಾಂಡ್ ಪಾರ್ಟಿ ಎಂಡ್ ಸ್ವೀಟ್ಸ್ ಸುರಿ ಮಳೆ!’

‘ನಾಳೆ ರಿಲಯನ್ಸ್‌ನಿಂದ ಒಂದು ಡಾಕ್ಟರ್ ಗ್ರೂಪ್ ಬಂದು ನಮಗೆಲ್ಲಾ ಕಂಪ್ಲೀಟ್ ಬಾಡಿ ಚೆಕಪ್ ಮಾಡ್ತಾರಂತೆ.’

‘ಒಳ್ಳೇದೇ ಬಿಡಿ. ಇಷ್ಟೆಲ್ಲಾ ಸ್ವೀಟ್ಸ್ ತಿಂದ್ಮೇಲೆ ಗಾಡ್ ನೋಸ್ ಏನು ಪ್ರಾಬ್ಲಂ ಬರುತ್ತೋ!’

★★★

ಇದು ದೇಶ ವಿದೇಶದಲ್ಲಿ ಕೆಲ್ಸ ಮಾಡಿ, ಉದ್ಯಮದಲ್ಲಿ ಕೀರ್ತಿ ಪತಾಕೆಯನ್ನು ಹಾರಿಸಿ, ಬೇರೆ ಬೇರೆ ಊರ್ನಲ್ಲಿ ರಿಟೈರ್ ಆಗಿ, ಮಕ್ಕಳೆಲ್ಲಾರ್ನು ಸೆಟಲ್ ಮಾಡ್ಸಿ, ಈಗ ನಾಯಿಕೊಡೆಯ ಹಾಗೆ ಉದ್ಭವಿಸುತ್ತಿರುವ ವೃದ್ಧಾಶ್ರಮಗಳಲ್ಲಿ ಅಕ್ಕ ಪಕ್ಕದ ರೂಮಿನಲ್ಲಿ ಸೆಟಲ್ ಆಗಿರೋ ಸೀನಿಯರ್ ಸಿಟಿಝನ್ಸ್‌ರ ಒಂದು ಸ್ಯಾಂಪಲ್ ದಿನಚರಿ.




"ಏನು ಐಯ್ಯಂಗಾರ್ರೆ, ಈ ವರ್ಷವಾದರೂ
ನಿಮ್ಮ ಮಗಳು ಪರೀಕ್ಷೇಲಿ ಪಾಸು ಮಾಡಿದಳೇ ?"
"ಅಯ್ಯೋ ! ಅದೇನ್ ಹೇಳ್ತೀರಾ ಶಾಸ್ತ್ರಿಗಳೇ ,
ಎಲ್ಲಾ ನನ್ನ ಹಣೆ ಬರಹ ನೋಡಿ ... !!"

# ಬಾಪೂಜಿ ಮತ್ತು ಕಪಿತ್ರಯರು

**- ಎಚ್. ಶಾಂತರಾಜ ಐತಾಳ**

**ಆ**ವತ್ತು ರಾತ್ರಿ ದೂರದರ್ಶನದ ಒಂದು ವಾಹಿನಿಯಲ್ಲಿ ಚಿತ್ರ ನಟಿಯೋರ್ವಳಿಗೆ ಆಕೆಯ ಹಳೆಯ ಸಖನೊಬ್ಬ ನೀಡಿದ ಹಿಂಸೆಯನ್ನು ಎಳೆಎಳೆಯಾಗಿ ಪ್ರಸಾರ ಮಾಡುತ್ತಿದ್ದರು. ಟಿ.ವಿ. ಎದುರಿನ ಸೋಫಾದಲ್ಲಿ ಕೂತುಕೊಂಡು ಆ ದೃಶ್ಯಗಳಲ್ಲೇ ಮಗ್ನಳಾಗಿದ್ದ ವಿಜಿ, ಅಲ್ಲಿ 'ಈಗ ಒಂದು ಪುಟ್ಟ ವಿರಾಮ' ಎನ್ನುವಾಗಲೇ ವಾಸ್ತವ ಜಗತ್ತಿಗೆ ಬಂದದ್ದು. ಅವಳು ಕಣ್ಣೊರೆಸಿಕೊಳ್ಳುವುದನ್ನು ಮರು ದಿನದ ಕೆಲಸದ ಬಗ್ಗೆ ಯೋಚಿಸುತ್ತಿದ್ದ ನಾನು ನೋಡಿಬಿಟ್ಟೆ.

ಏನೂ, ಅಶೋಕವನದಲ್ಲಿ ದುಃಖತಪ್ತರಾದ ಸೀತಾದೇವಿಯವರು ಇದ್ದಕ್ಕಿದ್ದ ಹಾಗೆ ಸಮಾಧಾನಚಿತ್ತರಾಗಿ ಬಿಟ್ಟಿರಲ್ಲ?' - ಎಂಬ ನನ್ನ ಎಂದಿನ ಧಾಟಿಯಲ್ಲಿ ಪ್ರಶ್ನಿಸಿದೆ.

'ಏಕೆಂದರೆ ಸೀತಾದೇವಿಯ ಎದುರಿಗೆ ಹನುಮಂತ ಹಾಜರಾದನಲ್ಲಾ - ಅದಕ್ಕಾಗಿ' ಎಂದು ನನ್ನ ಮುಖಕ್ಕೇ ಮಂಗಳಾರತಿ ಮಾಡಿಬಿಟ್ಟಳು ವಿಜಿ. ಟಿ.ವಿ.ಯವರ ಪುಟ್ಟ ವಿರಾಮದ ಹೊತ್ತಿಗೆ ಕರೆಂಟ್ ಸಹ ಪೂರ್ಣ ವಿರಾಮ ನೀಡಿಬಿಟ್ಟಿತು. ಆಮೇಲೆ ಪ್ರತ್ಯಕ್ಷವಾದ ಮೇಣದ ಬತ್ತಿಯ ಮಂದ ಬೆಳಕಿನಲ್ಲಿ ತೇಲಿ ಬಂತು ವಿಜಿಯ ಪ್ರಶ್ನೆ.

'ನೋಡಿ ರಾಜಾ, ಈಗ ನಾನೊಂದು ಕೇಳ್ತೇನೆ - ಹನುಮಂತ ಅನ್ನುವಾಗ ನೆನಪಾಯ್ತು. ನೀವು ಮನಮೋಹನ್ ಸಿಂಗ್ ಸ್ಟೈಲ್‌ನಲ್ಲಿ ಯೋಚನೆ ಮಾಡದೆ ಸೀದಾ ಉತ್ತರ ಕೊಡಬೇಕು. ಆಯ್ತಾ?'

ಆಯ್ತು ಮಹರಾಯ್ತಿ. ಉತ್ತರಕ್ಕೆ ನಾಲ್ಕು ಆಯ್ಕೆಗಳನ್ನೂ ಕೊಟ್ಟುಬಿಟ್ಟರೆ ಒಳ್ಳೇದು, ಟೀಚರಮ್ಮ.

ನೋಡಿ, ಯಾವುದೋ ಒಂದು ವಸ್ತು ಕೈಗೆ ಸಿಗ್ತಾ ಇಲ್ಲ, ಆದ್ರೆ ಎಲ್ಲಿದೆ ಎಂದು ನಮಗೆ ಗೊತ್ತಿರುತ್ತದೆ. ಹಾಗಾದರೆ ಅದು ಕಳೆದು ಹೋದ ಹಾಗೆ ಆಗ್ತದಾ?

ವಸ್ತು ಎಲ್ಲಿದೆ ಅಂತ ಗೊತ್ತಿದೆಯಾ?

ಹೌದು.

'ಮತ್ತೆ ಅದು ಕಳೆದು ಹೋದ ಹಾಗೆ ಆಗೋದು ಹೇಗೆ?' ಇಂತಹ ಪ್ರಶ್ನೆ ನೀನೆಲ್ಲಿಯಾದರೂ ಖಾಕಿ ಬಟ್ಟೆಯವರ ಹತ್ರ ಕೇಳಿದರೆ, ಮೊದಲಿಗೆ ನಿನ್ನನ್ನೇ ಸಂಶಯದಿಂದ ನೋಡಿ ಸ್ಟೇಶನ್ನಿಗೆ ಕರೆಸಿಯಾರು, ಜಾಗ್ರತೆ. ಹೋಗ್ಲಿ ಈಗ ಹೇಳು ವಸ್ತು ಯಾವುದು, ಸ್ಥಳ ಎಲ್ಲಿದೆ ಅಂತ ಐವತ್ತು ರೂಪಾಯಿ ಕಾಣಿಕೆ ಇಟ್ಟ ಮೇಲೆ ಕಳಪೇಟೆ ಗಿಡ್ಡಾ ಜೋಯಿಸರು ತಮ್ಮ ಗಿರಾಕಿಗಳಿಗೆ ಇಂತದ್ದೇ ಪ್ರಶ್ನೆ ಕೇಳುವುದಂತೆ.

'ಅದೇರಿ ನೀವೂ, ಪ್ರಸಾದ್ ಮತ್ತು ಅಕೌಂಟೆಂಟ್ ಜೋಸೆಫ್ ಸೇರಿ ಅವತ್ತೊಮ್ಮೆ ಫ್ಯಾನ್ಸಿಡ್ರೆಸ್ ಹಾಕಿದ್ರಲ್ಲಾ ಗಾಂಧೀಜಿಯವರ ಮೂರು ಮಂಗಗಳ ಹಾಗೆ - ಅದಕ್ಕೊಂದು ಪ್ರೈಜ್ ಕೂಡಾ ಬಂದಿತ್ತಲ್ಲ?'

‘ಹೌದು ಹೌದು – ಅದೇ ಮೂರು ಕೋತಿಗಳ ಕಂಚಿನ ಪ್ರತಿಮೆ ಬಂದಿತ್ತು ಮೂವರಿಗೂ. ಏನಾಯ್ತು ಅದಕ್ಕೆ?’

‘ಹೌದು, ಆ ಪ್ರತಿಮೆ ಮೇಲೆ ಎಷ್ಟು ಧೂಳು ಕೂತಿತ್ತೆಂದರೆ ಅದೇನೂಂತಲೇ ಗೊತ್ತಾಗ್ತಿರ್ಲಿಲ್ಲ. ಮೊನ್ನೆ ವಿಶಾಲು ಬಂದಿದ್ದಲ್ಲ ಅವಳು ಅದನ್ನು ನೋಡಿ – ಮಲಗಿರುವ ಗಣೇಶನ ಪ್ರತಿಮೆ ಭಾರೀ ಅಪರೂಪದ್ದು ಅಲ್ವೇನೆ? – ಅಂತೆಲ್ಲ ತಾರೀಫು ಮಾಡಿದ್ಲು. ಅದನ್ನು ಇವತ್ತು ಚೊಕ್ಕ ಮಾಡಿ ಬಾವಿ ದಂಡೆ ಮೇಲೆ ಇಡುವಾಗ ಕೈ ಜಾರಿ ಬಾವಿ ಒಳಗೆ ಬಿದ್ದು ಬಿಡ್ತೂರಿ. ಮಾತ್ರ ಬಾವಿಯ ಅಡಿಯಲ್ಲಿ ಸ್ಪಷ್ಟವಾಗಿ ಕಾಣ್ತಾ ಇದೆ, ಈಗ್ಲೂ. ಅದಕ್ಕೇ ಹೇಳಿದೆ – ಕಳೆದು ಹೋಗಿದ್ರೂ ಕಾಣ್ತಾ ಇದೆ ಅಂತ. ತನಿಯಪ್ಪ ಎಲ್ಲಿಯಾದ್ರೂ ಬಂದ್ರೆ ತೆಗ್ಸಿ ಬಿಡ್ರೀ. ಮತ್ತೆ ಅದರೊಟ್ಟಿಗೆ ಆವತ್ತು ಹಗ್ಗ ತುಂಡಾಗಿ ಬಿದ್ದ ಕೊಡಪಾನ, ಅಮ್ಮ ಕೊಟ್ಟ ನಾಲ್ಕು ಸ್ಟೀಲ್ ಲೋಟ, ದೀಪಾವಳಿ ದಿನ ಪುಟ್ಟ ಹಾಕಿದ ಜಾಗಂಟೆ – ಇವುಗಳನ್ನೂ ಮೇಲೆ ತರ್ಲಿಕ್ಕೆ ಹೇಳ್ಬೇಕು ರಾಜಾ – ಮರ್ತು ಬಿಡಬೇಡಿ.’

ನನಗೆ ಈ ಜನ್ಮದಲ್ಲಿ ಲಭಿಸಿದ ಒಂದೇ ಒಂದು ಪಾರಿತೋಷಕವನ್ನು ಜಲಾರ್ಪಣೆ ಮಾಡಿದ್ದಲ್ಲದೆ ಇನ್ನೂ ಹಲವಾರು ಅವಶೇಷಗಳನ್ನು ಅಗಲಕಿರಿದಾದ ಬಾವಿಯ ತಳದಿಂದ ತೆಗೆಸುವುದು – ಅದಕ್ಕಾಗಿ ಎಂಭತ್ತು ವರ್ಷದ ತನಿಯಪ್ಪನನ್ನು ನಿಯೋಜಿಸುವುದು – ಇದನ್ನೆಲ್ಲ ಕೇಳುತ್ತಾ ವಿಜಿಯನ್ನು ಇಡಿ ಇಡಿಯಾಗಿ ನುಂಗಿ ಬಿಡುವಷ್ಟು ಕೋಪ ಬಂದರೂ ಹತಾಶ ದನಿಯಲ್ಲಿ ನುಡಿದೆ – ‘ಹೋಗ್ಲಿ ಬಿಡು ಹತ್ತರ ಒಟ್ಟಿಗೆ ಹನ್ನೊಂದು – ಬಾವಿಯ ತಳದಲ್ಲಿ ಇವೆಲ್ಲ ಕ್ಷೇಮವಾಗಿರಲಿ.’

ಮುಂದೆ ಬಾವಿ ಬಳಿ ಹೋದಾಗಲೆಲ್ಲ ಆ ಮೂರು ಕೋತಿಗಳು ನನ್ನನ್ನು ಅಣಕಿಸುವಂತೆ ನನಗೆ ಭಾಸವಾಗುತ್ತಿತ್ತು. ಈ ಕೋತಿಗಳು ನೀಡಿದ ಸಂದೇಶಗಳನ್ನು ನಾನು ಕ್ರಮಬದ್ಧವಾಗಿ ವಿಜಿಗೆ ಟ್ರಾನ್ಸ್‌ಫಾರ್ ಮಾಡುತ್ತಾ ಇದ್ದೆ. ವಿಜಿಯಂತಹ ಅಪ್ರಾಪ್ತರಿಗೆ ಉಪದೇಶ ನೀಡುವುದನ್ನು ಸಹಿಸದ ಈ ಕಪಿತ್ರಯರು ತಾವಾಗಿಯೇ ಬಾವಿಯೊಳಗೆ ಹಾರಿರಬಹುದೇನೋ ಎಂಬ ಶಂಕೆಯೂ ನನ್ನನ್ನು ಕಾಡಲಾರಂಭಿಸಿತು. ವಿಜಿಗಂತೂ ಬಾಪೂಜಿಯ ಕೋತಿಗಳ ಮೇಲೆ ಯಾವಾಗಲೂ ಒಳಗೊಳಗೇ ಅಸಮಾಧಾನ ಕುದಿಯುತ್ತಲೇ ಇತ್ತು. ಮೊದಲೊಮ್ಮೆ ನನ್ನ ಬಳಿ ಈ ಬಗ್ಗೆ ತಕರಾರು ಮಾಡಿಯೂ ಇದ್ದಳು. ‘ರಾಜಾ ನಿಮ್ಮ ಮೂರು ಕೋತಿಗಳು ಬೋಧಿಸುವ ಹಾಗೆ ಕೆಟ್ಟದ್ದನ್ನು ನೋಡದೆ, ಕೇಳದೆ ಮಾತಾಡದೆ ಇದ್ದರೆ ಸಾಕಾ – ದಿಲ್ ಖುಷ್ ಆಗಿ ಇರೋದಕ್ಕೆ.’

‘ಓ ಯಸ್, ಯಾಕಿಲ್ಲ?’ ಅಂತ ನಾನು ಕೇಳಿದ್ದೆ.

‘ನೋಡಿ ನಮ್ಮ ಮನೆ ಪಕ್ಕದ ಬೀದೀಲಿ ಟೆಂಟ್ ಹಾಕಿದ್ದಾರಲ್ಲ – ಅಲ್ಲಿಯ ಮಕ್ಕಳು ದಿನಾ ನಮ್ಮನೆ ಎದುರೇ ಕೂತು..... ಎಲ್ಲ ಮಾಡ್ತಾವಲ್ರೀ – ಇದರ ಪರಿಹಾರಕ್ಕೆ ನಿಮ್ಮ ಯಾವ ಕೋತಿಯ ಮೂತಿ ನೋಡಬೇಕು ಹೇಳಿ?’

‘ಅಯ್ಯೋ, ಸಿಂಪಲ್ – ಎರಡೂ ಕಣ್ಣಿಗೆ ಅಂಗೈ ಒತ್ತಿ ಹಿಡಕೊಂಡ ಮಂಗಣ್ಣ ಹೇಳೋದು ಇದನ್ನೇ ಅಲ್ವೇನೇ? ಕೆಟ್ಟದ್ದನ್ನು ನೋಡಬೇಡಾ ಅಂತ?’

'ಆಯ್ತು ಕಣ್ಣುಮುಚ್ಚಿಕೊಳ್ತೇನೆ, ನಾಳೆ ಅದೇ ಮಕ್ಕಳು ನಮ್ಮನೆ ಗೇಟ್ ಎದುರೇ ಹೇಸಿಗೆ ಮಾಡಿ ಹೋಗ್ತವೆ. ಆಗ ನೀವೂ, ನಾನೂ ಮೂಗು ಮುಚ್ಚಿಕೊಳ್ಳಬೇಕಾಗುತ್ತೆ – ನೆನಪಿಡಿ ಇದನ್ನು ನಿಮ್ಮ ಗಾಂಧೀತಾತನ ಪ್ರೀತಿಯ ಕೋತಿಗಳೆಲ್ಲಿ ಹೇಳಿದ್ದಾವೆ ಹೇಳಿ ನನ್ನ ಕೋತಿ ರಾಜಾ.'

'ನೋಡು ವಿಜಿ ಮರೀ. ಹಾಗೆಲ್ಲ ನನ್ನನ್ನು ಅಣಕಿಸಬೇಡ. ನನ್ನ ತಾಳ್ಮೆಗೂ ಮಿತಿಯುಂಟು. ಕೋತಿರಾಜನ ಖ್ಯಾತಿ ನಿನಗೇನು ಗೊತ್ತು? ಹೋಗ್ಲಿ–ಗಾಂಧೀಜಿಯ ಅನುಮತಿ ಪಡೆದು ಮೂಗು ಮುಚ್ಚಿಕೊಂಡಿರುವ ಇನ್ನೊಂದು ಮಂಗನ ವಿಗ್ರಹವನ್ನು ತಂದರಾಯಿತು, ಬಿಡು.'

ಅಂತೂ ಮೂರರ ಒಟ್ಟಿಗೆ ಇನ್ನೊಂದು – ಮೂಗು ಮುಚ್ಚಿರುವ ಕಪಿ ಶ್ರೇಷ್ಠನ ಪ್ರತಿಮೆಯನ್ನು ಸೇರಿಸುವುದು ಎಂದಾಯಿತು.

ಇನ್ನೊಮ್ಮೆ ರಾತ್ರಿ ಹೊತ್ತು ನಾನೊಬ್ಬನೇ ಮಲಗಿದ್ದಾಗ – ಟಿ.ವಿ.ಯಲ್ಲಿ ಕ್ರೈಮ್ ಸ್ಟೋರಿ ಎಂಬ ನೀತಿಬೋಧಕ ಧಾರಾವಾಹಿ ವೀಕ್ಷಿಸಿ ಬಂದ ವಿಜಿ – ಅದೇ ಗುಂಗಿನಲ್ಲಿ ನನ್ನನ್ನು ಕೇಳಿದಳು – 'ರಾಜಾ ನಿಮ್ಮ ಕೊಲೀಗ್ ಪಾಂಡುರಂಗಪ್ಪ ರೇಪ್‌ಕೇಸ್‌ನಲ್ಲಿ ಸಿಕ್ಕಿ ಹಾಕಿಕೊಂಡ್ರಲ್ರೀ? ಅದನ್ನೆಲ್ಲ ಟೀವೀಲಿ ನೋಡ್ತಾ ನೋಡ್ತಾ ಈ ಗಂಡಸ್ರ ಜಾತಿ ಮೇಲೇ ಅಸಹ್ಯ ಆಗ್ತಾ ಇದೆ ನನಗೆ.'

ಅದಕ್ಕೆ ನಾನಂದೆ 'ಆಯ್ತು ಮಹಾತಾಯಿ – ಗಂಡಸ್ರ ಜಾತಿಯನ್ನೇ ಬಹಿಷ್ಕರಿಸಿ ಬಿಡಿ. ಆಗ ರೇಪ್ ಕೇಸ್ ಹಗರಣ ಇಲ್ಲ, ಬ್ರೀಫ್ ಕೇಸ್‌ನ ಝಣಝಣ ಮಾತ್ರ ಇರುತ್ತೆ. ಎಲ್ಲೆಲ್ಲೂ ಸುಖ ಸಂಪತ್ತು. ಏಕೆಂದರೆ ಪ್ರಮೀಳಾ ರಾಜ್ಯದಲ್ಲಿ ಸ್ತ್ರೀಯರಿಗಿಲ್ಲ ವಿಪತ್ತು.'

'ಸಾಕು ಬಿಡಿ, ರಾಜಾ ಒಳ್ಳೆ ಕವಿಯ ಹಾಗೆ ಮಾತಿಗೆ ಮಾತು ಪೋಣಿಸುತ್ತಾ, ನನ್ನ ತಲೆಯಿಂದ ಮುಖ್ಯ ವಿಷಯವನ್ನು ಹೈಜಾಕ್ ಮಾಡಬೇಡಿ. ಈಗ ಹೇಳಿ – ನಿಮ್ಮ ಗಾಂಧೀತಾತನ ಯಾವ ಕೋತಿ ಹೇಳ್ತದೆ – ಅತ್ಯಾಚಾರ ಮಾಡಬೇಡ – ರೇಪ್ ಈಸ್ ನಾಟ್ ಸೇಫ್ – ಅಂತ?'

'ಅಂದ್ರೆ ನಿನಗೆ ಇನ್ನೂ ಒಂದು ಮಂಗ ಬೇಕು ಅಂದ ಹಾಗಾಯ್ತು, ಅಲ್ಲಿಗೆ ಒಟ್ಟು ಐದು ಕೋತಿಗಳ ಮಂಕಿ ಬ್ರಿಗೇಡ್ ಸಿದ್ಧ ನಿಮ್ಮ ಸೇವೆಗಾಗಿ ಎಂದಾಯಿತು. ಆದರೆ ಈ ಐದನೇ ಕೋತಿ ಯಾವ ಸಂದೇಶ ಕೊಡಬೇಕು?'

'ಯಾವ ಸಂದೇಶ ಅಂದ್ರೆ – ಅತ್ಯಾಚಾರಿಗಳಿಗ ಎಚ್ಚರ ನೀಡುವಂತಿರಬೇಕು – ನೀವೇ ಹೇಳಿ ರಾಜಾ ಅದರ ಕೈಗಳ ಪೊಸಿಷನ್ ಹೇಗಿರಬೇಕು ಅಂತ.'

'ಅತ್ಯಾಚಾರಿಗಳಿಗೆ ಎಚ್ಚರ ನೀಡಬೇಕು ನಿನ್ನ ಕೋತಿ ಅಂದ್ರೆ ಅದು ಈ ರೀತಿ ಮಾಡಬೇಕು.'

ನನ್ನ ಕೈಗಳ ಸಂಜ್ಞೆ ವಿಜಿಗೆ ಚೂರೂ ಇಷ್ಟವಾದ ಹಾಗೆ ಕಾಣಲಿಲ್ಲ, ಅಲ್ಲ, ಅತ್ಯಾಚಾರ ಮಾಡಬೇಡಪ್ಪಾ ಅಂತ ಕೈ ಸನ್ನೆಯಲ್ಲೇ ಇದಕ್ಕಿಂತ ಪರಿಣಾಮಕಾರಿಯಾಗಿ ತೋರಿಸೋದು ಹೇಗೆ ಅಂತ ನನಗಂತೂ ಹೊಳೀಲಿಲ್ಲ.

ಅಂತೂ ವಿಜಿಯ ಕೈ ತಪ್ಪಿಯೋ, ಮನ ಒಪ್ಪಿಯೋ – ನನ್ನ ಅಮೂಲ್ಯ, ಏಕಮೇವ ಪಾರಿತೋಷಕವೊಂದು ಆಗಸದ ಚಂದ್ರನಂತಾಯಿತು – ಕಣ್ಣಿಂದ ನೋಡಬಹುದು. ಆದರೆ ಕೈಯಿಂದ ಮುಟ್ಟಲಾರೆ.

ಮೊನ್ನೆ ಮಹಿಳಾ ಸಮಾಜದ ಯಾವುದೋ ಕಾರ್ಯಕ್ರಮ ಮುಗಿಸಿ ಬಂದ ವಿಜಿ ಈ ಕಪಿತ್ರಯರನ್ನು ಮತ್ತೆ ನೆನಪಿನ ರಂಗಸ್ಥಳಕ್ಕೆ ಬರಮಾಡಿದಳು.

'ರಾಜಾ ನಿಮ್ಮ ಕೋತಿಗಳ ಬಗ್ಗೆ ನಮ್ಮ ಅಧ್ಯಕ್ಷೆ ಶುಭಾಂಗಿ ಮೇಡಮ್ ಚೆನ್ನಾಗಿ ಮಾತಾಡಿದ್ರು.'


'ಹೌದು ಮಾತಾಡಲೇ ಬೇಕಲ್ಲ? ಇಡೀ ಸ್ತ್ರೀ ಸಮುದಾಯಕ್ಕೇ ಈ ಕೋತಿಗಳು ಸಂದೇಶ ನೀಡಿವೆ – ಎನ್ನುವ ಸತ್ಯ ಅವರಿಗೆ ಗೊತ್ತಿರಲೇ ಬೇಕು.'

'ಕರೆಕ್ಟ್ ರಾಜಾ – ಈ ಸಂದೇಶ ಎಚ್ಚರಿಕೆ ಎಲ್ಲ ಮಹಿಳೆಯರಿಗೂ ತಿಳಿಯಬೇಕು. ದೇಶದಲ್ಲಿ ಕೆಲ ಪುರುಷ ಮೃಗಗಳು ಮಾಡುತ್ತಿರುವ ಕೆಟ್ಟ ಕೃತ್ಯಗಳನ್ನು ನೋಡಬೇಡಿ, ಕೇಳಬೇಡಿ ಹಾಗೂ ಅವರ ವಿಷಯ ನುಡಿಯಬೇಡಿ – ಎಂದೆಲ್ಲಾ ಭಾರೀ ಇಫೆಕ್ಟಿವ್ ಆಗಿ ವಿವರಿಸಿದರು.'

ಅಂದ್ರೆ ಗಂಡಸರ ವಿರುದ್ಧವೇ ಎಚ್ಚರಿಕೆ ನೀಡುತ್ತಿವೆಯಾ ಈ ಕೋತಿಗಳು? ಹಾಗಾದರೆ ಅವುಗಳನ್ನು ಆರಾಧನೆ ಮಾಡುವ ಕೆಲಸ ನನಗ್ಯಾಕೆ? ಬಾವಿಯಲ್ಲೇ ಬಿದ್ದಿರಲಿ ಅವುಗಳ ಪ್ರತಿಮೆ – ಅಂದ್ಕೊಂಡೆ ನಾನು.

---

"ಏ ರಮೇಶ, ಗುಂಡು ಹಾಕಿ ಮನೆಗೆ ಹೋದಾಗಲೆಲ್ಲಾ ನನ್ನ ಹೆಂಡತಿ ಜಗಳ ಮಾಡ್ತಾಳೆ. ಜೀವನ ಬೇಸರವಾಗಿ ಬಿಟ್ಟಿದೆ. ನೀನು ಹ್ಯಾಗೆ ನಿಭಾಯಿಸ್ತೀಯ ?"



# ಫೇಸ್ ಬುಕ್ಕಿನ ಸ್ನೇಹಿತ........

- ಎಚ್. ಗೋಪಾಲಕೃಷ್ಣ

**ಹೋ**ದ ವಾರ ನಮ್ಮ ಶೇಷಪ್ಪ ಅವರ ಜತೆಗೆ ಒಬ್ಬ ತರುಣನನ್ನ ಕರೆದುಕೊಂಡು ನಮ್ಮ ಏರಿಯಾದ ಪ್ರದಕ್ಷಿಣೆ ಮಾಡುತ್ತಾ ಇದ್ದರು. ಅವರ ಸಂಗಡ ನನ್ನನ್ನೂ ಬಲವಂತವಾಗಿ ಕರೆದುಕೊಂಡು ಹೋಗಿದ್ದರು.

ಬನ್ರೀ ತಮಾಷೆ ನೋಡೀರಂತೆ ಅಂತ ಕೂಗಿದ್ದರು ಮತ್ತು ಬರಲೇ ಬೇಕು ಅಂತ ಒತ್ತಾಯ ಬೇರೆ ಹಾಕಿದ್ದರು.

ಶೇಷಪ್ಪ ಅವರಿಗೆ ಈಗ ಸುಮಾರು ಎಪ್ಪತ್ತರ ಆಸುಪಾಸು. ಇನ್ನೂ ಜೀವನಾಸಕ್ತಿಯನ್ನ ಅವರ ದೇಹದ ಕಣಕಣದಲ್ಲೂ ತುಂಬಿಕೊಂಡಿರುವವರು ಮತ್ತು ನಮ್ಮ ಎಲ್ಲರ ಜತೆಗೆ ತುಂಬಾ ಸುಲಭವಾಗಿ ಬೆರೆಯುವ ಮನೋಭಾವ ಹೊಂದಿರುವವರು. ಕೆಲವರಿಗೆ ಅವರು ಚೆಲ್ಲು ಚೆಲ್ಲು ಅಂತ ಅನಿಸುವುದೂ ಉಂಟು. ಇದಕ್ಕೆ ಕಾರಣ ಅವರ ವೇಷ ಭೂಷಣ! ಜೀನ್ಸ್ ಪ್ಯಾಂಟು ಟೀಷರ್ಟು ತೊಟ್ಟು ಅವರು ರಸ್ತೆಯಲ್ಲಿ ನಡೆಯುವುದನ್ನು ತುಂಟ ಕಣ್ಣುಗಳಿಂದ ನೋಡುವ ಕೆಲವರು ನೋಡ್ರೀ ಶೇಷಪ್ಪ ಇಷ್ಟು ವಯಸ್ಸಾಗಿದೆ ಇನ್ನೂ ಆಥರಹ ಬಟ್ಟೆ ಹಾಕ್ಕೋತಾರೆ.... ಅಂತ ಕೊಂಚ ಹೊಟ್ಟೆಕಿಚ್ಚಿನಿಂದಲೂ ಕೊಂಚ ಅಭಿಮಾನದಿಂದಲೂ ಪಿಸುಗುಡುವುದುಂಟು.

ಏತಕ್ಕೆ ಪಿಸುಗುಡುತ್ತಾರೆ ಅಂದರೆ ಶೇಷಪ್ಪನ ಕಿವಿಗೆ ಇವರ ಈ ಮಾತುಗಳು ಬಿದ್ದರೆ ಆತ ಇವರ ಜೀವನ ಜಾಲಾಡಿಬಿಡುತ್ತಾರೆ! ಇದೇ ಕಾರಣ ಇರಬಹುದು ಇವರು ನಮ್ಮಿಂದ ಒಂದು ರೀತಿಯ ಭಯ ಮಿಶ್ರಿತ ಪ್ರೀತಿಯನ್ನು ಗಳಿಸಿಕೊಂಡಿದ್ದಾರೆ. ಈ ಕಾರಣದಿಂದಲೇ ಅವರು ಯಾವಾಗಲಾದರೂ ನನ್ನ ಸಹಾಯ ಅಪೇಕ್ಷಿಸಿದರೆ ನಾನು ಇಲ್ಲ ಅಂತ ತಲೆಯಾಡಿಸದೇ ಅವರ ಜತೆ ಸೇರುತ್ತೇನೆ ಮತ್ತು ಅವರ ರೀತಿಯಲ್ಲೇ ಬದುಕಿನಲ್ಲಿ ಉತ್ಸಾಹವನ್ನು ಉಳಿಸಿಕೊಳ್ಳುವ ಯೋಜನೆಯನ್ನು ಹಾಕುತ್ತೇನೆ.

ನೋಡ್ರೀ ಇವರ ಹೆಸರು ಮಹದೇವ ಅಂತ ನನಗೆ ಫೇಸ್ ಬುಕ್ಕಿಂದ ಪರಿಚಯ ಆದೋರು, ಅವರಿಗೆ ನಮ್ಮ ಏರಿಯಾ ತೋರಿಸೋಕ್ಕೆ ಕರೆದುಕೊಂಡು ಬಂದಿದ್ದೀನಿ ಅಂತ ಆ ಮಹದೇವನನ್ನ ನನಗೆ ಪರಿಚಯ ಮಾಡಿಸಿದರು. ಇವರು ನಮ್ಮ ಏರಿಯಾದೋರೇ ಸುಮಾರು ವರ್ಷದಿಂದ ಇಲ್ಲಿದ್ದಾರೆ, ಇವರ ಬಗ್ಗೆ ಆಮೇಲೆ ಅವರು ಎದುರಿಗೆ ಇಲ್ಲದೇ ಇರಬೇಕಾದರೆ ನಿಮಗೆ ಹೇಳ್ತೀನಿ ಅಂತ ನನ್ನ ಪರಿಚಯವೂ ಆಯಿತು. ಶೇಷಪ್ಪನವರ ಇಂತಹ ಮಾತಿನಿಂದ ನಮಗೆ ಯಾರಿಗೂ ಬೇಸರ ಆಗಲ್ಲ, ಇದಕ್ಕೆ ಕಾರಣ ಅಂದರೆ ಯಾರ ಬಗ್ಗೆಯೂ ಅವರು ಕೆಟ್ಟದ್ದು ಅನ್ನಬಹುದಾದ ಮಾತೇ ಆಗಲೀ ಅಭಿಪ್ರಾಯವನ್ನೇ ಆಗಲಿ ಇಟ್ಟುಕೊಂಡಿಲ್ಲ ಮತ್ತು ಯಾರನ್ನೇ ಕುರಿತು ಹೇಳಿದರೂ ಹೇಗೆ ಹೇಳ್ತಾರೆ ಅಂದರೆ ಮರೆಯಲ್ಲಿ ನಿಂತು ನೀವು ಏನಾದರೂ ಅವರ ಮಾತು ಕೇಳಿಸಿಕೊಂಡಿದ್ದರೆ ಅಬ್ಬಾ ನನಗೆ ಇಷ್ಟೊಂದು ಒಳ್ಳೆಯ ಗುಣಗಳು ಇವೆಯೇ ಅಂತ ಮೂಗಿನ ಮೇಲೆ ಬೆರಳು ಇಟ್ಟುಕೊಳ್ಳಬೇಕು ಹಾಗೆ !

ಮಹದೇವನ ಜತೆಗೆ ಮೊದಲನೇ ಬ್ಲಾಕಿಗೆ ಹೋದೆವು, ಅಲ್ಲಿ ಚಿಕ್ಕ ಗೂಡಂಗಡಿಗೆ ನಡೆದರು. ಅಂಗಡಿಯಲ್ಲಿ ರಿಟೈರಾದ ಸುಮಾರು ಗಂಡಸರು ಸುತ್ತ ನಿಂತು ಮಾತು ಕಥೆಯಲ್ಲಿ ನಿರತರಾಗಿದ್ದರು.

ನೋಡಪ್ಪಾ ದೊರೆ ಈಗ ಏಳು ಗಂಟೆ. ಇವರೆಲ್ಲಾ ಪ್ರತಿದಿವಸ ಇಲ್ಲಿ ಸೇರ್ತಾರೆ, ಒಂದು ಕಪ್ಪು ಕಾಫಿ ಹಾಕ್ತಾ ಜಗತ್ತಿನ ವಿಷಯ ತಿಳ್ಕೋತಾರೆ.... ಅಂತ ಆ ಗುಂಪಿನ ಪರಿಚಯ ಮಾಡಿಸಿದರು.

ರಸ್ತೆಯ ಮೂಲೆಗೆ ಬಂದರು ಅಲ್ಲೂ ಕೆಲವು ಹಿರಿಯರ ಗುಂಪು – ನೋಡು ಇವರೆಲ್ಲಾ ಬೆಳಿಗ್ಗೇನೇ ಇಲ್ಲಿ ಸೇರಿಕೊಂಡು ರಸ್ತೆ ಕಸ ಸರಿಯಾಗಿ ಗುಡಿಸಿದಾರಾ ರೋಡಿನಲ್ಲಿ ಎಲ್ಲರ ಮನೇಲೂ ಆರೋಗ್ಯ ಇದೆಯಾ ಅಂತ ವಿಚಾರಿಸಿಕೊಂಡು ಮುಂದಿನ ಕ್ರಮ ತಗೋತಾರೆ.

ಒಂದನೇ ಬ್ಲಾಕಿನ ಬಸ್ ಸ್ಟಾಪಿಗೆ ಬಂದೆವು. ಅಲ್ಲೂ ಒಂದು ಗುಂಪು. ಇವರೆಲ್ಲಾ ಅವರ ವಯಸ್ಸಿನಲ್ಲಿ ಆಟಗಾರರಾಗಿದ್ದೋರು. ಕೆಲವು ಪುಟ್ಟ ಮಕ್ಕಳಿಗೆ ಅವರಿಗೆ ತಿಳಿದಿರೋ ಆಟಗಳನ್ನ ಹೇಳಿಕೊಡ್ತಾರೆ. ನೋಡು ಇವರು ರಾಜ್ಯಕ್ಕೆ ಕಬಡಿ ಆಡ್ತೋರು, ಇವರು ಯೂನಿವರ್ಸಿಟಿಗೆ ಕ್ರಿಕೆಟ್ ಆಡ್ತೋರು, ಇವರು ನ್ಯಾಷನಲ್ಸ್‌ಗೆ ಬ್ಯಾಡ್ ಮಿಂಟನ್ ಆಡ್ತೋರು.... ಅಂತ ಅಲ್ಲಿ ಇದ್ದ ನಮ್ಮ ಏರಿಯಾದ ಖ್ಯಾತ ಮಾಜಿ ಕ್ರೀಡಾಪಟುಗಳನ್ನು ಪರಿಚಯಿಸಿದರು. ಎಲ್ಲಾ ಇಲ್ಲಿ ಸೇರಿ ಮುಂದಿನ ವಾರ ಆರಂಭ ಆಗ್ತಿರೋ ಕೋಚಿಂಗ್ ಕ್ಯಾಂಪಿಗೆ ಏನೇನು ಸಾಮಗ್ರಿಗಳು ಬೇಕೋ ಅದರ ಬಗ್ಗೆ ಪಟ್ಟಿ ಮಾಡ್ತಾ ಇದಾರೆ, ಅದಕ್ಕೆಲ್ಲಾ ಬೇಕಾದ ದುಡ್ಡು ಅವರೇ ಹಾಕ್ಕೋತ್ತಾರೆ. ಒಂದು ರೀತಿ ಖುಷಿ ಅವರಿಗೆ ಮಕ್ಕಳಿಗೆ ತರಬೇತಿ ನೀಡೋಕ್ಕೆ...

ಕೆನರಾ ಬ್ಯಾಂಕಿನ ಮುಂದೆ ಬಂದಿದ್ದೆವು. ಸಮಯ ಎಂಟರ ಹತ್ತಿರ. ಮೊಮ್ಮಕ್ಕಳನ್ನ ಕೈಯಲ್ಲಿ ಹಿಡಿದು ಸುಮಾರು ಜನ ಅರವತ್ತು ಎಪ್ಪತ್ತರ ಆಸುಪಾಸಿನವರು ಸ್ಕೂಲು ಬಸ್ಸಿಗೆ ಕಾಯ್ತಾ ನಿಂತಿದ್ದರು. ನೋಡು ಇವರೆಲ್ಲಾ ದೊಡ್ಡದೊಡ್ಡ ಹುದ್ದೇನಲ್ಲಿ ಇದ್ದವರು, ಈಗಲೂ ಮನೆ ಕೆಲಸಕ್ಕೆ ಜನಗಳನ್ನ ದಂಡಿಯಾಗಿ ಇಟ್ಕೊಂಡಿದ್ದಾರೆ, ಆದರೂ ಮೊಮ್ಮಕ್ಕಳನ್ನ ಸ್ಕೂಲಿನ ಬಸ್ಸಿಗೆ ಬಿಡೋಕ್ಕೆ ಅವರೇ ಯಾಕೆ ಬಂದಿದ್ದಾರೆ ಗೊತ್ತಾ? ಅವುಗಳ ಮೇಲಿರೋ ಪ್ರೀತಿ. ನೋಡು ಅವರಲ್ಲೇ ಕೆಲವರು ಹುಡುಗರನ್ನ ಶಿಸ್ತಿನಿಂದ ಕ್ಯೂನಲ್ಲಿ ನಿಲ್ಲಿಸ್ತಾ ಇದ್ದಾರೆ ಕಾಣಿಸ್ತಾ? ಮಹದೇವ ತಲೆಯಾಡಿಸಿದ. ಅವನ ಮುಖದಲ್ಲಿ ಅದೇನೋ ಗೊಂದಲ ಮತ್ತು ಇಂಗು ತಿಂದ ಮನೋಭಾವ ಗೋಚರವಾಗುತ್ತಿತ್ತು. ಏನಿದು ಅಂತ ನಾನೂ ಆಶ್ಚರ್ಯ ಪಡುತ್ತಾ ಅವರ ಜತೆ ಮುಂದೆ ಹೆಜ್ಜೆ ಹಾಕಿದೆ.

ಕೆನರಾ ಬ್ಯಾಂಕಿನಿಂದ ಬಲಕ್ಕೆ ತಿರುಗಿದರು. ಮೂಲೆಯಲ್ಲಿ ಒಂದು ಅಜ್ಜಿ ಕೈಯಲ್ಲಿ ಪ್ಲಾಸ್ಟಿಕ್ ಚೀಲ ಹಿಡಿದು ಪಾರ್ಕಿನ ಒಳಗೆ ಹೊರಟಿತ್ತು. ನೋಡು ಅವರು ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದೋರು. ಪಾರ್ಕಿನ ಒಳಗೆ ಪ್ಲಾಸ್ಟಿಕ್ ಆಯ್ದು ಅದನ್ನ ಆಚೆ ಬಿಸಾಡೋಕ್ಕೆ ಅವರು ಹೋಗ್ತಿರೋದು. ಬಾ ಒಳಗೆ ಹೋಗೋಣ.... ಅಂತ ಮಹದೇವನನ್ನ ಪಾರ್ಕಿನ ಒಳಗೆ ಕರೆತಂದರು. ಒಂದು ಮೂಲೆಯಲ್ಲಿ ಸುಮಾರು ಮೂವತ್ತು ಜನ ಬೇರೆ ಬೇರೆ ವಯೋಮಿತಿಯವರು ದುಂಡಾಗಿ ನಿಂತು ವ್ಯಾಯಾಮ ಮಾಡ್ತಾ ಇದ್ದರು. ಅವರಿಗೆ ಗೈಡ್ ರೀತಿ ಮತ್ತೊಬ್ಬರು ಇವರೂ ಎಪ್ಪತ್ತರ ಆಸುಪಾಸಿನವರು ನಿಂತು ಮಾನಿಟರ್ ಕೆಲಸ ಮಾಡುತ್ತಿದ್ದರು. ನೋಡು ಇವರಲ್ಲಿ ಸುಮಾರು ಜನಕ್ಕೆ ವಯಸ್ಸಿಗೆ ಸಹಜವಾದ ರೋಗಗಳು ಇವೆ. ಸಕ್ಕರೆ ರೋಗ, ಬಿ.ಪಿ. ಹೀಗೆ. ವ್ಯಾಯಾಮ ಹೇಳಿಕೊಡ್ತಾ ಇದ್ದಾರಲ್ಲಾ ಅವರು ನಮ್ಮ ಯೋಗದ ಮಾಸ್ಟರು. ಇವರಿಗೆಲ್ಲಾ ಬೆಳಿಗ್ಗೇನೇ ಸೇರಿಸಿ ವ್ಯಾಯಾಮ ಮಾಡಿಸ್ತಾರೆ. ಬೇಕಿದ್ರೆ ನಾಳೆ ನೀನೂ ಬಂದು ಸೇರ್ಕೊ......

ಪಾರ್ಕಿನ ಒಳಗೆ ಕೆಲವರು ವಾಕಿಂಗ್ ಮಡೋರು, ಅಲ್ಲಿನ ಗಿಡಗಳಿಗೆ ನೀರು ಹಾಕೋರು, ಅಲ್ಲಿನ ಕಸ ಕಿತ್ತು ಗುಡ್ಡೆ ಹಾಕೋರು, ಪಾರ್ಥೇನಿಯಂ ಕೀಳ್ತಾ ಇದ್ದೋರು, ಇವರನ್ನೆಲ್ಲಾ ಮಹದೇವನಿಗೆ ತೋರಿಸಿದರು. ನೋಡು ಇವರೆಲ್ಲಾ ಜೀವನದಲ್ಲಿ ಉತ್ತಮವಾದ ದಿನಗಳನ್ನು ಕಂಡಿರೋರು ಮತ್ತು ಈಗಲೂ ಉತ್ತಮವಾಗೇ ಇರೋರು, ಇದನ್ನೆಲ್ಲಾ ಯಾತಕ್ಕೆ ಮಾಡ್ತಾರೆ

ಗೊತ್ತಾ? ಇದರಿಂದ ಅವರ ಮನಸ್ಸಿಗೆ ನೆಮ್ಮದಿ ಸಿಗುತ್ತಂತೆ...

ಮಹದೇವನ ಮುಖ ಕಪ್ಪಿಡ್ತಾ ಇದೆ ಅನಿಸಿತು. ಬೆಳಿಗ್ಗೆಯಿಂದ ನಡೆದಿದ್ದಾನೆ ಅದಕ್ಕೇ ಅಂದುಕೊಂಡೆ. ಪಾರ್ಕಿನಿಂದ ಆಚೆ ಬಂದೆವು. ಬಾ ಮುಂದೆ ಹೋಗೋಣ ಐದನೇ ಬ್ಲಾಕಿನ ಬಸ್ ಸ್ಟಾಪಿಗೆ ಬಂದೆವು. ಅಲ್ಲೊಂದು ಗುಂಪು. ಪೇಪರು ಜೋಡಿಸುತ್ತಾ ಕೂತಿದ್ದವು. ಇನ್ನೂ ರಾಜಣ್ಣ ಬಂದಿಲ್ಲ, ಆಫೀಸು ತೆಗೆದಿಲ್ಲ, ಗಾಳೀಗೆ ಪೇಪರು ಹಾರ್ತಾ ಇದ್ವು...

ನೋಡು ಮಹದೇವ ಇಲ್ಲಿ ನಮ್ಮದು ಲೈಬ್ರರಿ ಇದೆ. ಮನೆಯಿಂದ ಇವರೇ ಪೇಪರು ಮ್ಯಾಗಜೈನು ತಂದು ಹಾಕ್ತಾರೆ. ಸುಮಾರು ನೂರುಜನ ಇದರ ಪ್ರಯೋಜನ ಪಡ್ತಾರೆ.... ಆಫೀಸು ತೆಗೆದಿದ್ದರೆ ಒಳಗೆ ತೋರಿಸ್ತಾ ಇದ್ದೆ...

ಬಾ ಇನ್ನೊಂದು ಮೈದಾನ ಇದೆ ಅಲ್ಲಿಗೆ ಹೋಗೋಣಾ... ಅಂದರು.

ಮಹದೇವ ಸುಸ್ತು ಹೊಡೆದಿದ್ದ.

ಬೇಡ ಸಾರ್ ನಾನು ಹೋಗ್ತೀನಿ... ಅಂತ ತಡಬಡಾಯಿಸಿದ.

ಸರಿ ಹೊರಡು, ನಾನು ಹೇಳಿದ್ದು ನೆನಪಿದೆ ತಾನೇ? ಇವತ್ತೇ ಮನೆಗೆ ಹೋದ ಕೂಡಲೇ ಆ ಕೆಲಸ ಆಗಬೇಕು.... ಅಂತ ಒಂದು ರೀತಿಯಲ್ಲಿ ಅಧಿಕಾರಯುತವಾಗಿ ಅವನಿಗೆ ಹೇಳಿದರು. ಆತ ತಲೆಯಾಡಿಸಿ ಅಲ್ಲಿಂದ ಓಡಿದ..

ಬಾರಯ್ಯಾ ಕಾಫಿ ಕುಡಿಯೋಣಾ ಅಂದರು. ಹೋಟಲ್ಲಿನ ಒಳಹೊಕ್ಕೆವು. ಮಾಣಿಗಳ ಜತೆ ಕ್ಷೇಮ ಸಮಾಚಾರವಾಯಿತು. ಕುತೂಹಲ ತಡೆಯಲು ಆಗದೇ ಯಾರಿವನು ಮಹದೇವ? ಅಂತ ಕೇಳಿದೆ.

ನನಗೆ ಫೇಸ್ ಬುಕ್ ಸ್ನೇಹಿತ ಅಪ್ಪ ಆತ. ಮನುಷ್ಯ ಅವಾಗವಾಗ ಅದೇನೇನೋ ಬರೀತಾನೆ, ಬುದ್ಧಿವಂತ ಅಂತ ಅಂದುಕೊಂಡಿದ್ದೆ. ಕಳೆದ ವಾರ ಅವನು ಶತ ದಡ್ಡ ಅಂತ ಗೊತ್ತಾಯಿತು. ಯಾರೋ ಒಬ್ಬ ಅವರ ಏರಿಯಾದ ನಾಗರಿಕ ಸವಲತ್ತುಗಳಿಗೆ ನಿವೃತ್ತರಾಗಿರೋರ ಸಹಾಯ ಪಡೀರಿ ಅಂತ ಕಾಮೆಂಟ್ ಮಾಡಿದ. ಇವನು ರಿಟೈರು ಆಗಿರೋರು ಯಾವ ಪ್ರಯೋಜನಕ್ಕೂ ಬರದೋರು, ಟೀ ಕುಡ್ಕೊಂಡು ಕಾಲ ಕಳೀತಾರೆ ಅಂತ ಬರೆದ. ಅದಕ್ಕೇ ಅವನನ್ನ ಇಲ್ಲಿಗೆ ಕರೆದುಕೊಂಡು ಬಂದೆ...

ಅಲ್ಲ ಶೇಷಪ್ಪ ನೀವು ಇನ್ನೊಂದು ಮರೆತಿರಿ.... ಅಂದೆ.

ತಲೆಎತ್ತಿ ಏನು ಅನ್ನೊ ಹಾಗೆ ನೋಡಿದರು.

ನೀವು ತೋರಿಸಿದ ಕಡೆ ಎಲ್ಲಾ ಬರೀ ಮುದುಕರೇ ಇದ್ದರು. ಹುಡುಗರು ಇರುವ ಸ್ಥಳಗಳನ್ನೇ ತೋರಿಸಲಿಲ್ಲವಲ್ಲಾ ನೀವು?

ಅದನ್ನೂ ತೋರಿಸಬೇಕಿತ್ತು. ಬೆಳಿಗ್ಗೆ ಬೆಳಿಗ್ಗೆ ನಿಮಗೆ ಯಾವ ಹುಡುಗ ರಸ್ತೆಯಲ್ಲಿ ನಮ್ಮ ರೀತಿ ಸಿಕ್ತಾನೆ? ಎಲ್ಲವೂ ಕಾಲೇಜು ಕೆಲಸ ಅಂತ ಹೋಗಿರುತ್ವೆ.... ಅದೂ ಅಲ್ದೇ ಅವನು ಮುದುಕರು ಹೋಪ್ಲೆಸ್ ಅಂದಿದ್ದ ಅಲ್ವಾ? ಅವನಂಥಾ ಯುವಕರು ಹೋಪ್ಲೆಸ್ ಅನ್ನೋದು ಅವನಿಗೇ ತಿಳಿದಿರುತ್ತೆ ಈ ಸಮಯಕ್ಕೆ ಬಿಡು...

ಶೇಷಪ್ಪ ಎಂಥಾ ಜಾಣರು ನೀವು ಅಂತ ಹೇಳಬೇಕು ಅನಿಸಿತು, ಆದರೆ ಹೇಳಲಿಲ್ಲ.... ಅವರ ತಲೆ ತಿರುಗಿದರೆ.....!

ಬ್ರೇಕಿಂಗ್ ನ್ಯೂಸ್

# ಶುದ್ಧ ಅಸುದ್ದಿ

- ಎಚ್ಚೆನ್ಎ

## ಮೈ, ಮುಖ ರಿಪೇರಿ

**ಮ**ದುವೆಗಳು ಸ್ವರ್ಗದಲ್ಲಿ ನಡೆಯುತ್ತದೆ ಎನ್ನುತ್ತಾರೆ. ಆದರೆ ಛತ್ರಗಳು ಇರುವುದು ಭೂಮಿಯಲ್ಲಿ, ಡೇಟ್ ನಿರ್ಧರಿಸುವವರು ಪುರೋಹಿತರು. ಅದಿರಲಿ ಮದುವೆ ಮಂಟಪದಲ್ಲಿ ಗಂಡು ಹೆಣ್ಣು ಚಂದವಾಗಿ ಕಾಣಿಸಿಕೊಳ್ಳಬೇಡವೆ? ಮದುವೆಯ ದಿನದಂದೇ ಬೊಕ್ಕತಲೆಯ ವರ, ದಢೂತಿ ವಧು ಹಸೆಮಣೆ ಏರಿದರೆ ಏನು ಚೆನ್ನ? ಅದರ ಬದಲು ಮೊದಲೇ ಒಂದಿಷ್ಟು ರಿಪೇರಿ ಮಾಡಿಸಿಕೊಂಡರೆ ಹೇಗೆ? ಇದೀಗ ಇದೂ ಸಾಧ್ಯ. ಆದರೆ ದುಡ್ಡು ಇರಬೇಕಷ್ಟೆ. ಉಳ್ಳವರು ತಾವು ಚೆಂದಾಗಿ ಕಾಣಿಸಿಕೊಳ್ಳಲು ಮೈಮುಖ ರಿಪೇರಿ ಮಾಡಿಸಿಕೊಳ್ಳಲು ತೊಡಗಿದ್ದಾರೆ ಎಂದು ಸುದ್ದಿ. ಬೊಕ್ಕತಲೆಯವರು ಕೂದಲು ಬೆಳೆಸಿಕೊಳ್ಳಲು, ದಪ್ಪಗಿರುವವರು ಸಣ್ಣಗಾಗಲು, ದೀಪಿಕಾ ಪಡುಕೋಣೆಯಂತೆ ಮೂಗಿರಲು ಬಯಸುವವರು ತಮ್ಮ ಮೂಗಿಗೊಂದಿಷ್ಟು ಸರ್ಜರಿ ಮಾಡಿಸಿಕೊಳ್ಳಲು ಅನೇಕ ವಧು ವರರು ಹೊರಟಿದ್ದಾರಂತೆ. ಇಂತಹವರಿಗೆ ರಿಪೇರಿ ಮಾಡುವವರಿಗೆ ಸುಗ್ಗಿಯೋ ಸುಗ್ಗಿ. ಇದುವರೆಗೆ ಮದುವೆಯ ನಂತರ ರಿಸೆಪ್ಷನ್ ಸಮಯದಲ್ಲಿ ವಧೂವರರು ಬ್ಯೂಟಿ ಪಾರ್ಲರ್‌ಗಳಿಗೆ ತೆರಳಿ ಕೇವಲ ಒಂದೆರಡು ತಾಸು ತಡವಾಗಿ ಬಂದು ಆರತಕ್ಷತೆಯ ಕುರ್ಚಿಗಳನ್ನು ಅಲಂಕರಿಸುತ್ತಿದ್ದರು. ಈಗ ಮದುವೆಗೆ ತಿಂಗಳುಗಳ ಮೊದಲೇ ರಿಪೇರಿ ಪಾರ್ಲರ್‌ಗಳಿಗೆ ಅಲೆದಾಟ ಶುರುವಾಗಿದೆ.

★★★

## ಗಿಣಿ ಸಾಕ್ಷಿ

**ಗಿ**ಣಿ ಮಾತನಾಡುತ್ತದೆ. ನಾಯಿ ಕೊಲೆಗಾರರನನ್ನು ಹಿಡಿಯುತ್ತದೆ. ಇದೇನು ಸುದ್ದಿಯೇ ಅಲ್ಲ ಬ್ರೇಕಿಂಗ್ ನ್ಯೂಸ್ ಅಂತೂ ಮೊದಲೇ ಅಲ್ಲ. ಆದರೆ ಗಿಣಿ ನಾಯಿಯಂತೆ ಪೊಲೀಸರಿಗೆ ನೆರವಾದರೆ? ಆಗ್ರಾದ ವರದಿಯ ಪ್ರಕಾರ ಸಾಕಿದ ಗಿಣಿಯೊಂದು ತನ್ನ ಒಡತಿಯ ಕೊಲೆಯ ರಹಸ್ಯವನ್ನು ಭೇದಿಸಲು ನೆರವಾಗಿದೆ. ಕೊಲೆಗಾರನನ್ನು ಹಿಡಿಯಲು ಪೊಲೀಸರು ಪ್ರಯತ್ನಿಸುತ್ತಿದ್ದಾಗ ಅವರಿಗೊಂದು ಸಲಹೆ ಕೊಲೆಯಾದ ವ್ಯಕ್ತಿಯ ಸಂಬಂಧೀಕರಿಂದ ಬಂದಿತು. ಗಿಣಿಯನ್ನು ವಿಚಾರಿಸಿ. ಗಿಣಿ ಸಾಕ್ಷಿಯಾದ್ದರಿಂದ ಪೊಲೀಸರು ಅದನ್ನು ಏರೋಪ್ಲೇನ್ ಹತ್ತಿಸಲಿಲ್ಲ, ಬದಲಿಗೆ ವಿಚಾರಿಸುವ ಎಂದು ಹೊರಟರು. ಗಿಣಿ ಮತ್ತು ಅದರ ಒಡತಿ ಯಾವಾಗಲೂ ಒಟ್ಟಿಗಿರುತ್ತಿದ್ದುದರಿಂದ ಅದು ಕೊಲೆಯನ್ನು ನೋಡಿರಲೇಬೇಕು ಎಂಬುದು ತರ್ಕವಾಗಿತ್ತು. ಗಿಣಿಯ ಮುಂದೆ ಸಂದೇಹಾಸ್ಪದ ವ್ಯಕ್ತಿಗಳ ಹೆಸರನ್ನು ಹೇಳಲು ಪೊಲೀಸರು ನಿರ್ಧರಿಸಿದರು. ಆ ಪಟ್ಟಿಯಲ್ಲಿ ಕೊಲೆಯಾದ ಮಹಿಳೆಯ ಸಂಬಂಧೀಕನ ಹೆಸರೂ ಸೇರಿತ್ತು. ಆ ಹೆಸರು ಗಿಣಿಯ ಮುಂದೆ ಹೇಳಿದ ತಕ್ಷಣ ಅದು ಅವನೇ ಕೊಲೆಗಾರ..

ಕೊಲೆಗಾರ.. ಎಂದು ಉಲಿಯಿತಂತೆ. ಕೊಲೆಗಾರನೂ ತನ್ನ ತಪ್ಪನ್ನು ಒಪ್ಪಿಕೊಂಡನಂತೆ. ಗಿಣಿ ಭವಿಷ್ಯ ಮಾತ್ರ ಹೇಳುವುದಿಲ್ಲ ಸಾಕ್ಷಿ ಸಹ ಹೇಳುತ್ತದೆ.

★★★

## ಹೀಗೊಂದು ಯಾತ್ರೆ

**ಚೀ**ನಾದ ಚಹಾ ಬೆಳೆಗಾರನೊಬ್ಬ ಮೇಲೆ ಹೋಗಲು ಒಂದು ಲಕ್ಷ ಡಾಲರ್ ನೀಡಿ ಸ್ಥಳ ಕಾದಿರಿಸಿಕೊಂಡಿದ್ದಾನಂತೆ. 2016ರಲ್ಲಿ ಪಯಣ. ಕ್ಷಮಿಸಿ. ಮೇಲೆ ಹೋಗಲು ಎಂದಾಗ ನೀವು ಅಪಾರ್ಥ ಮಾಡಿಕೊಳ್ಳಬೇಕಿಲ್ಲ. ಅದು ಅಂತರಿಕ್ಷ ಯಾನಕ್ಕೆ ಅಡ್ವಾನ್ಸ್ ಬುಕಿಂಗ್. ಉಪಗ್ರಹದಲ್ಲಿ ಕುಳಿತು 100 ಕಿ.ಮೀ. ಮೇಲೆ ಜಿಗಿದು ಅಲ್ಲಿಂದ ನಮ್ಮ ಇರುವುದೊಂದೇ ಭೂಮಿಯತ್ತ ಆರೆಂಟು ನಿಮಿಷ ಕಣ್ಣು ಹಾಯಿಸುವ ಯೋಜನೆ ಆತನದ್ದು. ನಾವೆಲ್ಲ ಭೂಮಿಯ ಮೇಲೆ ಸುತ್ತಾಡಿದರೆ ಅವನು ಮೇಲಿನಿಂದ ನಮ್ಮತ್ತ ನೋಡಲು ಬಯಸುವ ಸಾಹಸಿ. ಇಂತಹ ಬಾಹ್ಯಾಕಾಶಗಳ ಪ್ರವಾಸ ಈಗ ಹಣವಿರುವವರಿಗೆ ಲಭ್ಯ. ಮುಂದಿನ ವರ್ಷವೇ ಹೋಗಲು ಬಯಸುವವರಿಗೆ 95,000 ಡಾಲರ್ ಚಾರ್ಜು. ಆದರೆ ಸುಮಾರು 60 ಕಿಮೀ ಮಾತ್ರ ಮೇಲೆ ಹೋಗಲು ಸಾಧ್ಯ. ಮೇಲೆ ಮೇಲೆ ಹೋದಂತೆ ಚಾರ್ಜು ಹೆಚ್ಚಾಗುತ್ತದೆ. ಈಗಾಗಲೇ ಸುಮಾರು 30 ಮಂದಿ ಚೀನೀಯರು ಮುಂಗಡ ಹಣ ನೀಡಿ ಸ್ಥಳ ಕಾಯ್ದಿರಿಸಿದ್ದಾರೆಂದು ಸುದ್ದಿ. ಸ್ಟಡಿ ಟೂರ್ ಎಂದು ಹೇಳಿ ಪದೇ ಪದೇ ವಿದೇಶ ಯಾತ್ರೆ ಕೈಗೊಳ್ಳಲು ಬಯಸುವ ನಮ್ಮ ಶಾಸಕರು ಇಂತಹ ಯಾತ್ರೆ ನಮಗೂ ಒದಗಿ ಬರಲಿ ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಿದರೆ ಅಚ್ಚರಿ ಪಡಬೇಕಿಲ್ಲ. ಅವರು ಹೋಗಲಿ ಬಿಡಿ ವಾಪಸಾಗದಿದ್ದರೆ ನಮಗೇ ಒಳಿತು.

★★★

## ನಾಸಿಕ ಪುರಾಣ

**ಅ**ನೇಕರು ಅನೇಕ ವಿಷಯಗಳಲ್ಲಿ ಮೂಗು ತೂರಿಸುತ್ತಾರೆ. ಆದರೆ ಇವರು ತಮ್ಮ ಮೂಗನ್ನು ಕಂಪ್ಯೂಟರ್ ಕೀಬೋರ್ಡಿನಲ್ಲಿ ತೂರಿಸುತ್ತಾರೆ. ವಾಸನೆ ನೋಡಲು ಅಲ್ಲ, ಟೈಪ್ ಮಾಡಲು. ನಿಜ ಸ್ವಾಮಿ. ಎಲ್ಲರೂ ಕೈಬೆರಳು ಉಪಯೋಗಿಸಿ ಟೈಪ್ ಮಾಡಿದರೆ ಹೈದರಾಬಾದಿನ 23 ವರ್ಷದ ಮಹಮದ್ ಹುಸೇನ್ ಮೂಗಿನಿಂದ ಟೈಪ್ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದು ದಾಖಲೆ ಮಾಡುವಷ್ಟು ವೇಗದಲ್ಲಿ ಟೈಪ್ ಮಾಡುತ್ತಾರೆ. 2012ರಲ್ಲಿ ಕೇವಲ 3.43 ಸೆಕೆಂಡುಗಳಲ್ಲಿ ಇಂಗ್ಲಿಷಿನ ಎಲ್ಲ 26 ಅಕ್ಷರಗಳನ್ನೂ ಬೆರಳಿನಿಂದ ಟೈಪ್ ಮಾಡಿ ಅಚ್ಚರಿ ಮೂಡಿಸಿದ್ದ ಹುಸೇನ್ ಇದೀಗ ಮೂಗು ಟೈಪಿಸ್ಟ್ ಆಗಿ ಗಿನ್ನಿಸ್ ದಾಖಲೆ ಪುಸ್ತಕ ಸೇರಲು ಹವಣಿಸಿದ್ದಾರೆ. ಆದರೆ ನಮ್ಮ ಸಮಸ್ಯೆ ಏನೆಂದರೆ ಹೀಗೆ ಟೈಪ್ ಮಾಡುವಾಗ ಆಕ್ಷೀ.. ಬಂದರೆ ಏನು ಮಾಡುವುದು? ಏನೆಂದಿರಿ? ಅದು ಹುಸೇನರ ಸಮಸ್ಯೆ ಎಂದಿರಾ? ಹೋಗಲಿ ಬಿಡಿ. ಅವರ ವಿಷಯದಲ್ಲಿ ನಾವೇಕೆ ಮೂಗು ತೂರಿಸಬೇಕು?